ಡಾ: ವಿ.ಎಸ್.ಆಚಾರ್ಯ: ಮಾನ್ಯ ಅಧ್ಯಕ್ಷರೆ, ನಮ್ಮ ಇಲಾಖೆಯಿಂದ ವರ್ತಮಾನ ಬಂದಿದೆ. ಅದನ್ನು ನಾನು ತಿಳಿಸಿದ್ದೇನೆ, ಮಾನ್ಯ ಜಿಲ್ಲಾಧಿಕಾರಿಯವರಿಂದ ಮತ್ತು ತಮಿಳುನಾಡಿನಿಂದ ಕೆಲವು ಮಾಹಿತಿಗಳನ್ನು ಪಡೆದುಕೊಂಡ ನಂತರ ಅದಕ್ಕೆ ಬೇಕಾದಂಥ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ. ಅತಿ ಬಿಗಿಯಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

5. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ:

ಅಧ್ಯಕ್ಷರು : ಮಾನ್ಯ ವಿರೋಧಪಕ್ಷದ ನಾಯಕರೆ, ಮಾತನಾಡಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, Chief Secretary ಯವರು ಈ ಸದನಕ್ಕೆ ಬರುವುದಿಲ್ಲ, ಯಾರು important Secretaryಗಳು ಇದ್ದಾರೆ, ಅವರೂ ಈ ಸಭೆಗೆ ಬರುವುದಿಲ್ಲ. ಇಲ್ಲಿ Governor address ಮೇಲೆ ಮಾತನಾಡುವಾಗ .. ..

ಶ್ರೀ ಆರ್. ರೋಷನ್‌ಬೇಗ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು Governor's address ಮೇಲೆ ಮಾತನಾಡುವಾಗ ಸದನದಲ್ಲಿ Chief Secretaryಯವರು ಇರಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ: ವರ್ಷಕ್ಕೆ ಒಂದು ಸಾರಿ Governor's address ಅನ್ನು ಮಂಡಿಸುತ್ತೀರಿ. ನಿಮಗೆ ಈ ಬಗ್ಗೆ seriousness ಇಲ್ಲದೇ ಹೋದರೆ ಏನು ಮಾಡುವುದು ?

ಶ್ರೀ ಬಿ.ಎಸ್. ಯಡಿಯೂರಪ್ಪ: ನಾನು ಅವರೊಂದಿಗೆ ಮೀಟಿಂಗ್‌ನಲ್ಲಿದ್ದೆ, ಈಗ ಬರುತ್ತಾರೆ.

ಶ್ರೀ ಸಿದ್ದರಾಮಯ್ಯ: ನೀವು ಮೀಟಿಂಗ್ ಮಾಡಿ, ನಾವು ನಿಮ್ಮ ಮೀಟಿಂಗ್‌ಗೆ ಅಡ್ಡ ಬಂದಿದ್ದೆವಾ? ಪ್ರತಿ ದಿವಸ ಮಾಡಿ, ಗಂಟೆಗಟ್ಟಲೆ ಮಾಡಿ ನಮ್ಮದು ಏನೂ ತಕರಾರು ಇಲ್ಲ.

ಅಧ್ಯಕ್ಷರು: ಆಯಿತು, ಅವರನ್ನು ಕರೆಸುತ್ತಾರೆ.

11.00 ಪಿ.ಎಂ.

ಶ್ರೀ ಸಿದ್ದರಾಮಯ್ಯ: ಇಲ್ಲಿ ಚರ್ಚೆ ಪ್ರಾರಂಭವಾಗುವಾಗ Senior Officers and Head's of the Departmentಗಳು ಇರಬೇಕಾಗುತ್ತದೆ. ಇಲ್ಲಿ Senior Secretaryಗಳು ಇಲ್ಲದೇ ಹೋದರೆ policy decisionಗಳು ಏನು ಮಾಡುವುದು? ತೀರ್ಮಾನಗಳನ್ನು ಏನು ತೆಗೆದುಕೊಳ್ಳುವುದು? ಏನು ಮಾಡುತ್ತಾರೆ? That is the reason. ಮಾನ್ಯ ರಾಜ್ಯಪಾಲರು ಸಂವಿಧಾನದ ಆಶಯದಂತೆ 2010ನೇ ವರ್ಷದ ಜಂಟಿ ಸದನವನ್ನು ಉದ್ದೇಶಿಸಿ ಭಾಷಣವನ್ನು ಮಾಡಿದ್ದಾರೆ. ಇದು ಜನವರಿ ತಿಂಗಳಲ್ಲೇ ಆಗಬೇಕಾಗಿತ್ತು. ನಿಮಗೆ ಗೊತ್ತಿರುವಂತೆ ನಾವು ಒಂದು ಕಾಯಿದೆಯನ್ನು ಮಾಡಿಕೊಂಡಿದ್ದೇವೆ. ಈ ಮನೆಯಲ್ಲಿ ನಾವು ಕನಿಷ್ಠ 60 ದಿನಗಳು ಸದನ ನಡೆಯಬೇಕೆಂದು ಒಂದು ಕಾಯಿದೆಯನ್ನು ಮಾಡಿಕೊಂಡಿದ್ದೇವೆ. ಆ ಕಾಯಿದೆ ಪ್ರಕಾರ ಜನವರಿಯಲ್ಲಿ ವಿಧಾನಸಭೆ ಹತ್ತು ದಿನಗಳು ನಡೆಯಬೇಕಾಗಿತ್ತು. ನಾವು ಯಾವಾಗ ವರ್ಷದ ಮೊದಲು ಸೇರುತ್ತೇವೆ, ಅವತ್ತೇ ಜಂಟಿ ಸದನವನ್ನು ಉದ್ದೇಶಿಸಿ ಮಾನ್ಯ ರಾಜ್ಯಪಾಲರು ಭಾಷಣ ಮಾಡತಕ್ಕಂಥಾದ್ದು ಸಂವಿಧಾನದ ಆಶಯ. ಆದರೆ ಅದು ಆಗಲಿಲ್ಲ, ಇವರು ಜನವರಿಯಲ್ಲಿ ಅಧಿವೇಶನವನ್ನು ಕರೆಯಲಿಲ್ಲ. ಫೆಬ್ರವರಿ 25ನೇ ತಾರೀಖು ಅಧಿವೇಶನ ಕರೆದು ಮಾನ್ಯ ರಾಜ್ಯಪಾಲರ ಕೈಯಲ್ಲಿ ಭಾಷಣ ಮಾಡಿಸಿದ್ದಾರೆ. ಇವತ್ತು ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಮೂವ್ ಮಾಡಿದಂತಹ ಸುರಪುರದ ಶಾಸಕರಾದ ನರಸಿಂಹನಾಯಕ್‌ರವರೇ ಇಲ್ಲ. ಸೆಕೆಂಡ್ ಮಾಡಿದಂತಹ ನಾರಾಯಣಸ್ವಾಮಿಯವರು ಇಲ್ಲ. ಮೂವ್ ಮಾಡಿದವರೂ ಇಲ್ಲ, ಸೆಕೆಂಡ್ ಮಾಡಿದವರೂ ಇಲ್ಲ. ಒಂದು ರೀತಿಯಲ್ಲಿ ಕಾಟಾಚಾರಕ್ಕೆ ಅವರ ಕೈಯಲ್ಲಿ ಮೂವ್ ಮಾಡಿಸಿದ್ದಾರೆ ಅಷ್ಟೇ. ಅವರಿಗೂ ಪಾಪ ಆಸಕ್ತಿ ಇದ್ದಹಾಗೆ ಇರಲಿಲ್ಲ, ಏಕೆಂದರೆ ಅವರಿಗೆ ಆಸಕ್ತಿ ಇದ್ದಿದ್ದರೆ ಇಲ್ಲಿ ಕುಳಿತಿರಬೇಕಾಗಿತ್ತು. ಅವರು, ನಾವು ನಿರ್ಣಯ ಮೂವ್ ಮಾಡಿದ್ದೇವೆ, ಮಾನ್ಯ ರಾಜ್ಯಪಾಲರ ಭಾಷಣವನ್ನು ಡಿಫೆಂಡ್ ಮಾಡಿಕೊಂಡು ಇಲ್ಲಿ ಭಾಷಣ ಮಾಡಿದ್ದೇವೆ, ಮಾನ್ಯ ರಾಜ್ಯಪಾಲರಿಗೆ ವಂದನೆ ಸಲ್ಲಿಸುವಂತಹ

ಕೆಲಸವನ್ನು ಮಾಡಿದ್ದೇವೆಂದು ಇಬ್ಬರೂ ಇಲ್ಲಿ ಸದನದಲ್ಲಿ ಇರಬೇಕಾಗಿತ್ತು. ಆದರೆ ಇಬ್ಬರೂ ಗೈರು ಹಾಜರಿಯಾಗಿದ್ದಾರೆ. ಇವರ ಕೈಯಲ್ಲಿ ಮಾಡಿಸಿರುವುದು ಒಲ್ಲದ ಮನಸ್ಸಿನವರ ಕೈಯಲ್ಲಿ, ಆಸಕ್ತಿ ಇಲ್ಲದವರ ಕೈಯಲ್ಲಿ ಏನೋ ಮಾತನಾಡಿಸಿದ್ದಾರೆ ಪಾಪ. ಅವರಿಂದ ಬಲಾತ್ಕಾರವಾಗಿ ಮಾತನಾಡಿಸಿದ್ದರೂ ಮಾತನಾಡಿಸಿರಬಹುದು. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸತ್ಯಕ್ಕೆ ದೂರವಾದಂತಹ ವಿಚಾರಗಳೇ ಹೆಚ್ಚು ಇರುವಂಥದ್ದು ಇದೆ. ರಾಜ್ಯದಲ್ಲಿರುವಂತಹ ಜ್ವಲಂತ ಸಮಸ್ಯೆಗಳಿಗೆ ಜನರ ಕಷ್ಟಗಳಿಗೆ ಸ್ಪಂದಿಸತಕ್ಕಂಥ, ಪರಿಹಾರ ಕೊಡತಕ್ಕಂಥ, ಪರಿಹಾರ ಸೂಚಿಸತಕ್ಕಂಥ ಯಾವುದೇ ವಿಚಾರಗಳು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇಲ್ಲ. ಇದು ನಾನು ಹೇಳುವುದಲ್ಲ, ಎಲ್ಲಾ ಮಾಧ್ಯಮದವರೂ ಕೂಡ, editorial ಗಳಲ್ಲಿ ಕೂಡ ಬರೆದಿದ್ದಾರೆ. ಯಾವರೀತಿ ಬರೆಯುತ್ತಾರೆ ಎಂದರೆ ಮಾನ್ಯ ರಾಜ್ಯಪಾಲರ ಭಾಷಣ ಒಂದು ಸಾಂಪ್ರದಾಯಿಕವಾಗಿ ಭಾಷಣ ಮಾಡಿಸಬೇಕು ಎನ್ನುವಂತಹ ರೀತಿಯಲ್ಲಿ ಆ ಮಟ್ಟಕ್ಕೆ ಇದು ಇಳಿಯುತ್ತಿದೆ. ರಾಜ್ಯಪಾಲರ ಭಾಷಣದ ಮೂಲಕ ಈ ಸರ್ಕಾರದ ದೃಷ್ಟಿಕೋನ ಏನು? ಇದರ ಆದ್ಯತೆಗಳು ಏನು? ಈ ಸರ್ಕಾರದ ದೂರದರ್ಶಿತ್ವ ಏನು? ರಾಜ್ಯದ ಅಭಿವೃದ್ಧಿ ಮತ್ತು ಜನರ ಜೀವನದ ಗುಣಮಟ್ಟ ಅಭಿವೃದ್ಧಿಪಡಿಸುವುದಕ್ಕೆ, ಇವರ ನೀತಿ ಏನು? ಇವರ ಆದ್ಯತಾ ಯೋಜನೆಗಳು ಏನು? ಕಾರ್ಯಕ್ರಮಗಳು ಏನು? ಇದು ರಾಜ್ಯಪಾಲರ ಭಾಷಣದಲ್ಲಿ ಬಿಂಬಿತವಾಗಬೇಕು. ರಾಜ್ಯಪಾಲರ ಭಾಷಣವನ್ನು ಸುಮಾರು 32 ಪುಟಗಳಷ್ಟು ಮಾಡಿಸಿದ್ದಾರೆ. ಹಿಂದಿನ ವರ್ಷಕ್ಕಿಂತ ಸ್ವಲ್ಪ ಕಡಿಮೆ ಎಂದರೆ 30–31 ಪುಟಗಳಷ್ಟು ಭಾಷಣ ಮಾಡಿಸಿದ್ದಾರೆ. ನಾವು ಏನೇನು ಮಾಡಿದ್ದೇವೆಂದು ಕೆಲವು ಪಟ್ಟಿಗಳನ್ನು ಕೊಟ್ಟಿರುವುದು ಬಿಟ್ಟರೆ, ದೂರದರ್ಶಿತ್ವದ ಒಂದು vision ಕೂಡ ಈ ಸರ್ಕಾರಕ್ಕೆ ಇದ್ದ ರೀತಿಯಲ್ಲಿ ಕಾಣಿಸುವುದಿಲ್ಲ. ಅವು ಸತ್ಯಕ್ಕೆ ದೂರವಾಗಿವೆ. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಇನ್ನೇನು ಎರಡು ವರ್ಷಗಳಾಗುತ್ತಿವೆ. ಇದೇನು ಮೊದಲನೆ ವರ್ಷ ಅಲ್ಲ. ಏನೋ ಮೊದಲನೇ ವರ್ಷ Honeymoon

period, ಈಗ ಬಂದಿದ್ದಾರೆ, ಸ್ವಲ್ಪ ಕಾಲಾವಕಾಶ ಬೇಕು ಎನ್ನುವ ಆ ತರಹದ ಪರಿಸ್ಥಿತಿ ಕೂಡ ಈ ವರ್ಷ ಇಲ್ಲ. Honeymoon is over. ಈಗ ಇವರು ಮೂರನೇ ವರ್ಷಕ್ಕೆ ಕಾಲಿಡುತ್ತಿರುವಂತಹ ಆರ್ಥಿಕ ವರ್ಷ. ನಾಳೆ 5ನೇ ತಾರೀಖು ಬಜೆಟ್ ಮಂಡಿಸುತ್ತಿದ್ದಾರೆ. He is going to present 5th Budget as a Finance Minister of the State. ಇದು 5ನೇ ಆಯವ್ಯಯ, ಇವರಿಗೆ ಇದು ಹೊಸದಲ್ಲ. ಈಗಾಗಲೇ ನಾಲ್ಕು ಬಜೆಟ್ ಆಯಿತು. ಈಗ ಸರ್ಕಾರಕ್ಕೆ ಒಂದು ಸ್ಪಷ್ಟತೆ ಇರಬೇಕು, ನಿಖರತೆ ಇರಬೇಕು, ದೂರದೃಷ್ಟಿಯಲ್ಲೂ ಕೂಡ ಯಾವುದೇ ಮಂದ ಬೆಳಕು ಇರಬಾರದು. It should be very very clear. ಇವು ಯಾವ ಅಂಶಗಳೂ ಕೂಡ ಇದರಲ್ಲಿ ಇಲ್ಲ. Totally it is lacking. ಮಾನ್ಯ ಯಡಿಯೂರಪ್ಪನವರು, ಇವರ ಸರ್ಕಾರದ ಬಗ್ಗೆ ವಿರೋಧ ಪಕ್ಷದವರು ಟೀಕೆ ಮಾಡಿದರೆ, ಅವರು ಮುಖ್ಯಮಂತ್ರಿ ಆದಮೇಲೆ ಅದನ್ನು ಸಹಿಸಿಕೊಳ್ಳುವಂತಹ ಸಹನೆ ಕೂಡ ಕಳೆದು ಕೊಳ್ಳುತ್ತಿದ್ದಾರೆ. ಒಂದು ರಾಜ್ಯದ ಮುಖ್ಯಮಂತ್ರಿಯಾಗಿ ಟೀಕೆಗಳನ್ನು ಸ್ವೀಕಾರ ಮಾಡಿ ಅವರು ಹೇಳಬೇಕಾದುದ್ದನ್ನು ಹೇಳಬೇಕು. ಅದು ಅವರ ಜವಾಬ್ದಾರಿ because the Government is accountable to this Legislature for every pai spent by the Government. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದೇ ಸಾರ್ವಭೌಮ ವೇದಿಕೆ. ಜನರು ಅವರ ಅಧಿಕಾರವನ್ನು ನಮಗೆ ಕೊಟ್ಟು, ನಮ್ಮನ್ನು ಇಲ್ಲಿಗೆ ಕಳುಹಿಸಿದ್ದಾರೆ. ನಮ್ಮ ಪರವಾಗಿ ನೀವು ಅಲ್ಲಿ ಮಾತನಾಡಿ, ನಮ್ಮ ವಿಚಾರಗಳನ್ನು ಪ್ರಸ್ತಾಪ ಮಾಡಿ, ನಮ್ಮ ಸಮಸ್ಯೆಗಳಿಗೆ ಪರಿಹಾರ ಹುಡುಕಿ, ಪರಿಹಾರ ಒದಗಿಸಿ ಕೊಡಿ, ಈ ರಾಜ್ಯ ವಿಕಾಸ ಮಾಡುವುದಕ್ಕೆ ನೀವೆಲ್ಲ ಕೆಲಸ ಮಾಡಿ ಎಂದು ಚುನಾವಣೆ ಮೂಲಕ ಅವರ ಅಧಿಕಾರವನ್ನು ನಮಗೆ ಕೊಟ್ಟು, ನಮ್ಮನ್ನು ಇಲ್ಲಿಗೆ ಕಳುಹಿಸಿದ್ದಾರೆ. ಇದು ನಮಗೆ ಪಿತ್ರಾರ್ಜಿತವಾಗಿ ಬಂದಿರುವುದು ಅಲ್ಲ ಅಥವಾ ಇದು ನಮ್ಮ ಮನೆಯವರು ನಮಗೆ ಕೊಟ್ಟಿರುವುದು ಅಲ್ಲ. ಇದು ನಮಗೆ ಜನರು ಕೊಟ್ಟಿರತಕ್ಕಂಥ ಅಧಿಕಾರ. ಆ ಅಧಿಕಾರವನ್ನು ಚಲಾಯಿಸುವಾಗ ನಾವು ಸರ್ಕಾರದಲ್ಲಿರಲಿ ಅಥವಾ ವಿರೋಧ ಪಕ್ಷದಲ್ಲಿ

ಕುಳಿತಿರಲಿ ನಿರ್ಭಯವಾಗಿ, ನಿರ್ಭೀತಿಯಿಂದ ಅದನ್ನು ವ್ಯಕ್ತ ಮಾಡತಕ್ಕಂಥಾದ್ದು, it is our right. ಅದಕ್ಕೆ ಸಕಾರಣಗಳು ಇದ್ದರೆ ನಿಮಗೆ ಅದನ್ನು defend ಮಾಡಿಕೊಳ್ಳುವ ಹಕ್ಕು ಕೂಡ ಇದೆ. You have every right to defend ಸತ್ಯ ಇರುವಂತಹ ವಿಚಾರಗಳನ್ನು defend ಮಾಡಿಕೊಳ್ಳಲಿ. ಅಸತ್ಯ ಇರುವಂತಹ ವಿಚಾರಗಳನ್ನು ಅಲ್ಲಗೆಳೆಯಲಿ. ಅದು ಬಿಟ್ಟು, ನಾವು ಯಾವುದಾದರೊಂದು ವಿಚಾರದ ಮೇಲೆ ಮಾತನಾಡಿದರೆ ಅದು ಹೊರಗಡೆ ಮಾತನಾಡಲಿ ಅಥವಾ ಒಳಗಡೆ ಮಾತನಾಡಲಿ, ವಿರೋಧ ಪಕ್ಷದವರು ಹಾದಿಬೀದಿಯಲ್ಲಿ ಮಾತನಾಡುತ್ತಾರೆಂದು ಹೇಳುತ್ತಾರೆ. ಬರಲಿ ವಿಧಾನಸಭೆಗೆ, ಅಲ್ಲಿ ಮಾತನಾಡಲಿ, ನಾವು ವಿಧಾನಸಭೆಯಲ್ಲಿ ಉತ್ತರ ಕೊಡುವುದಕ್ಕೆ ತಯಾರಿದ್ದೇವೆಂದು ಹೇಳುತ್ತಾರೆ. ಹಣಕಾಸಿನ ವಿಚಾರವನ್ನು ಬೀದಿಯಲ್ಲಿ ಚರ್ಚೆ ಮಾಡುವುಕ್ಕಾಗುತ್ತದೆಯೇ? ಇವರು ಮಾತ್ರ ಬೀದಿಯಲ್ಲೆಲ್ಲ ಹೇಳಬಹುದು, ನಾವು ಹೇಳಿದರೆ ಬೀದಿಯಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಇದು ಯಾವ ಪ್ರಜಾಪ್ರಭುತ್ವದ ನೀತಿ? ನೀವು ಬೇಕಾದರೆ ಹೇಳಬಹುದು. ನಿಮಗೆ ಸಂವಿಧಾನದಲ್ಲಿ ವಿಶೇಷವಾದ ಹಕ್ಕುಗಳನ್ನು ಕೊಟ್ಟುಬಿಟ್ಟಿದ್ದಾರೆ! ನಾವು ಹೇಳಿದರೆ, No, ಬೀದಿ ಇದು ರಂಪ ಆಗಬಾರದು, ಬೀದಿಯಲ್ಲೆಲ್ಲ ಮಾತನಾಡಬಾರದು, ಸದನದೊಳಗಡೆ ಬಂದು ಮಾತನಾಡಿ ಎಂದು ಹೇಳುತ್ತಾರೆ. ಇನ್ನೂ ಕೂಡ ಉತ್ತರ ಕರ್ನಾಟಕದ 14 ಜಿಲ್ಲೆಗಳಲ್ಲಿ ಜನರು ಪ್ರವಾಹದಿಂದಾಗಿ ಕಣ್ಣೀರಿನಲ್ಲಿ ಕೈತೊಳೆಯುತ್ತಿದ್ದಾರೆ. ಈ ಸದನದಲ್ಲಿ ಪ್ರವಾಹ ಮತ್ತು ಬರಗಾಲದ ಬಗ್ಗೆ ಮೂರು ದಿನಗಳ ಕಾಲ ಚರ್ಚೆಯಾಗಿತ್ತು. ಆ ಮೂರು ದಿವಸ ಈ ಸದನದಲ್ಲಿದ್ದ ಎಲ್ಲಾ ಸದಸ್ಯರು ಮಾತನಾಡಿದರು, ನಾನೂ ಮಾತನಾಡಿದೆ, Ruling party ಯ ಉತ್ತರ ಕರ್ನಾಟಕ ಭಾಗದ ಸದಸ್ಯರೆಲ್ಲ ಮಾತನಾಡಿದರು, ಅಲ್ಲಿರುವ, ಅಲ್ಲಿ ಕಣ್ಣಾರೆ ಕಂಡಿರುವ, ಅವರು ಅನುಭವಿಸಿರುವಂಥ ಕಷ್ಟಗಳನ್ನೆಲ್ಲ ಇಲ್ಲಿ ಎಳೆಎಳೆಯಾಗಿ ಬಿಡಿಸಿ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಇದಕ್ಕೆ ಉತ್ತರ ಕೊಟ್ಟಿದ್ದಾರೆಯೇ? House was adjourned sine die. No reply. ಹೊರಗಡೆ ಮಾತನಾಡಿದರೆ ಹೀಗೆ

ಹೇಳುತ್ತೀರಿ? ಇಲ್ಲಿ ಮಾತನಾಡಿದರೆ ಉತ್ತರ ಕೊಡದೇ House adjourn ಮಾಡಿ ಹೊರಟುಹೋಗುತ್ತೀರಿ. Where we should talk? Where we should speak? Then how to get reply from the Government? ಸರ್ಕಾರ ತನ್ನ ಹೊಣೆಗಾರಿಕೆಯಿಂದ ತಪ್ಪಿಸಿಕೊಂಡಿಲ್ಲವೇ? ಇದನ್ನು ಬೇಜವಾಬ್ದಾರಿಯೆಂದು ಕರೆಯಬೇಕೋ, ಬೇಡವೋ? ಜನರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲವೆಂದು ಹೇಳಬೇಕೋ, ಬೇಡವೋ? ಮೂರು ದಿನಗಳ debate ಗೆ ಈ ಸರ್ಕಾರ ಉತ್ತರ ಕೊಡುವ ಸೌಜನ್ಯವನ್ನೂ ಸಹ ತೋರಿಸಿಲ್ಲ.

ಶ್ರೀ ಜಿ. ಕರುಣಾಕರರೆಡ್ಡಿ : ನಾವು ಉತ್ತರ ಕೊಡುವುದಕ್ಕೆ ತಯಾರಿದ್ದೆವು.

ಶ್ರೀ ಸಿದ್ದರಾಮಯ್ಯ : ನಾನು yield ಆಗುವುದಿಲ್ಲ. ಉತ್ತರ ಕೊಟ್ಟಿಲ್ಲವೆನ್ನುವುದು ಸತ್ಯ.

ಶ್ರೀ ಜಿ. ಕರುಣಾಕರರೆಡ್ಡಿ: Speaker ಮೇಲೆ ದಾಳಿ ಮಾಡುವ culture ಅನ್ನು ತೋರಿಸಿಕೊಟ್ಟು . . . . .

ಶ್ರೀ ಸಿದ್ದರಾಮಯ್ಯ: ನಿಮ್ಮ ಹತ್ತಿರ culture ಕಲಿತುಕೊಳ್ಳಬೇಕಾಗಿಲ್ಲ, ಕುಳಿತುಕೊಳ್ಳಿ. ನಿಮ್ಮಿಂದ ನಾವು ಯಾವ culture ಕಲಿಯಬೇಕು? Please sit down. ನಿಮ್ಮಿಂದ culture ಕಲಿತುಕೊಳ್ಳುತ್ತೇವೆ, ಕುಳಿತುಕೊಳ್ಳಿ. ನಾವು ಆಮೇಲೆ ನಿಮ್ಮಿಂದ culture ಕಲಿಯೋಣ. ಒಂದು ದಿನ ನಿಮ್ಮ ಹತ್ತಿರ ಪಾಠ ಹೇಳಿಸಿಕೊಳ್ಳುವುದಕ್ಕೆ ಬರುತ್ತೇವೆ, ಕುಳಿತುಕೊಳ್ಳಿ Culture ಕಲಿಯಬೇಕಂತೆ. ನೀವು ಅಂದು ಉತ್ತರ ಕೊಟ್ಟಿದ್ದೀರಾ?

ಶ್ರೀ ಜಿ. ಕರುಣಾಕರರೆಡ್ಡಿ: ನಾವು ಓಡಿ ಹೋಗಿಲ್ಲ. ಸರ್ಕಾರ ಇಲ್ಲಿಯೇ ಇದೆ. ಅಂದು ನೀವು ಮಾಡಿದ್ದೇನು? ನಿಮ್ಮವರೆಲ್ಲ ಗಲಾಟೆ ಮಾಡುತ್ತಿದ್ದರು. ಅದಕ್ಕೆ House adjourn ಮಾಡಲಾಯಿತು.

ಶ್ರೀ ಸಿದ್ದರಾಮಯ್ಯ: ಗಲಾಟೆ ಮಾಡಿದ್ದರೆ next day ಉತ್ತರ ಕೊಡಬೇಕಾಗಿತ್ತು. ನೀವು ಹೇಳಿದ ಹಾಗೆ ಕೇಳಿಕೊಂಡು ಹೋಗುವುದಕ್ಕೆ Assembly ಇರುವುದೇ? ಇಲ್ಲಿ ಮಾಡಿದ ಹಾಗೆಲ್ಲ ನಾವು ಕೇಳಿಕೊಂಡು

ಹೋಗುವುದಕ್ಕೆ ಇರುವುದೇ? ಹಾಗೆಲ್ಲ ನೀವು ಮಾತನಾಡುವುದಕ್ಕಾಗುವುದಿಲ್ಲ. He can't interfere.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ವಿರೋಧ ಪಕ್ಷದವರಿಗೆ ಅಂದು ಸದನ ನಡೆಸುವುದು ಬೇಕಾಗಿರಲಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: I am very sorry, I repeat, ಉತ್ತರ ಕೊಡದೇ ಹೊರಟು ಹೋದಿರಿ. ಸರ್ಕಾರ ಪಲಾಯನ ಮಾಡಿತು.

ಅಧ್ಯಕ್ಷರು: Please, ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಅವತ್ತಿನ ನಡವಳಿಕೆ ಬಗ್ಗೆ ಚರ್ಚೆ ಮಾಡಬೇಕೆಂದರೆ ಚರ್ಚೆ ಮಾಡಿ. ಅವತ್ತಿನ ಘಟನಾವಳಿಗಳ ಬಗ್ಗೆ, ಅವರ ನಡವಳಿಕೆ ಬಗ್ಗೆ ಚರ್ಚೆ ಮಾಡಬೇಕಾದರೆ ದಯವಿಟ್ಟು ಅವಕಾಶ ಮಾಡಿಕೊಡಿ. ನಾವು ಚರ್ಚೆ ಮಾಡೋಣ. ಆ ವಿಚಾರ ಎಲ್ಲಾ ಮಾಧ್ಯಮದಲ್ಲಿಯೂ ಬಂದಿದೆ. ನಮ್ಮ ಹತ್ತಿರ ದಾಖಲೆಗಳಿವೆ. ಯಾರ್‍ಯಾರು ಏನೇನು ಮಾಡಿದರೆಂಬ ಬಗ್ಗೆ ದಾಖಲೆಗಳಿವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡು, ವಿಶ್ವೇಶ್ವರ ಹೆಗಡೆಯವರು ಮತ್ತು ಕರುಣಾಕರರೆಡ್ಡಿಯವರು ನಾವು ಹೇಗೆ ಮಾತನಾಡಬೇಕೆಂಬುದನ್ನು ಬರೆದುಕೊಟ್ಟರೆ ಆ ಪದಗಳನ್ನೇ ಬಳಸೋಣ. ಮತ್ತೆ ಇನ್ಯಾವ ಪದ ಬಳಸಲಿ?

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಅವರು ಹೇಳಿದ ಮಾತಿಗೆ ನಾವು ಹೇಳಿದೆವು. ಹೀಗೆ ಮಾತನಾಡಿ ಎಂದು ನಾವು ಹೇಳಲಿಲ್ಲ.

ಶ್ರೀ ಸಿದ್ದರಾಮಯ್ಯ: This is the fact that you have not replied.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: No, we are having highest respect for you. In spite of that you asked for the debate.

ಶ್ರೀ ಸಿದ್ದರಾಮಯ್ಯ : The Government has not replied to our debate.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: No you asked for the debate on that days incident, we never asked for the debate. You asked the debate, you questioned the debate, you questioned about that day's proceedings. ನಾವು question ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ: What is the evidence that is required?

ಅಧ್ಯಕ್ಷರು: ಆಯಿತು, ಕುಳಿತುಕೊಳ್ಳಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: We are ready to debate on that issue.

ಶ್ರೀ ಸಿದ್ದರಾಮಯ್ಯ: It is on record. That's why I am making allegation.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: Yes, I am saying that it is on record. It is wrong.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಸರ್ಕಾರ ಉತ್ತರ ಕೊಡದೆ ಪಲಾಯನ ಮಾಡಿತು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಇಲ್ಲ. ಇಲ್ಲ No.

(ಗೊಂದಲ)

ಅಧ್ಯಕ್ಷರು: Please, ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಮಾತು ಮುಂದುವರೆಸಲಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಇಲ್ಲ. ನಾವು ಚರ್ಚೆಗೆ ಸಿದ್ಧರಿದ್ದೇವೆ. ಅವತ್ತಿನ ಘಟನಾವಳಿಗಳ ಬಗ್ಗೆ ತಾವು ಸಮಯ ನಿಗದಿ ಮಾಡಿ, ನಾವು ಚರ್ಚೆ ಮಾಡುವುದಕ್ಕೆ ಸಿದ್ಧರಿದ್ದೇವೆ.

(ಗೊಂದಲ)

ಅಧ್ಯಕ್ಷರು: Please, ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು: ಅದರ ಬಗ್ಗೆ ಪ್ರಸ್ತಾಪ ಬೇಡ. ಸಿದ್ದರಾಮಯ್ಯನವರೆ, ತಾವು ಮಾತನಾಡಿ.

ಶ್ರೀ ಟಿ.ಬಿ. ಜಯಚಂದ್ರ: ವಿರೋಧ ಪಕ್ಷದ ನಾಯಕರು ಏನು ಕೇಳಿದರು? 15 ಜಿಲ್ಲೆಗಳಲ್ಲಿ ಈ ರೀತಿಯಾಯಿತು, ಚರ್ಚೆ ಮಾಡಿದೆವು, ಚರ್ಚೆಯಲ್ಲಿ ಭಾಗವಹಿಸಿದೆವು ಅದಕ್ಕೆ ಸರ್ಕಾರ ಉತ್ತರ ಕೊಡಲಿಲ್ಲವೆಂದು ಹೇಳಿದರು. ಹೌದು. Speaker ಚುನಾವಣೆ ಸಂದರ್ಭದಲ್ಲಿ ಗೊಂದಲವಾಯಿತು. ಆದರೆ, House ಅನ್ನು sine die adjourn ಮಾಡಿಕೊಂಡು ಹೋಗಿ ಎಂದು ಹೇಳಿದವರು ಯಾರು? ಒಂದು ವಿಚಾರ ಪ್ರಸ್ತಾಪವಾದಾಗ there is a right of reply. You have to reply. Next day Session extend ಮಾಡಿ ಉತ್ತರ ಕೊಡಬೇಕಾಗಿತ್ತು. House sine die adjourn ಮಾಡಿದವರು ಯಾರು? ಸರ್ಕಾರ ಹಸ್ತಕ್ಷೇಪ ಮಾಡದೆ adjourn ಮಾಡುತ್ತಾರೆಯೇ?

(ಗೊಂದಲ)

ಅಧ್ಯಕ್ಷರು: ದಯವಿಟ್ಟು, ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡೋಣ.

ಶ್ರೀ ಟಿ.ಬಿ. ಜಯಚಂದ್ರ: Speaker ರವರು ಯಾವುದೇ ತೀರ್ಮಾನವನ್ನು ಮಾಡಬೇಕಾದಾಗ ಸರ್ಕಾರದ ಕಡೆಗೇ ನೋಡಬೇಕಾಗುತ್ತದೆ. ಅಂದು House sine die adjourn ಮಾಡುವ ಅವಶ್ಯಕತೆ ಏನಿತ್ತು? ನೀವು ಉತ್ತರ ಕೊಡುವುದಕ್ಕಾಗುತ್ತಿರಲಿಲ್ಲವೆ?

(ಗೊಂದಲ)

ಶ್ರೀ ಜಿ. ಕರುಣಾಕರ ರೆಡ್ಡಿ: ನಾವು ಉತ್ತರ ಕೊಡುವುದಕ್ಕೆ ರೆಡಿ ಇದ್ದೆವು. ನೀವು ಸದನ ನಡೆಸಲಿಕ್ಕೆ ಬಿಡಲಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ನೀವು House sine die adjourn ಮಾಡಿದಿರಿ, ನೀವು ಪಲಾಯನ ಮಾಡಿದ್ದೀರಿ ಎಂದು ಹೇಳದೆ ಇನ್ನೇನು ಹೇಳಬೇಕಾಗುತ್ತದೆ. ಆಯಿತು ನೀವು Sine die ಮಾಡಿದಿರಿ, ಬೇರೆ ಇನ್ನು ಯಾವ ಮುಖೇನ communicate ಮಾಡಿದಿರಿ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ: ಹಳ್ಳಿಯಲ್ಲಿರುವವರ ಕಷ್ಟ ಇವರಿಗೇನು ಗೊತ್ತಾಗುತ್ತದೆ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಅವರ ಕಷ್ಟ ನಿಮಗಿಂತ ಚೆನ್ನಾಗಿ ನಮಗೆ ಗೊತ್ತಾಗುತ್ತದೆ. ತಾವು Agriculture Minister ಆಗಿ ಏನು ಮಾಡಿದಿರಿ ಅದಕ್ಕಿಂತ ಚೆನ್ನಾಗಿ ಗೊತ್ತಿದೆ. ಯಾರಿಗೇನೂ ಗೊತ್ತಿಲ್ಲವೆಂದು ಹೇಳಬೇಡಿ. ನೀವೂ ಪಂಡಿತರಲ್ಲ, ನಾವೂ ಏನೂ ತಿಳುವಳಿಕೆ ಇಲ್ಲದವರಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಇಂಥವರಿಂದ ನೀವು ಹೇಗೆ Assembly ನಡೆಸುತ್ತೀರೋ ನನಗರ್ಥವಾಗುವುದಿಲ್ಲ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಈ ಸದನದಲ್ಲಿ ನೀವೊಬ್ಬರೇ ಪಂಡಿತರಲ್ಲ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಈ ಸದನದಲ್ಲಿ ನೀವೊಬ್ಬರೇ ಪಂಡಿತರಲ್ಲ. ನೀವ್ಯಾರೂ ಪಂಡಿತರಲ್ಲ.

ಶ್ರೀ ಟಿ.ಬಿ.ಜಯಚಂದ್ರ : ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮಾತನಾಡಿವ ಸಂದರ್ಭದಲ್ಲಿ ಮಾತನಾಡುತ್ತಿದ್ದೇವೆ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನಮಗೇನು ಗೊತ್ತು ಎಂದು ಕೇಳುತ್ತೀರಲ್ಲ. ನಿಮಗೇನು ಗೊತ್ತಿದೆ ಎಂದು ಕೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಸಂವಿಧಾನಬದ್ಧವಾಗಿ ಬದಂಥ ವಿಚಾರದಲ್ಲಿ ನಾವು ಪ್ರಸ್ತಾಪ ಮಾಡಬೇಕಾದಾಗ ನಿಮ್ಮನ್ನು ಹೊಗಳುವುದಕ್ಕಾಗುತ್ತದೆಯೇ?

(ಗೊಂದಲ)

ಅಧ್ಯಕ್ಷರು : ಈಗ ವಿಚಾರವನ್ನು ಇಲ್ಲಿಗೇ ಮುಕ್ತಾಯ ಮಾಡಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಅಂದಿನ ಘಟನಾವಳಿಗಳಿಗೆ ಯಾರು ಜವಾಬ್ದಾರರು ?

ಶ್ರೀ ಸಿದ್ದರಾಮಯ್ಯ : ನಾನು ಇವರ ಮೇಲೆ ಯಾವುದೇ ಗುರುತರವಾದ ಆರೋಪವನ್ನು ಹೊರಿಸಿಲ್ಲ. ನಾನಿನ್ನೂ ಪ್ರಾರಂಭವೇ ಮಾಡಿಲ್ಲ. ಈಗ ಪ್ರಾರಂಭವಾಗಿದೆ. ಈ ತರಹ ನಡೆಯುವುದಕ್ಕೆ ಬಿಟ್ಟು ಮುಖ್ಯಮಂತ್ರಿಯವರೇ ತಾವು ನಗುತ್ತಾ ಕುಳಿತಿದ್ದೀರಿ. ಇದು ನಿಮಗೆ ಶೋಭೆ ತರುವುದಿಲ್ಲ. It is your word only. ಸಂವಿಧಾನಬದ್ಧವಾಗಿ Governor's address ಮೇಲೆ ಗಂಭೀರವಾಗಿ ಚರ್ಚೆ ಮಾಡಿ ಸರ್ಕಾರ ಉತ್ತರ ಕೊಡಬೇಕಾಗಿದೆ. ನೀವು ನೋಡುತ್ತಿದ್ದೀರಿ, ಹೇಳಿ. ನೀವು ಹೀಗೇ ಮಾಡುತ್ತಿದ್ದಾಗ ನಾವು ಹಾಗೆ ಮಾಡುತ್ತಿದ್ದೆವೆ ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) : ಈ ಭಾಗದಲ್ಲಿರುವಂಥ ನಮ್ಮ ಗೌರವಾನ್ವಿತ ಸದಸ್ಯರುಗಳಿಗೆ ಹೇಳುವುದೇನೆಂದರೆ, ಪ್ರತಿಪಕ್ಷದ ನಾಯಕರು ಮಾತನಾಡುವಾಗ ಅಡ್ಡಿಪಡಿಸದೆ ಅವರು ಸಂಪೂರ್ಣವಾಗಿ ಮಾತನಾಡಿ ಮುಗಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಆದರೆ, ಪ್ರಶ್ನೆ ಏನು ಬಂತೆಂದರೆ, ತಾವು ಮಾತನಾಡುವ ಕಾಲದಲ್ಲಿ ಚರ್ಚೆಗೆ ಅವಕಾಶವಾಗಲಿಲ್ಲವೆಂದು ಹೇಳಿದಾಗ ಸಹಜವಾಗಿ ನಮ್ಮ ಗೌರವಾನ್ವಿತ ಕಂದಾಯ ಸಚಿವರು ಎದ್ದು ನಿಂತು ಅವರು ಯಾವ ರೀತಿ ನೀವು Speaker

ಮೇಲೆ ದಾಳಿ ಮಾಡಿದಿರಿ. ಪ್ರಜಾತಂತ್ರ ವ್ಯವಸ್ಥೆಗೆ ಅಪಮಾನವಾಯಿತು, ಅದನ್ನು ನೀವು ಖಂಡಿಸಬೇಕಾಗಿತ್ತು. ನಿಮ್ಮ ಸಮಕ್ಷಮವೇ ಇಂಥದ್ದೆಲ್ಲ ನಡೆಯುವುದಕ್ಕೆ ಜೆ.ಡಿ.(ಎಸ್)ನವರು ಮಾಡುವುದಕ್ಕೆ ಬಿಟ್ಟುಕೊಟ್ಟರಿ. ನೀವು ಅವತ್ತು ಅವರಿಗೆ ಬುದ್ಧಿ ಹೇಳಿದ್ದರೆ ಸದನದ ಕಾರ್ಯಕಲಾಪವೆಲ್ಲ ನಡೆಯುತ್ತಿತ್ತು. ಆದ್ದರಿಂದ, Speaker ರವರು ಅನಿವಾರ್ಯವಾಗಿ ಸದನವನ್ನು ಮುಂದೂಡಿದರು. ಅದಕ್ಕೆ ಕಾರಣ ನೀವು, ನಾವಲ್ಲ ಎನ್ನುವ ಮಾತನ್ನು ಹೇಳಿದರು.

(ಗೊಂದಲ)

ಅಧ್ಯಕ್ಷರು : ಆ ವಿಚಾರದ ಬಗ್ಗೆ ಚರ್ಚೆ ಬೇಡ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಜೆ.ಡಿ.(ಎಸ್)ನವರನ್ನು ಬಿಟ್ಟುಕೊಟ್ಟರು ಎಂದು ಹೇಳಿದರು ಇಲ್ಲಿ ಜೆ.ಡಿ.(ಎಸ್) ಅಥವಾ ಬೇರೆ ಪಕ್ಷ ಎಂದು ಇಲ್ಲಿ ಮಾಡಲಿಲ್ಲ. ಅವತ್ತು Speaker ಚುನಾವಣೆ ಮಾಡಬೇಡಿ, ಇನ್ನೊಂದು ದಿವಸ ಮಾಡಿ ಎಂದು ಹೇಳಿದೆವು. ದಯಮಾಡಿ, ಅದನ್ನು ಮಾನ್ಯ ಮುಖ್ಯಮಂತ್ರಿಯವರು ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು : ಆಯಿತು, ಆ ವಿಚಾರ ಬೇಡ. ಬಿಟ್ಟುಬಿಡೋಣ.

ಶ್ರೀ ಸಿದ್ದರಾಮಯ್ಯ : ಅವರು ಹೇಳಿದ್ದಕ್ಕೆ ಹೇಳಿದೆನೇ ಹೊರತು ನಾನೇನಾದರೂ ಪ್ರಸ್ತಾಪ ಮಾಡಿದೆನೆ ? ನಾನು ಅದನ್ನು ಪ್ರಸ್ತಾಪವೇ ಮಾಡಿಲ್ಲ. ಮಾನ್ಯ ಅಧ್ಯಕ್ಷರೆ, ನೀವು ನಮ್ಮನ್ನು ರಕ್ಷಣೆ ಮಾಡಬೇಕು. ಹೀಗಾದರೆ ಹೇಗೆ? ಕಟ್ಟಾ ಸುಬ್ರಮಣ್ಯರವರು ಯಾವಾಗಲೂ ಜಗಳಕ್ಕೇ ಬರುತ್ತಾರೆ. ನಾವಿಬ್ಬರೂ ಬೇಕಾದರೆ ಹೊರಗಡೆ ಜಗಳವಾಡೋಣ, ಸದನದಲ್ಲಿ ಬೇಡ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನಿಮ್ಮ ಜೊತೆ ಜಗಳ ಮಾಡುವ ಶಕ್ತಿ ನನಗಿಲ್ಲ.

ಶ್ರೀ ಸಿದ್ದರಾಮಯ್ಯ : ನೀವು ಒಳ್ಳೆಯ ಸ್ನೇಹಿತರು. ಕುಳಿತುಕೊಳ್ಳಿ. ಏಕೆ ಹೀಗೆ ಮಧ್ಯೆ ಮಧ್ಯೆ ಎದ್ದು ಮಾತನಾಡುತ್ತೀರಿ ? ನಾನು ಆ ವಿಚಾರವನ್ನು ಪ್ರಸ್ತಾಪ ಮಾಡಬಾರದೆಂದಿದ್ದೆ. ಈ ಸದನದಲ್ಲಿ ನಾನು

ಎಲ್ಲಿಯೂ ಆ ಪದವನ್ನೇ ಬಳಸಿಲ್ಲ. ಆದರೂ ಕೂಡ ಕರುಣಾಕರರೆಡ್ಡಿಯವರೇಕೆ ಅದನ್ನು ಪ್ರಸ್ತಾಪ ಮಾಡಿದರೋ ಗೊತ್ತಿಲ್ಲ. ಆ ವಿಚಾರವೇ ಈಗ ಅಲ್ಲವೇ ಅಲ್ಲ. ಉತ್ತರ ಕೊಟ್ಟಿಲ್ಲವೆನ್ನುವುದು it is a fact. Is it not a fact? ಏತಕ್ಕೆ ಕೊಡಲಿಲ್ಲವೋ ಗೊತ್ತಿಲ್ಲ, ಒಟ್ಟಿನಲ್ಲಿ is it not a fact ? you please admit it. Is it not a fact that you have not replied?

ಶ್ರೀ ಕರುಣಾಕರ ರೆಡ್ಡಿ : ನಾವು ಉತ್ತರ ಕೊಡುವುದಕ್ಕೆ ತಯಾರಿದ್ದೆವು.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇವರು ಹೀಗೆ ಪದೇ ಪದೇ ಎದ್ದು ನಿಂತು intervene ಮಾಡಿದರೆ ಹೇಗೆ ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : Council ನಲ್ಲಿ ಉತ್ತರ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಜಿ. ಕರುಣಾಕರ ರೆಡ್ಡಿ : ನಾವು ಹೇಳದಿದ್ದರೆ ರಾಜ್ಯದ ಜನತೆಗೆ ಏನು ಸಂದೇಶ ಹೋಗುತ್ತದೆ ?

ಶ್ರೀ ಸಿದ್ದರಾಮಯ್ಯ : ಇರುವ ಸಂದೇಶವೇ ಹೋಗುತ್ತದೆ.

ಶ್ರೀ ಜಿ. ಕರುಣಾಕರ ರೆಡ್ಡಿ : ನಾವು ಉತ್ತರ ಕೊಡುವುದಕ್ಕೆ ತಯಾರಾಗಿ ಬಂದಿದ್ದೆವು. ಇವರೇ ಎಲ್ಲಾ disturb ಮಾಡಿದ್ದಕ್ಕೆ Speaker ರವರು House ಅನ್ನು sine die adjourn ಮಾಡಿದರೆ ನಾವೇನು ಮಾಡೋಣ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಟ್ಟಾ ಸುಬ್ರಮಣ್ಯರವರಿಗೆ ಕುಳಿತುಕೊಳ್ಳುವುದಕ್ಕೆ ಹೇಳಿ. ಅವರು senior Minister ಆಗಿ ಪದೇ ಪದೇ ಎದ್ದು intervene ಆಗುತ್ತಾರೆ.

ಅಧ್ಯಕ್ಷರು : Please, ಕುಳಿತುಕೊಳ್ಳಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : Law Minister ರವರಿಗೆ ಹೇಳಿ, ಯಾವ ಕಾನೂನನ್ನು ಅವರ ಮೇಲೆ ಪ್ರಯೋಗ ಮಾಡಬೇಕೆಂದು ಹೇಳಿ. Law

Minister ರವರು ನಮ್ಮ ಮೇಲೆ ಮಾತ್ರ ಕಾನೂನು ಪ್ರಯೋಗ ಮಾಡುತ್ತಾರೆ. ಆಡಳಿತ ಪಕ್ಷದ ಸದಸ್ಯರ ಮೇಲೆ ಪ್ರಯೋಗ ಮಾಡುವುದಕ್ಕೆ ಹೇಳಿ.

ಅಧ್ಯಕ್ಷರು : ಆಯಿತು, ತಾವು ಚರ್ಚೆ ಮುಂದುವರಿಸಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಸದಸ್ಯರು ಯಾರೂ ತಪ್ಪು ತಿಳಿದುಕೊಳ್ಳಬಾರದು, ನನ್ನ ಚರ್ಚೆ ಮುಗಿಯುವವರೆಗೆ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಯವರನ್ನು ಬಿಟ್ಟು ಬೇರೆ ಯಾರಿಗೂ ನಾನು yield ಆಗುವುದಿಲ್ಲ. ನಾನು ಅಂದು ಅದನ್ನು ಖಂಡಿಸಿದ್ದೇವೆ. ಆ ವಿಚಾರದ ಬಗ್ಗೆ ತಾವೊಂದು ಸಮಿತಿ ರಚಿಸಿದ್ದೀರಿ. ಅದು ಏನಾಗುತ್ತದೋ ನೋಡೋಣ. ಅದರ ಬಗ್ಗೆ ಅಲ್ಲಿ ಚರ್ಚೆಯಾಗುತ್ತಿದೆ. ಅವರು ರಿಪೋರ್ಟ್ ಕೊಡಬೇಕು. ಯಾರದು ತಪ್ಪು ಎಂದು ನೋಡೋಣ. ಆ ವಿಚಾರ ಬಂದಾಗ ಚರ್ಚೆ ಮಾಡಬೇಕೆಂದರೆ ತೆಗೆದುಕೊಂಡು ಬನ್ನಿ, ಚರ್ಚೆ ಮಾಡೋಣ. We will not run away. ಯಾರದು ತಪ್ಪು, ಏನೆಂಬುದನ್ನು ಚರ್ಚೆ ಮಾಡೋಣ. ಅದು ಯಾವ ತರಹದ culture ಎಂಬುದನ್ನೂ ಕೂಡ ಚರ್ಚೆ ಮಾಡೋಣ. ನಾನು ಅದರ ಬಗ್ಗೆ ಈಗ ಹೆಚ್ಚಿಗೆ ಪ್ರಸ್ತಾಪ ಮಾಡುವುದಿಲ್ಲ. ಆ ಇವರು 7 ದಿನಗಳಿಗೆಂದು Assembly ಕರೆದರು. House 6ನೇ ದಿವಸವೇ adjourn ಆಯಿತು. ಇನ್ನೂ ಒಂದು ದಿವಸ ಅವಧಿ ಇತ್ತು, ಚರ್ಚೆ ಮಾಡಬಹುದಿತ್ತು. Next day ಉತ್ತರ ಕೊಡಬಹುದಿತ್ತು ಅಥವಾ ಇನ್ನೂ ಒಂದು ದಿವಸ extend ಮಾಡಿ ಉತ್ತರ ಕೊಡಬಹುದಿತ್ತು. ಆ ರೀತಿ ಮಾಡಿದ್ದರೆ ಆಕಾಶವೇನೂ ಬಿದ್ದು ಹೋಗುತ್ತಿರಲಿಲ್ಲ. ಪ್ರಳಯವೇನೂ ಆಗುತ್ತಿರಲಿಲ್ಲ. ಇನ್ನೂ ಎರಡು ದಿನಗಳು extend ಮಾಡಬಹುದಿತ್ತು. ಆಗ ಇಲ್ಲಿ ನಡೆದಂಥ ಘಟನೆ ಬಗ್ಗೆಯೂ ಚರ್ಚೆ ಮಾಡಬಹುದಿತ್ತು. ಆಮೇಲೆ, ಎರಡು ದಿವಸ ಇವರ ಸರ್ಕಾರ ಉತ್ತರ ಸಹ ಕೊಡಬಹುದಿತ್ತು. There was ample time to reply. ಅದಕ್ಕೇ ನಾನು ಹೇಳಿದೆ, ಉತ್ತರ ಕೊಡುವುದಕ್ಕೆ ಸರ್ಕಾರಕ್ಕೆ ಆಸಕ್ತಿ ಇರಲಿಲ್ಲ. ಏಕೆಂದರೆ, ನೀವು ನೆರೆ ಪರಿಹಾರವನ್ನು ಸರಿಯಾದ ರೀತಿಯಲ್ಲಿ ನಿಭಾಯಿಸಿರಲಿಲ್ಲ. ಎಲ್ಲಾ ಸದಸ್ಯರೂ ಸರಿಯಾಗಿ ಪರಿಹಾರ ಕಾರ್ಯ ನಡೆದಿಲ್ಲವೆಂದು ಹೇಳಿದರು. ತಾರತಮ್ಯವಾಗಿದೆ, ಭ್ರಷ್ಟಾಚಾರವಾಗಿದೆ, ಈಗಲೂ ಆಗಿಲ್ಲ ಎಂದು ಎಲ್ಲರೂ

ಹೇಳಿದರು. ಲೋಕಾಯುಕ್ತರವರು, Governor, ಬೇರೆ ಬೇರೆಯವರೆಲ್ಲ ಹೇಳಿದರು. ಇತ್ತೀಚೆಗೆ ನಡೆದ ಗದಗ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಮುಖ್ಯಮಂತ್ರಿಯವರ ಎದುರುಗಡೆಯೇ, "ಇನ್ನೂ ಅಲ್ಲಿ ಹೆಣ್ಣುಮಕ್ಕಳು ತಗಡಿನ ಕೆಳಗಡೆ 5–6, 10–12 ಜನ ವಾಸ ಮಾಡುತ್ತಿದ್ದಾರೆ, ಕಲ್ಲು ಮಣ್ಣಿನ ಮೇಲೆ ಮಲಗುತ್ತಿದ್ದಾರೆ, ನೀವು air-condition ಕೊಠಡಿಯಲ್ಲಿದ್ದೀರಿ, ಅಲ್ಲಿಗೆ ಒಂದು ದಿನ ಹೋಗಿ ವಾಸ್ತವ್ಯ ಮಾಡಿ ಬಂದರೆ ನಿಮಗೆ ಅವರ ಕಷ್ಟ ಏನೆಂಬುದು ಗೊತ್ತಾಗುತ್ತದೆ" ಎಂದು ಹೇಳಿದರು. ಮಾನ್ಯ ಉದಾಸಿಯವರೆ, ತಾವು ಆ ಸಮಯದಲ್ಲಿ ಮುಖ್ಯಮಂತ್ರಿಯವರ ಪಕ್ಕದಲ್ಲಿಯೇ ಇದ್ದೀರಿ. ಹೌದೋ, ಅಲ್ಲವೋ ? ನಾನು ಇದ್ದೆ. CM was there, Mr. Udasi was there, Mr. Sriramulu was there, Mr. H.K. Patil was there. ನಾನು ಅದನ್ನು ನನ್ನ ಭಾಷಣದಲ್ಲಿ ಹೇಳಿದ್ದೇನೆಯೇ? ಅವರೇ ಹೇಳಿದ್ದು, ಅವರು ಸುಮ್ಮ ಸುಮ್ಮನೆ ಹೇಳುತ್ತಾರೆಯೇ? ಆಗ ಅವರು ಇಂದಿಗೂ ಆಗಿಲ್ಲವೆಂದು ಹೇಳಿದರು. ನಾನೇಕೆ ಇದನ್ನೆಲ್ಲ ಪ್ರಸ್ತಾಪ ಮಾಡಿದೆ ಎಂದರೆ, ಇದೊಂದು ಜ್ವಲಂತ ಸಮಸ್ಯೆ ಇದೊಂದು ರಾಷ್ಟ್ರೀಯ ದುರಂತ, 100 ವರ್ಷಗಳಲ್ಲಿ ಇಂಥ ದುರಂತವಾಗಿರಲಿಲ್ಲ ಎಂದು ಅವರೇ ಹೇಳಿದ ಮೇಲೆ ಆ ರೀತಿ ಹೇಳುವ ಮಾತಿನಲ್ಲಿ ಪ್ರಾಮಾಣಿಕತೆ ಇರಬೇಕೇ, ಬೇಡವೇ ? ಕಳಕಳಿ ಇರಬೇಕೋ, ಬೇಡವೋ? ಆ ಕಳಕಳಿ, ಪ್ರಾಮಾಣಿಕತೆ ಇವರಲ್ಲಿಲ್ಲ ಎನ್ನುವುದೇ ನನ್ನ ಆರೋಪವಾಗಿದೆ. ಜನರ ಬಗ್ಗೆ ಆ ಕಳಕಳಿ, ಆ ಪ್ರಾಮಾಣಿಕತೆ, ಅವರ ಕಷ್ಟಗಳಿಗೆ ಸ್ಪಂದಿಸುವ ಮನಸ್ಸು, ಆ commitment ನಲ್ಲಿ this Government is lacking ಎನ್ನುವುದೇ ನನ್ನ ಆರೋಪವಾಗಿದೆ. Governor's address ನಲ್ಲಿ ನೆರೆ ಪರಿಹಾರ ಕಾರ್ಯವನ್ನು ಬಹಳ ಚೆನ್ನಾಗಿ ನಿಭಾಯಿಸಿದ್ದೇವೆ ಎಂದು ಹೇಳಿದ್ದೀರಿ. ನಿಭಾಯಿಸುವುದಕ್ಕೆ ನಿಮಗೆ time ಎಲ್ಲಿತ್ತು ? September 29 to October 4–5 ರವರೆಗೆ ಪ್ರವಾಹ ಇತ್ತು. ಇವರು September 29, 30, October 1ರಂದು ಸುತ್ತೂರಿನಲ್ಲಿದ್ದರು. 29ನೇ ತಾರೀಖು ಅತಿ ಹೆಚ್ಚು ಮಳೆಯಾಯಿತು. ಇಡೀ ವರ್ಷದಲ್ಲಿ ಬೀಳುವಷ್ಟು ಮಳೆಯ 9ರಷ್ಟು ಮಳೆ

ಒಂದೇ ದಿವಸದಲ್ಲಿ ಬಿದ್ದಿದೆ ಎಂದು ಸರ್ಕಾರವೇ ಹೇಳಿದೆ. ಇಡೀ ವರ್ಷದಲ್ಲಿ ಬರತಕ್ಕಂಥ ಮಳೆಯ ಪ್ರಮಾಣ ಅದರ 9 times ಹೆಚ್ಚಾಗಿ ಬಿತ್ತು ಎಂದು ನೀವೇ ಹೇಳಿದಿರಿ. ಅಂಥ ಪ್ರವಾಹ ಇದ್ದರೂ ಕೂಡ ಸುತ್ತೂರಿನಲ್ಲಿ exercise ಮಾಡುತ್ತಾ ಕುಳಿತುಕೊಂಡಿರಲಿಲ್ಲವೆ? ಅದು ಹೇಳಿದರೆ ತಪ್ಪೆ? ಪ್ರವಾಹ ಪೀಡಿತ ಪ್ರದೇಶಗಳಿಗೆ Chief Minister ರವರು ಹೋಗಿದ್ದರು. ಅವರು ಹೋಗಿದ್ದು ಯಾವಾಗ, 2ನೇ ತಾರೀಖು ನೆಲಮಂಗಲಕ್ಕೆ ಹೋಗಿ ಅಲ್ಲಿ 'ಕ್ಷೀರಬಂಧು' ಬಿರುದು ತೆಗೆದುಕೊಂಡು ಆಮೇಲೆ ಹೋದರು. ಅಲ್ಲಿಯವರೆಗೆ ಹೋಗಲೇ ಇಲ್ಲ. 4ನೇ ತಾರೀಖು ಶ್ರೀಮತಿ ಸೋನಿಯಾ ಗಾಂಧಿಯವರು ಬಂದರು. ಆಮೇಲೆ 8–9ನೇ ತಾರೀಖು Prime Minister ರವರು ಬಂದರು. ಶ್ರೀ ಚಿದಂಬರಂರವರು, ಶ್ರೀಮತಿ ಸೋನಿಯಾ ಗಾಂಧಿಯವರು 4ನೇ ತಾರೀಖು ಬಂದರು, ಇವರು 3ನೇ ತಾರೀಖು ಹೋದರು. ಆಂಧ್ರ ಪ್ರದೇಶ ಮತ್ತು ಇಲ್ಲಿಗೆ 9ನೇ ತಾರೀಖು Prime Minister ರವರು ಬಂದರು. ಇವು ಎಲ್ಲಾ facts ಅಲ್ಲವೆ? All these facts cannot be disproved. Admitted facts need not be proved. What more evidence is required for this? ನಮ್ಮ ಬಾಯಿಂದ ಸತ್ಯ ಹೇಳಿದರೆ ನಿಮಗೆ ಏಕೆ ಕೋಪ ಬರುತ್ತದೆ? ನೀವು ಬೇಕಾದರೆ ಏನು ಬೇಕಾದರೂ ಹೇಳಬಹುದು. 29,30,31 ಆಯಿತು. ಪುನ: ಅಕ್ಟೋಬರ್ 4 ರವರೆಗೆ ಇತ್ತು. ಅಕ್ಟೋಬರ್ 20ನೇ ತಾರೀಖು ಆದ ತಕ್ಷಣವೇ ರಾಜಕೀಯ ದೊಂಬರಾಟ ಶುರುವಾಯಿತು. ಇದು ಸುಳ್ಳೆ? ದೊಂಬರಾಟ ಶುರುವಾದದ್ದು ಸುಳ್ಳೆ? ಪತ್ರಿಕೆಗಳಲ್ಲಿ ಬಂದಿದೆ ಜನ ಓದಿದ್ದಾರೆ. ಯಡಿಯೂರಪ್ಪನವರು, 'ಯಾರೋ ಕೆಲವು ರಾಜಕಾರಣಿಗಳ ಕೈಗೆ ಸರ್ಕಾರ ಉರುಳಿಸಲಕ್ಕೆ ನಾನು ಬಿಡುವುದಿಲ್ಲ' ಎಂದು ಅವರು ಹೇಳಿದ್ದು ಸತ್ಯವಲ್ಲವೆ? ಕರುಣಾಕರ ರೆಡ್ಡಿ ಯವರು ಕಂಸನ ವಧೆಯಾಗುತ್ತದೆಂದು ಹೇಳಿದ್ದು ಸುಳ್ಳೆ? ಇನ್ನೂ ಸಿನಿಮಾ ಮುಗಿದಿಲ್ಲವೆಂದು ಅವರು ಹೇಳಿದ್ದು ಸುಳ್ಳೆ? ಅವರು ಬೇಕಾದರೆ ಹೇಳಲಿ ಅವರ ಹೇಳಿಕೆಗಳಲ್ಲೆವೂ ಇಲ್ಲಿ ಇದೆ ಬೇಕಾದರೆ ತೋರಿಸುತ್ತೇನೆ.

(ಗೊಂದಲ)

11.30 ಎ.ಎಂ.

ಶ್ರೀ ನೆಹರೂ ಓಲೇಕಾರ ಚೆನ್ನಬಸಪ್ಪ : ಅದು ಎಲ್ಲಾ ಪಕ್ಷಗಳಲ್ಲಿ ಇರುವಂಥದ್ದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : Please sit–down, ಕೇಳಿ ಸ್ವಲ್ಪ, ನೀವು ಸ್ವಲ್ಪ ಇವೆಲ್ಲಾ ಕೇಳಿಕೊಂಡು ತಿಳಿದುಕೊಳ್ಳಬೇಕು. ಹಾಗಾದರೆ ಮಾತನಾಡುವುದು ಬೇಡವೆ? ದಮ್ಮಯ್ಯಾ ದಯಮಾಡಿ ಕುಳಿತುಕೊಳ್ಳಿ, ಓಲೇಕಾರ್‌ರವರೆ, ನೀವು ಎಲ್ಲಾ ಜೊತೆಯಲ್ಲಿ ಇದ್ದವರು ಏಕೆ ಹೀಗೆ ಮಾಡುತ್ತೀರಿ? ಅಲ್ಲಿಗೆ ಹೋದ ಮೇಲೆ ಏಕೆ ಹೀಗೆ ಆಗಿಬಿಟ್ಟಿರಿ? ಇದು ನಿಜ ಅಲ್ಲವೆ? ಇನ್ನೂ climax ಮುಗಿದಿಲ್ಲ, ಇನ್ನೂ climax ಗೆ ಹೋಗಬೇಕಾಗಿದೆ ಎಂದು ಯಾವತ್ತು ಹೇಳಿದ್ದು ನವೆಂಬರ್ 2ನೇ ತಾರೀಖು. ನವೆಂಬರ್ 8ನೇ ತಾರೀಖು, ಯಡಿಯೂರಪ್ಪನವರು ಗದಗ್ ಜಿಲ್ಲೆಗೆ ಗುದ್ದಲಿ ಪೂಜೆ ಮಾಡುವುದಕ್ಕೆ ಹೋಗುತ್ತಾರೆ. ಶ್ರೀರಾಮುಲು ಅಲ್ಲಿಯೇ ಇರುತ್ತಾರೆ. ಅವರು ಜಿಲ್ಲಾ ಮಂತ್ರಿಗಳು ಬಂದಿದ್ದರೆ? ನೀವು ಬಳ್ಳಾರಿಗೆ ಹೋಗುತ್ತೀರಿ, ಜಿಲ್ಲಾಧಿಕಾರಿ ಬಂದಿದ್ದರೆ? ಕರುಣಾಕರ ರೆಡ್ಡಿಯವರು ಅವರೇ separate ಆಗಿ ಶಿರುಗುಪ್ಪ ತಾಲ್ಲೂಕಿನಲ್ಲಿ ಹೋಗಿ ಗುದ್ದಲಿ ಪೂಜೆ ಮಾಡುತ್ತಾರೆ. ನಿಮ್ಮನ್ನು ಅಲ್ಲಿಗೆ ಕರೆದಿದ್ದರೆ? ಜಿಲ್ಲಾ ಮಂತ್ರಿಗಳೇ ನಿಮ್ಮ ಜೊತೆಗೆ ಬರುವುದಿಲ್ಲ, ನಿಮ್ಮ ಜಿಲ್ಲಾಧಿಕಾರಿಗಳೇ ನಿಮ್ಮನ್ನು ನೋಡುವುದಕ್ಕೆ ಬರುವುದಿಲ್ಲ, ಇದನ್ನು ಏನೆಂದು ಕರೆಯಬೇಕು? Can we call it a Government, ಈ ಸರ್ಕಾರ ಇದೆಯೇ? ಇಲ್ಲವೆ? ಎನ್ನುವ ಪ್ರಶ್ನೆ ಸಹಜವಾಗಿ ಏಳುತ್ತದೆ ಅಲ್ಲವೆ? According to me ಆ ಒಂದು ತಿಂಗಳು there was no governance at all in the State. There was no Government at all in the State. ಆಡಳಿತವೇ ಇರಲಿಲ್ಲ. ಸತ್ತು ಹೋಗಿತ್ತು ಸರ್ಕಾರ. ನಿರ್ಜೀವವಾಗಿ ಬದುಕಿತ್ತು. ಪಾಪ ಉದಾಸಿಯವರೇನು, ಪರವಾಗಿಲ್ಲ ನಾವು ಏನು Chief Minister ಕಡೆ ಇದ್ದೇವೆ ಎಂದು ಹೇಳುತ್ತಿದ್ದರು. ನಮ್ಮ ಬಚ್ಚೇಗೌಡರವರು ಇಲ್ಲ. ನಮ್ಮ ಜೊತೆಗೆ 85 ಶಾಸಕರು ಇದ್ದಾರೆ ಹುಷಾರ್ ಎಂದು ಹೇಳುತ್ತಿದ್ದರು. ಇವರು

113 ಎಂದು ಹೇಳಲೇ ಇಲ್ಲ. 85 ಶಾಸಕರು ಇದ್ದಾರೆಂದು ಬಚ್ಚೇಗೌಡರವರು ಹೇಳುತ್ತಿದ್ದರು. ಶ್ರೀರಾಮುಲುರವರು, ನಮ್ಮ ಹತ್ತಿರ 61 ಜನ ಇದ್ದಾರೆ, 40 ಜನ ಹೈದರಾಬಾದ್‌ನಲ್ಲಿ, 20 ಜನ ಗೋವಾದಲ್ಲಿ ಒಟ್ಟು 61 ಜನ ಇದ್ದಾರೆ, ಹೇಗೆ ಯಡಿಯೂರಪ್ಪನವರು ಮುಖ್ಯಮಂತ್ರಿಗಾಗಿ ಮುಂದುವರೆಯುತ್ತಾರೆ ನೋಡುತ್ತೇನೆಂದು ಇವರು ತೊಡೆ ತಟ್ಟುತ್ತಿದ್ದರು. ಏನು ತೊಡೆ ತಟ್ಟಿದ್ದೇ ತಟ್ಟಿದ್ದು. ಜನ ಇವರ ಮೋಜು ನೋಡಿ ಆನಂದಪಟ್ಟಿದ್ದೇ ಪಟ್ಟಿದ್ದು. ಆದರೆ, ultimately suffer ಆದವರು ಪ್ರವಾಹದಿಂದ ತೊಂದರೆಗೊಳಗಾದ ಜನರು. ಆ ಜನ ಕಣ್ಣೀರಿನಲ್ಲಿ ಕೈ ತೊಳೆದರು. ಅವರ ಶಾಪ, ಪತ್ರಿಕೆಗಳಲ್ಲಿ ಬರುತ್ತಿತ್ತು. 'ಸೋತು ಹೋದ ಬಿಜೆಪಿ' ಇದು ಕನ್ನಡ ಪ್ರಭದ editorial.

ಶ್ರೀ ಯು.ಟಿ. ಖಾದರ್ : ಶೋಭಾ ಕರಂದ್ಲಾಜೆಯವರು ನಿರಾಶ್ರಿತರಾದರು.

ಶ್ರೀ ಸಿದ್ದರಾಮಯ್ಯ : ಪಾಪ ಯಡಿಯೂರಪ್ಪನವರಿಗೆ ಎಲ್ಲಿಯವರೆಗೆ ಗತಿ ಬಂತೆಂದರೆ, ಕರುಣಾಕರ ರೆಡ್ಡಿ, ಜನಾರ್ಧನ ರೆಡ್ಡಿ, ಶ್ರೀರಾಮುಲು ರವರ ಹೊಡೆತಕ್ಕ ತತ್ತರಿಸಿ ಹೋಗಿಬಿಟ್ಟು ಕೊನೆಗೆ ಅವರು ಹೇಳಿದ ಹಾಗೆ ಕೇಳುವುದಕ್ಕೆ ಶುರು ಮಾಡಿಬಿಟ್ಟರು. ಪಾಪ ನಂಬಿಕಸ್ತೆ ಮೇಡಂ ನಮ್ಮ ಜಿಲ್ಲೆಯ ಜಿಲ್ಲಾ ಮಂತ್ರಿಗಳಾಗಿದ್ದರು, ಮೇಡಂನವರೆ, ನೀವು ಹೋದ ಮೇಲೆ ನಮ್ಮ ಜಿಲ್ಲೆಯಲ್ಲಿ ಜಿಲ್ಲಾ ಮಂತ್ರಿಯಾಗಿ ಯಾರೂ ಇಲ್ಲ. ನಂಬಿಕಸ್ತ ಮಂತ್ರಿ, ನಂಬಿಕಸ್ತ ಅಧಿಕಾರಿಯಾಗಿದ್ದ ಬಳಿಗಾರ್, ಇವರನ್ನು ಬಿಟ್ಟುಬಿಟ್ಟು ನಾನು ತಪ್ಪು ಮಾಡಿದೆ ಎಂದು ಯಡಿಯೂರಪ್ಪನವರು ಅಳುವುದಕ್ಕೆ ಶುರು ಮಾಡಿಬಿಟ್ಟರು.

(ಗೊಂದಲ)

ಶ್ರೀ ಎಂ. ಶ್ರೀನಿವಾಸ (ರಾಜರಾಜೇಶ್ವರಿನಗರ) : ಬಿಜೆಪಿ ಸರ್ಕಾರ ಬಿದ್ದು ಹೋಗಿದೆ ಎಂದು ನೀವು ಎಲ್ಲಾ ರಾತ್ರೋರಾತ್ರಿ ಓಡಿ ಹೋಗಿದ್ದೀರಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನೀವು ನಮ್ಮ ಜೊತೆಗೆ ಇದ್ದಾಗ ಅವೆಲ್ಲಾ ಆಗಿ ಹೋಯಿತು ಬಿಡಿ.

(ಗೊಂದಲ)

ಶ್ರೀ ಬಿ. ರಮಾನಾಥ್ ರೈ : ನಮ್ಮಿಂದ ಏನೋ ತಪ್ಪಾಗಿರುವುದಕ್ಕೆ ನಾವು ಈ ಭಾಗಕ್ಕೆ ಬಂದಿರುವುದು. ಈಗ ಅದನ್ನೇ ನೀವು ಮಾಡುತ್ತಾ ಹೋದರೆ ನಿಮ್ಮ ತಪ್ಪು ಮುಚ್ಚಿ ಹೋಗುವುದಿಲ್ಲ. ನೀವು ಏನು ಮಾಡಿದಿರಿ, ನೀವು ಏನು ಮಾಡಿದಿರಿ, ಎಂದು ಎಷ್ಟು ದಿವಸಗಳ ಕಾಲ ಇದೇ ಮಾತನ್ನು ಹೇಳುತ್ತೀರಿ? ಒಂದು ವರ್ಷ ಹೇಳಬಹುದು. ಎರಡು ವರ್ಷ ಹೇಳಬಹುದು. ವರ್ಷಾನುಗಟ್ಟಲೆ ಇದೇ ಮಾತು ಹೇಳಬಹುದೆ?

(ಗೊಂದಲ)

ಶ್ರೀ ಎಂ.ಪಿ. ರೇಣುಕಾಚಾರ್ಯ : ನಮ್ಮ ಸಮಸ್ಯೆಯನ್ನು ನಾವು ಯಾವ ರೀತಿ ಬಗೆಹರಿಸಿಕೊಂಡಿದ್ದೇವೆಂದು ಇಡೀ ರಾಜ್ಯದ ಜನಕ್ಕೆ ಗೊತ್ತಿದೆ. ನಿಮ್ಮಲ್ಲಿ ಅಧಿಕಾರಕೋಸ್ಕರ ಬೀದಿಯಲ್ಲಿ ಕಚ್ಚಾಡಿಲ್ಲವೆ? ಯಾವ ರೀತಿ ಕಚ್ಚಾಡಿದಿರಿ ಎಂದು ಇಡೀ ರಾಜ್ಯದ ಜನತೆಗೆ ಗೊತ್ತಿದೆ.. ಇದು ನಮ್ಮ ಕುಟುಂಬದ ಸಮಸ್ಯೆ ನಾವು ಬಗೆಹರಿಸಿಕೊಳ್ಳುತ್ತೇವೆ.

(ಗೊಂದಲ)

ಅಧ್ಯಕ್ಷರು : Please ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಿ. ರಮಾನಾಥ್ ರೈ : "ನಾನೇನು ತಪ್ಪು ಮಾಡಿದ್ದೇನೆ ಸಾಚಾನೇ ಮುಖ್ಯಮಂತ್ರಿಗಳು?" ಎಂದು ಹೇಳಿದಿರಿ. ಸುಮ್ಮನೆ ಏಕೆ ಹೇಳುತ್ತೀರಿ.

ಶ್ರೀ ಎಂ.ಪಿ.ರೇಣುಕಾಚಾರ್ಯ : ನಮ್ಮ ಸಮಸ್ಯೆಯನ್ನು ನಾವು ಬಗೆಹರಿಸಿಕೊಂಡಿದ್ದೇವೆ.

ಶ್ರೀ ಬಿ. ರಮಾನಾಥ್ ರೈ : ತಮ್ಮ ಸಮಸ್ಯೆ ಏನೆಂದು ಗೊತ್ತಿದೆ. ಮಂತ್ರಿಯಾಗುವುದು ಒಂದೇ ಸಮಸ್ಯೆ. ಸಮಸ್ಯೆ ಎಲ್ಲರಿಗೆ ಅರ್ಥವಾಗಿದೆ, ಗೊತ್ತಾಗಿದೆ. ನೀವು ಏನು ಎಂದು ಇಡೀ ಕರ್ನಾಟಕದ ಆರು ಕೋಟಿ ಜನರಿಗೆ ಅರ್ಥವಾಗಿದೆ.

(ಗೊಂದಲ)

ಅಧ್ಯಕ್ಷರು : ರಮಾನಾಥ್ ರೈ ರವರೇ ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ನಾವೇನು ಹೊಸದಾಗಿ ಏನು ಹೇಳುತ್ತಿಲ್ಲ. ಇದೆಲ್ಲಾ ನಡೆದಿರುವುದು, ಜನ ನೋಡಿರುವುದು, ಜನ ಕೇಳಿರುವುದು, ಜನ ಓದಿರುವುದು, ಮತ್ತೆ ಯಡಿಯೂರಪ್ಪನವರು ಅಳುತ್ತಿರುವುದು, ಇಡೀ ಆರು ಕೋಟಿ ಜನ ಎಲ್ಲಾ ನೋಡಿದ್ದಾರೆ. ಇದೇನು ಹೊಸದೆ? ನಾನೇನು ಹೊಸದು ಹೇಳುತ್ತಿದ್ದೇನೆಯೆ? ಪಾಪ, 'ನಾನು ಇಂಥ ತಪ್ಪು ಮಾಡಬಾರದಾಗಿತ್ತು ನಮ್ಮನ್ನು ಯಾರು ಕ್ಷಮಿಸುವುದಿಲ್ಲ' ಎಂದು ಹೇಳಿದರು. ಆಗ ಈಶ್ವರಪ್ಪನವರು, ನಾವು ತಪ್ಪು ಮಾಡಿ ಬಿಟ್ಟಿದ್ದೇವೆ ಜನರ ಕ್ಷಮೆ ಕೇಳುತ್ತೇವೆ' ಎಂದು ಅವರು ಹೇಳಿದ್ದಾರೆ. ಇವರ ಪಕ್ಷದವರಾದ ರಾಮಾಜೋಯಿಸರು, ಮಾಜಿ Chief Justice ಅವರು, ಇಂಥ ದೊಡ್ಡ ಅಪರಾಧ ಮಾಡಿದ್ದಾರೆ, ಮಾಡಬಾರದಾಗಿತ್ತು, ರಾಜ್ಯದ ಜನತೆ ಕಷ್ಟಕ್ಕೆ ಸಿಕ್ಕಿ ಹಾಕಿಕೊಂಡಿದ್ದಾರೆ, ಇವರ ಕಷ್ಟ ಪರಿಹಾರ ಮಾಡದೇ ಅಧಿಕಾರಕ್ಕಾಗಿ, ಕುರ್ಚಿಗಾಗಿ ಜಗಳ ಆಡುತ್ತಾ ಇದ್ದಾರೆ, ಬೀದಿ ರಂಪ ಮಾಡಿಕೊಂಡಿದ್ದಾರೆಂದು ಹೇಳಿದ್ದಾರೆ. ಲೋಕಾಯುಕ್ತರು, Governor ರವರು ಹೇಳಿದ್ದಾರೆ. ದೊಡ್ಡ ದೊಡ್ಡ ಸಾಹಿತಿಗಳೆಲ್ಲರೂ ಹೇಳಿದ್ದಾರೆ. ಇವರೆಲ್ಲರೂ ಹೇಳಿರುವುದನ್ನೇ ನಾನು ಇಲ್ಲಿ ರಿಪೀಟ್ ಮಾಡುತ್ತಿದ್ದೇನೆ ಅಷ್ಟೆ. ಏಕೆಂದರೆ, ಇಲ್ಲಿ ತಾನೇ ನಮಗೆ ಹೇಳುವುದಕ್ಕೆ ಅವಕಾಶವಿರುವುದು. This is the forum, where I have to express my views and the views of the people of Karnataka. This is the right forum. ಇದನ್ನೇ ನಾನು ಹೇಳುತ್ತಿದ್ದೇನೆ.

ಈ ರೀತಿ ಆಗಬಾರದಾಗಿತ್ತೆಂದು ಮಾನ್ಯ ಯಡಿಯೂರಪ್ಪನವರು ಹೇಳಿಕೊಂಡಿದ್ದಾರೆ. ಈ ರೀತಿಯಾಗಿ ಹೇಳಿಕೊಂಡು ಇವರು ಅತ್ತ ಮೇಲೆ ನಿಜವಾದ ಕಣ್ಣೀರಲ್ಲ ಇದು ಮೊಸಳೆ ಕಣ್ಣೀರೆಂದು ಮಾನ್ಯ ಜನಾರ್ದನ ರೆಡ್ಡಿಯವರು ಹೇಳಿದ್ದಾರೆ. ಆದರೆ, ಇವರು ನಿಜವಾಗಿ ಮತ್ತು ಪ್ರಾಮಾಣಿಕವಾಗಿ ಅತ್ತಿದ್ದಾರೆ.

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿನಗರ) : ನಿಮ್ಮ ಬಗ್ಗೆ ನಿಮ್ಮ ಮಾಜಿ ಮಂತ್ರಿಗಳು ಸಹ ಮಾತನಾಡಿದ್ದಾರೆ.

ಅಧ್ಯಕ್ಷರು : ತಾವು ದಯವಿಟ್ಟು ಕುಳಿತುಕೊಳ್ಳಿ. ಮಧ್ಯದಲ್ಲಿ ಎದ್ದು ಏನು ಬೇಕಾದರು ಮಾತನಾಡಬಹುದೆ?

ಶ್ರೀ ಎಂ. ಶ್ರೀನಿವಾಸ್ (ರಾಜರಾಜೇಶ್ವರಿನಗರ) : ಅವರು ಏನು ಬೇಕಾದರೂ ಹೇಳುವುದನ್ನು ಕೇಳುವುದಕ್ಕೆ ನಾವಿಲ್ಲ. ಇವರು ಎಲ್ಲಿಂದಲೋ ಕಾಂಗ್ರೆಸ್ ಪಕ್ಷಕ್ಕೆ ಬಂದಿದ್ದರಿಂದ ನಮ್ಮ ಕಾಂಗ್ರೆಸ್ ಪಕ್ಷ ಹಾಳಾಗಿ ಹೋಯಿತ್ತೆಂದು ಮಾಜಿ ಮಂತ್ರಿಗಳು ಹೇಳಿದ್ದಾರೆ.

ಅಧ್ಯಕ್ಷರು : ನೀವು ಮಾತನಾಡುವುದು ರೆಕಾರ್ಡ್‌ಗೆ ಹೋಗಬಾರದೆಂದು ಹೇಳಬೇಕಾಗುತ್ತದೆ. ಅವರು ಹೇಳತಕ್ಕಂಥದ್ದನ್ನು ದಾಖಲೆಗೆ ತೆಗೆದುಕೊಳ್ಳಬೇಡಿ.

(ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಈ ಹಂತದಲ್ಲಿ ಮಾನ್ಯ ಎಂ.ಶ್ರೀನಿವಾಸ್‌ರವರು ಮಾತನಾಡಿರುವುದನ್ನು ದಾಖಲು ಮಾಡಿಕೊಂಡಿಲ್ಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಈ ಎಲ್ಲಾ ವಿಷಯಗಳು ಟಿ.ವಿ. ಮಾಧ್ಯಮದಲ್ಲಿ ಪತ್ರಿಕೆಗಳಲ್ಲಿ ಹಾಗೂ ನಮ್ಮ ದೇಶದ ಚಾನೆಲ್‌ನಲ್ಲಿ ಅಲ್ಲದೆ ವಿದೇಶದ ಚಾನೆಲ್‌ಗಳಲ್ಲಿಯೂ ಕೂಡ ವರದಿಯಾಗಿದೆ. ಮಾನ್ಯ ಮುಖ್ಯಮಂತ್ರಿಯವರಿಗೆ ಕಣ್ಣೀರು ಬಂದಿತ್ತು. ಇದನ್ನು ನೋಡಿ ಒಬ್ಬ ರಾಜ್ಯದ ಮುಖ್ಯಮಂತ್ರಿಯವರಿಗೆ ಈ ರೀತಿಯಾಗಬಾರದಾಗಿತ್ತೆಂದು ನನಗೂ ಕೂಡ ಬಹಳ ನೋವಾಯಿತು. ಮಾನ್ಯ ಸಿ.ಟಿ.ರವಿಯವರು ಸಹ ಮೈಸೂರಿನಲ್ಲಿ ಹೋಗಿ ಹೇಳಿಕೆ ಕೊಟ್ಟಿದ್ದಾರೆ.

ಅಧ್ಯಕ್ಷರು : ನೀವು ಅವರ ಹೆಸರುಗಳನ್ನು ಹೇಳಬೇಡಿ. ಏಕೆಂದರೆ, ಅವರೂ ಸಹ ಎದ್ದು ನಿಂತುಕೊಳ್ಳುತ್ತಾರೆ.

ಶ್ರೀ ಸಿದ್ದರಾಮಯ್ಯ : ಅವರು ನಮ್ಮ ಸ್ನೇಹಿತರು ಆ ರೀತಿ ಮಾಡುವುದಿಲ್ಲ. ಅವರು ಮೈಸೂರಿನಲ್ಲಿರುವ ಚಾಮುಂಡಿ ಬೆಟ್ಟಕ್ಕೆ ಹೋದಂಥ ಸಂದರ್ಭದಲ್ಲಿ ಸರ್ಕಾರದ ಬಗ್ಗೆ ನಿಮ್ಮ ಅಭಿಪ್ರಾಯ ಏನೆಂದು ಮಾನ್ಯ ಸಿ.ಟಿ.ರವಿಯವರನ್ನು ಕೇಳುತ್ತಾರೆ. "ಏನೂ ಮಾಡುವುದಕ್ಕೆ ಆಗುವುದಿಲ್ಲ, ಹೆತ್ತವರಿಗೆ ಹೆಗ್ಗಣ ಮುದ್ದು" ಎಂದು ಆ ಸಂದರ್ಭದಲ್ಲಿ ಇವರು ಹೇಳಿದ್ದಾರೆ. 'How do you rate the performance of your Government' ಎಂದು ಪತ್ರಿಕೆಯವರೆಲ್ಲಾ ಕೇಳಿದಾಗ, his reaction was, 'ಬಹಳ ತಪ್ಪುಗಳಾಗಿವೆ. ಆದರೆ, ಹೆತ್ತವರಿಗೆ ಹೆಗ್ಗಣ ಮುದ್ದು ಏನು ಮಾಡುವುದಕ್ಕೆ ಆಗುತ್ತದೆ ಎಂದು ಮಾನ್ಯ ಸಿ.ಟಿ.ರವಿಯವರು ಹೇಳಿದ್ದಾರೆ. ನಾನು

ಅವೆಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಬಾಲಕೃಷ್ಣರವರೆ, ತಾವು ಮಾತನಾಡುವಂಥ ಸಂದರ್ಭದಲ್ಲಿ ಯಾರು ಹೆಗ್ಗಣ ಎಂದು ಹೇಳಿ. ನಾನು ಹೇಳುವುದೇನೆಂದರೆ, ಇಲ್ಲಿ ಯಾರೂ ಹೆಗ್ಗಣ ಆಗಿಲ್ಲ.

ಶ್ರೀ ಸಿ.ಸಿ.ಪಾಟೀಲ್ : ಇಂಥ ದಿವಸ ಮಾನ್ಯ ಬಾಲಕೃಷ್ಣರವರು ಮಂತ್ರಿಯಾಗಿ ಪ್ರಮಾಣವಚನ ಸ್ವೀಕಾರ ಮಾಡುತ್ತಾರೆಂದು ಗೌರವಾನ್ವಿತ ಮಾಜಿ ಮುಖ್ಯ ಮಂತ್ರಿಗಳು ಹೇಳಿರತಕ್ಕಂಥ ವಿಷಯಗಳೆಲ್ಲಾ ಪತ್ರಿಕೆಗಳಲ್ಲಿ ಬಂದಂಥದ್ದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಪಾಟೀಲ್‌ರವರೆ, ಮಾನ್ಯ ಬಾಲಕೃಷ್ಣರವರು ಮಂತ್ರಿಯಾಗುವುದು ಬೇಡ. ನೀವು ನಮ್ಮ ಮನುಷ್ಯರಾಗಿದ್ದೀರಿ. ಆದ್ದರಿಂದ, ಈಗ ತಾವು ಮಂತ್ರಿಯಾಗಿ. ಮಾನ್ಯ ಮುಖ್ಯಮಂತ್ರಿಗಳೆ, ಮಾನ್ಯ ಸಿ.ಸಿ.ಪಾಟೀಲ್‌ರವರು ಒಳ್ಳೆಯ ಮನುಷ್ಯರಾಗಿದ್ದಾರೆ. ಆದ್ದರಿಂದ ಅವರನ್ನು ಮಂತ್ರಿಗಳನ್ನಾಗಿ ಮಾಡಿ. ಮಾಡುವುದಿಲ್ಲವೆ? ಹೋಗಲಿ ಬಿಡಿ.

ಶ್ರೀ ಎಂ.ಪಿ.ರೇಣುಕಾಚಾರ್ಯ : ಅವರಿಗೆ ಟಿಕೆಟ್ ಕೊಟ್ಟು ಅವರನ್ನು ಯಾವರೀತಿಯಾಗಿ ಬಲಿಪಶು ಮಾಡಿದರು ಎಂದು ಅವರೇ ಕಣ್ಣೀರು ಹಾಕಿದರು.

ಶ್ರೀ ಎಂ.ಪಿ.ರೇಣುಕಾಚಾರ್ಯ : ಕುಳಿತುಕೊಳ್ಳಿ, ನೀವು ಏನು ಮಾಡಿದ್ದೀರೆಂಬುದೆಲ್ಲಾ ಗೊತ್ತಿದೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ರೇಣುಕಾಚಾರ್ಯರವರೆ, ತಾವು ಇನ್ನೂ ಮಂತ್ರಿಗಳಾಗಿಲ್ಲವೆಂದು ತಿಳಿದುಕೊಂಡಿದ್ದೀರಾ? ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ.ಪಿ.ರೇಣುಕಾಚಾರ್ಯ : ಅವರು ಹಿರಿಯ ಸದಸ್ಯರಾಗಿದ್ದಾರೆ ಮತ್ತೆ ಸಚಿವರಾಗಿ ಕೆಲಸ ಮಾಡಿದ್ದಾರೆ. ಯಾವ ರೀತಿಯಾಗಿ ಮಾತನಾಡಬೇಕೆಂಬ ಪ್ರಜ್ಞೆ ಅವರಿಗೆ ಇಲ್ಲವೆ?

ಶ್ರೀ ಸಿದ್ದರಾಮಯ್ಯ : ಮಾನ್ಯ ರೇಣುಕಾಚಾರ್ಯರವರೆ, ನೀವೇಕೆ ಮಧ್ಯೆ ಮಧ್ಯೆ ಎದ್ದು ಮಾತನಾಡುತ್ತೀರಿ? ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ.ಪಿ.ರೇಣುಕಾಚಾರ್ಯ : ಅವರು ಎಷ್ಟು ಬಾರಿ ಸದಸ್ಯರಾಗಿ ಮತ್ತು ಸಚಿವರಾಗಿ ಕೆಲಸ ಮಾಡಿದ್ದಾರೆ. ಅವರು ಗೌರವದಿಂದ ಮಾತನಾಡಬೇಕು.

ಶ್ರೀ ಸಿದ್ದರಾಮಯ್ಯ : ಆಯಿತು. ಇನ್ನು ಮುಂದೆ ಮಾತನಾಡುತ್ತಾರೆ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಯು.ಟಿ.ಖಾದರ್ : ನಿಮ್ಮ ಗೌರವವನ್ನು ಮೊದಲು ಉಳಿಸಿಕೊಂಡು ಆನಂತರ ಮಾತನಾಡುವ ಕೆಲಸವನ್ನು ಮಾಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ರೇಣುಕಾಚಾರ್ಯರವರು ಮಂತ್ರಿಯಾಗಿರುವುದನ್ನು ಮರೆತಿರಬೇಕೆಂದು ಕಾಣುತ್ತದೆ. ಮಾನ್ಯ ರೇಣುಕಾಚಾರ್ಯರವರೆ, ತಾವು ಮಂತ್ರಿಯಾಗಿದ್ದೀರಿ. You are Hon'ble Minister in the Government, Hon'ble Minister of the Yeddyurappa Government. ತಾವು ಅಬಕಾರಿ ಮಂತ್ರಿಗಳಾಗಿದ್ದೀರಿ ಇದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿ. ನೀವು ಹೈದರಾಬಾದ್‌ನಲ್ಲಿ ಏನು ಹೇಳಿದ್ದೀರಿ ಎಂಬುದನ್ನು ಹೇಳಲೆ? ಸುಮ್ಮನೆ ಅವೆಲ್ಲಾ ಏಕೆ ಮತ್ತೆ ಕೆಣಕುವುದಕ್ಕೆ ಹೋಗುತ್ತೀರಿ, ಬೇಡ ಬಿಡಿ. ಹೈದರಾಬಾದ್‌ನಲ್ಲಿ ಇವರು ಮಾತನಾಡುತ್ತಾ ಮಾನ್ಯ ಯಡಿಯೂರಪ್ಪನವರು ನಮಗೆ ತಂದೆಯ ಸಮಾನ ಎಂದು ಹೇಳಿ ಅದರ ಹಿಂದೆ ಏನು ಹೇಳಿದ್ದು ಮತ್ತು ಬೇಳೂರು ಗೋಪಾಲಕೃಷ್ಣ ಅವರು ಹೇಳಿದ್ದು ಗೊತ್ತಿದೆ. ಆಂಧ್ರದಲ್ಲಿ ಯಾವರೀತಿಯಾಗಿ ಅಭಿವೃದ್ಧಿ ಆಗಿದೆ ಎಂಬುದನ್ನು ನೋಡುವುದಕ್ಕೆ ಬಂದಿದ್ದೇವೆಂದು ಹೇಳಿದ್ದೀರಿ.

ಶ್ರೀ ಎಂ.ಪಿ.ರೇಣುಕಾಚಾರ್ಯ : ಮಾನ್ಯ ಯಡಿಯೂರಪ್ಪನವರು ಯಾವತ್ತೂ ಕೂಡ ನಮಗೆ ತಂದೆಯ ಸಮಾನರು ಎಂದು ಈಗಲೂ ಸಹ ಹೇಳುತ್ತೇವೆ.

ಶ್ರೀ ಸಿದ್ದರಾಮಯ್ಯ : ಆಂಧ್ರದಲ್ಲಿ ಆಗಿರುವ ಅಭಿವೃದ್ಧಿ ಕೆಲಸ ನೋಡುವುದಕ್ಕೆ ಬಂದಿದ್ದೇವೆಂದು ಹೇಳಿದ್ದೀರಿ. ಇವರುಗಳು ಅಲ್ಲಿ ಒಂದು ವಾರ ಇದ್ದುಕೊಂಡು ಆಂಧ್ರ ಪ್ರದೇಶ ಅಭಿವೃದ್ಧಿಯನ್ನು ನೋಡಿದ್ದೇ ನೋಡಿದ್ದು. ಹೈದರಾಬಾದಿಗೆ ಹೆಲಿಕಾಪ್ಟರ್‌ನಲ್ಲಿ ಹೋಗಿ ಮತ್ತೆ ಆ ಕಡೆಯಿಂದ

ವಾಪಸ್ಸು ಬಂದು ಅಭಿವೃದ್ಧಿ ನೋಡಿದ್ದೇವೆಂದು ಹೇಳಿದ್ದಾರೆ. ಮತ್ತೆ ಇವರು ಅಭಿವೃದ್ಧಿ ನೋಡುವುದಕ್ಕೆ ಅಲ್ಲಿಗೆ ಹೋಗಿದ್ದಾಗ ಮಾನ್ಯ ಯಡಿಯೂರಪ್ಪನವರ ಕಡೆಯವರು ಗುಲ್ಬರ್ಗಾದಿಂದ ಮೇಡಕ್ ಜಿಲ್ಲೆಗೆ ಹೋಗಿ ಇವರುಗಳಿಗೆ ಹೊಡೆಯುವುದಕ್ಕೆ ಹೋಗಿದ್ದಾಗ ಪೊಲೀಸ್‌ನವರು ಅವರನ್ನು ಬಿಡಲಿಲ್ಲ. ಇದು ನಿಮಗೆ ಗೊತ್ತೆ? ನಾವು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ರಾಷ್ಟ್ರೀಯ ದುರಂತ ನಡೆದಂಥ ಸಂದರ್ಭದಲ್ಲಿ ತಾವುಗಳು ಈ ಕೆಲಸವನ್ನು ಮಾಡಿದ್ದೀರಿ. ಸುಮಾರು 1.8 ಕೋಟಿ ಜನ ಕಷ್ಟದಲ್ಲಿ ಸಿಲುಕಿಕೊಂಡಂಥ ಸಂದರ್ಭದಲ್ಲಿ ನಡೆದಿರುವಂಥ ದೊಂಬರಾಟದ ಬಗ್ಗೆ ನಾನು ಹೇಳುತ್ತಿದ್ದೇನೆ. ದೊಂಬರಾಟ ಮಾಡಿಲ್ಲವೆಂಬುದರ ಬಗ್ಗೆ ಆನಂತರ ತಾವು ಹೇಳಿ. 1.8 ಕೋಟಿ ಜನರು ಅಲ್ಲಿ ಸಂಕಷ್ಟದಲ್ಲಿದ್ದಾರೆಂದು ತಾವೇ ಹೇಳಿದ್ದೀರಿ. ಇಷ್ಟೆಲ್ಲಾ ತಾವು ಹೇಳಿ ಈ ರೀತಿಯಾಗಿ ಮಾಡಿದ್ದೀರಿ. ನಾವು ಮಾಡಿರುವುದರಿಂದಲೇ ಇಲ್ಲಿ ಬಂದು ಕುಳಿತುಕೊಂಡಿದ್ದೇವೆ. ನೀವು ಇದನ್ನೇ ಮಾಡಿದರೆ, ಇನ್ನು ಎರಡು–ಮೂರು ವರ್ಷಗಳಲ್ಲಿ ಹೋಗುತ್ತೀರಿ. ನೀವುಗಳು ಹೋಗುವುದಕ್ಕೋಸ್ಕರ ಏತಕ್ಕಾಗಿ ಕಾಯುತ್ತಿದ್ದೀರಿ? ಅಲ್ಲಿ ಜನರು ಕಷ್ಟದಲ್ಲಿರುವಾಗ ಇಲ್ಲಿಗೆ ಬಂದು ಜನ ಮೆಚ್ಚುವ ರೀತಿಯಲ್ಲಿ ಪರಿಹಾರ ಕೊಟ್ಟಿದ್ದೇವೆಂದು ಹೇಳಿದ್ದಾರೆ. ರಾಜಕಾರಣದಲ್ಲಿ ಅಧಿಕಾರ ಬರುತ್ತದೆ ಮತ್ತೆ ಹೋಗುತ್ತದೆ. ಆದರೆ, ಅಭಿವೃದ್ಧಿ ಮಂತ್ರವನ್ನು ಜಪ ಮಾಡಿಕೊಂಡು ನಾವು ಅಧಿಕಾರಕ್ಕೆ ಬಂದಿದ್ದೇವೆಂದು ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ. ಅಭಿವೃದ್ಧಿಯೇ ನಮ್ಮ ಮಂತ್ರ, ಅಭಿವೃದ್ಧಿ ಬಿಟ್ಟು ಬೇರೇನೂ ಇಲ್ಲ. ಹಾಗಾದರೆ, ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ನಡೆದಿದ್ದು ಅಭಿವೃದ್ಧಿಯ ಮಂತ್ರವೇನೋ? ಆಗ ಅಭಿವೃದ್ಧಿ ಮಂತ್ರಗಳೆಲ್ಲಾ ಮರೆತು ಹೋಗಿತ್ತೇ? ಜಪಿಸುವುದಕ್ಕೆ ನಿಮಗ್ಯಾರೂ ಹೇಳಿಕೊಡಲಿಲ್ಲವೆ ಅಥವಾ ನಿಮಗೆ ಜ್ಞಾಪಕ ಬರಲಿಲ್ಲವೆ? ಆ ಸಂದರ್ಭದಲ್ಲಿ ಅಭಿವೃದ್ಧಿಯನ್ನೇ ಇವರು ಮರೆತು ಬಿಟ್ಟರು. ಮಾನ್ಯ ಯಡಿಯೂರಪ್ಪನವರು ಮುಖ್ಯ ಮಂತ್ರಿಯ ಕುರ್ಚಿಯನ್ನು ಉಳಿಸಿಕೊಳ್ಳುವುದಕ್ಕೆ ಏನಾದರೂ ಆಗಲಿ ಎಂದು ಕುರ್ಚಿಯ ಕಾಲನ್ನು ಹಿಡಿದುಕೊಂಡು ಕುಳಿತರು. ಅವರು ಜನರಿಗೆ ಸತ್ಯ ಹೇಳಿರತಕ್ಕಂಥ ವಿಚಾರ

ಏನೆಂದರೆ, ನಾನು ಕುರ್ಚಿಗೋಸ್ಕರ ಮತ್ತು ಅಧಿಕಾರಕ್ಕೋಸ್ಕರ ಮಾಡಬಾರದನ್ನೆಲ್ಲಾ ಮಾಡಿಬಿಟ್ಟೆ, ಕೇಳಬಾರದನ್ನೆಲ್ಲಾ ಕೇಳಿಬಿಟ್ಟೆ ಮತ್ತೆ ಮಾಡಬಾರದೇ ಇರತಕ್ಕಂಥ ಆರ್ಡರ್ಸ್‌ನ್ನು ಮಾಡಿಬಿಟ್ಟೆ ಎಂದು ಹೇಳಿದರು. ಅವರು ಮಾಡಲಿಲ್ಲವೆ? 50 ಜನ ಅಧಿಕಾರಿಗಳನ್ನು ಮತ್ತೆ ವಾಪಸ್ಸು ಬಳ್ಳಾರಿಗೆ ಹಾಕಿದ್ದು ಆರ್ಡರ್‌ನಿಂದಲೋ ಅಥವಾ ಅವರು ಸುಮ್ಮನೆ ಇಲ್ಲಿಗೆ ನೆಗೆದುಬಿಟ್ಟರೊ? ಆರ್ಡರ್ಸ್ ಮಾಡಿಲ್ಲವೆಂದು ಮಧ್ಯದಲ್ಲಿ ಏಕೆ ಹೇಳುವುದಕ್ಕೆ ಹೋಗಿತ್ತೀರಿ? ನಮ್ಮ ಕಾಲದಲ್ಲಿ ಆಗಿರುವಂಥದ್ದನ್ನು ಹೇಳಿ ಆಗಿದೆ. ಈಗ ನಿಮ್ಮ ಕಾಲದಲ್ಲಿ ಆಗಿರುವುದನ್ನು ಹೇಳುತ್ತಿದ್ದೇನೆ. ನಮ್ಮ ಕಾಲದಲ್ಲಿನ ವಿಷಯ ಹೇಳಿದ್ದಾಗ ಮಾನ್ಯ ಸಿ.ಸಿ.ಪಾಟೀಲ್‌ರವರೆ ತಾವು ಇಲ್ಲಿಯೇ ಇದ್ದೀರಿ.

ಶ್ರೀ ಸಿ.ಸಿ.ಪಾಟೀಲ್ : ಇದಕ್ಕಿಂಥ ಮೊದಲು ಸಹ ಒಂದೇ ಕಡೆ ಇದ್ದೆವು.

ಶ್ರೀ ಸಿದ್ದರಾಮಯ್ಯ : ಈಗ ಆ ಕಡೆ ಹೋಗಿದ್ದೀರಷ್ಟೆ. ದಯವಿಟ್ಟು ಕುಳಿತುಕೊಳ್ಳಿ. ತಾವು ಮಧ್ಯದಲ್ಲಿ ಎದ್ದೇಳುವುದು ಸರಿಯಲ್ಲ. 50 ಜನ ಅಧಿಕಾರಿಗಳನ್ನು ವರ್ಗಾವಣೆ ಮಾಡಿದ್ದಾರೆ. ಗದಗ್ ಮತ್ತು ಬಳ್ಳಾರಿಯ ಜಿಲ್ಲಾಧಿಕಾರಿಗಳು ಹಾಗೂ ಇತರೆ ಅಧಿಕಾರಿಗಳನ್ನು ವರ್ಗಾವಣೆ ಮಾಡಿ within 15 days ಒಬ್ಬರನ್ನೂ ಬಿಡದ ಹಾಗೆ ವರ್ಗಾವಣೆ ಮಾಡಿದ್ದಾರೆ. ಹೋಗಲಿ ಇದರಲ್ಲಿ ಒಬ್ಬರನ್ನಾದರೂ ಉಳಿಸಿದ್ದೀರಾ? Those who were all transferred, they were all brought back. ಅಂದರೆ, ಅದೇ ಜಾಗಕ್ಕೆ ಮತ್ತೆ ವಾಪಸ್ಸು ಬಂದಿದ್ದಾರೆ. ಬೀದರ್ ಡಿ.ಸಿ.ಯವರನ್ನು ಕರೆದುಕೊಂಡು ಬಂದು ಇಲ್ಲಿಗೆ ಹಾಕಿದರು. ಅಕ್ರಮ ಗಣಿಗಾರಿಕೆ ನಡೆಯುವುದನ್ನೆಲ್ಲಾ ಹಿಡಿಯುವುದಕ್ಕೆ ಅವರು ಪ್ರಾರಂಭ ಮಾಡಿದರು. ಆದರೆ, ಅವರನ್ನು ಪುನ: ವಾಪಸ್ಸು ಕಳುಹಿಸಿದರು. ಗದಗ್‌ನಿಂದ ಬಂದಂಥ D.C. ಯವರು ಮತ್ತೆ ಗದಗ್‌ಗೆ ವಾಪಸ್ಸು ಹೋದರು. ಯಾರ ಮಾತಿನ ಮೇಲೆ ಅಧಿಕಾರಿಗಳು ಇಲ್ಲಿಗೆ ಬಂದಿದ್ದರು? ಮಾನ್ಯ ಶ್ರೀರಾಮುಲುರವರೆ, ತಮ್ಮ ಮಾತಿನ ಮೇರೆಗೆ ತಾನೆ ಅಧಿಕಾರಿಗಳು ಇಲ್ಲಿಗೆ ಬಂದಿರುವುದು? ಮಾನ್ಯ ಶ್ರೀರಾಮುಲುರವರೆ, ಇವತ್ತಿನ ದಿವಸ ಅಧಿಕಾರಿಗಳು ಏನು ಹೇಳುತ್ತಾರೆಂದರೆ, ಶ್ರೀರಾಮುಲುರವರು

ಏನು ಹೇಳುತ್ತಾರೆಯೋ ಆ ರೀತಿ ನಾವುಗಳು ಕೇಳುತ್ತೇವೆ. ಆದರೆ, ಮುಖ್ಯ ಮಂತ್ರಿಯವರು ಹೇಳಿದ ಹಾಗೆ ಕೇಳಿದರೆ ನಮಗೆ ಉಳಿಗಾಲ ಇಲ್ಲವೆಂದು ಎಲ್ಲಾ ಅಧಿಕಾರಿಗಳು ತೀರ್ಮಾನ ಮಾಡಿಕೊಂಡಿದ್ದಾರೆ. ಮಾನ್ಯ ಶ್ರೀರಾಮುಲು, ಮಾನ್ಯ ಕರುಣಾಕರ ರೆಡ್ಡಿಯವರೆ, ಈ ಸರ್ಕಾರದಲ್ಲಿ ನೀವುಗಳು ಎಷ್ಟು powerful ಇದ್ದೀರೆಂದು ನಾನು ತಾರೀಫ್ ಮಾಡುತ್ತಿದ್ದೇನೆ. How powerful you are! I really appreciate. ಮಾನ್ಯ ಯಡಿಯೂರಪ್ಪನವರನ್ನು ಅಲ್ಲಾಡಿಸಿಬಿಟ್ಟಿರಿ. I really appreciate.

ಶ್ರೀ ಜಿ. ಸೋಮಶೇಖರ ರೆಡ್ಡಿ : ನಮ್ಮಲ್ಲಿ ಬೆಂಕಿಹಚ್ಚುವುದಕ್ಕೆ ಹೋಗಬೇಡಿ.

ಶ್ರೀ ಸಿದ್ದರಾಮಯ್ಯ : ಆಯಿತು ಕುಳಿತುಕೊಳ್ಳಿ. ನಾನು ಜನಾರ್ಧನ ರೆಡ್ಡಿಯವರು, ಕರುಣಾಕರ ರೆಡ್ಡಿಯವರು, ಶ್ರೀರಾಮುಲುರವರು ಈ ತ್ರಿಮೂರ್ತಿಗಳ ಶಕ್ತಿಯನ್ನು ನಾನು ಮೆಚ್ಚಿಬಿಟ್ಟೆ. ಏನು ಗಡಗಡ ಅಂಥ ನಡುಗಿಸಿಬಿಟ್ಟಿರಿ. ಆಗಿ ಹೋಯಿತು, ಇನ್ನು ಏನು ಅವರು ನಿಮ್ಮನ್ನು ಮುಟ್ಟುವುದಕ್ಕೆ ಹೋಗುವುದಿಲ್ಲ. You have established yourself that you are very strong. 50 ಜನ ಅಧಿಕಾರಿಗಳನ್ನು ವಾಪಸ್ಸು ಹಾಕಿಕೊಂಡು ಮೇಲೆ, can you say, can anybody say, ಇಲ್ಲಿ ಒಂದು ಆಡಳಿತ ಇದೆ ಎಂದು ಹೇಳುವುದಕ್ಕೆ ಆಗುತ್ತದೇನ್ರಿ? ನಾನು ಸರ್ಕಾರದಲ್ಲಿ ಬಹಳ ವರ್ಷಗಳಿಂದ ಇದ್ದೇನೆ. ನಾನು ಮಂತ್ರಿಯಾಗಿದ್ದೆ, ಈಗ ವಿರೋಧ ಪಕ್ಷದಲ್ಲಿದ್ದೇನೆ, ಎರಡು ಸಲ ಜನ ಸೋಲಿಸಿ ಮನೆಗೂ ಕಳುಹಿಸಿದ್ದರು. ನಾನು ಎಲ್ಲಾ ನೋಡಿದ್ದೇನೆ. ಈ ತರಹ ಆಡಳಿತವನ್ನು, I have never come across in my political career. ಬಹುಶ: ಇಲ್ಲಿ ಯಾರೂ ಇದ್ದಂತೆ ಕಾಣಿಸುತ್ತಿಲ್ಲ. ಬಹಳ ಜನ ಮಂತ್ರಿಗಳಾಗಿ ಹೋಗಿದ್ದಾರೆ. Nobody, ಯಾರಿಗೂ experience ಆಗಿಲ್ಲ. ಕರುಣಾಕರ ರೆಡ್ಡಿಯವರನ್ನು ಬಿಟ್ಟು ಯಾರಾದರೂ ಅಧಿಕಾರಿಗಳು, ಜನಾರ್ದನ ರೆಡ್ಡಿಯವರನ್ನು ಬಿಟ್ಟು ಬೇರೆಯವರ ಮಾತನ್ನು ಕೇಳುತ್ತಾರಾ? ಪಾಪ ಬೇರೆ ಮಂತ್ರಿಗಳ ಕತೆ ಕೇಳುವುದಕ್ಕಾಗುವುದಿಲ್ಲ. ಕ್ಯಾರೆ ಎನ್ನುವುದಿಲ್ಲ. ಮಾನ್ಯ ಉದಾಸಿಯವರೆ,

ಯಾರೋ ಒಬ್ಬರು Superintendent Engineer ನಮ್ಮ ಮೈಸೂರಿನಲ್ಲಿದ್ದರು. ಅವರನ್ನು ಆರೋಪದ ಮೇಲೆ ತೆಗೆದು ಹಾಕಿತ್ತು. ಮತ್ತೆ ಅವರು ಅಲ್ಲಿಗೆ ಬಂದು ಕುಳಿತಿದ್ದಾರಂತೆ ಹೌದಾ ಉದಾಸಿಯವರೆ? ನೋಡಿ, how weak you are! ನನಗೆ ಯಾರೋ ಹೇಳಿದರು. ನಾನು ಇತ್ತೀಚೆಗೆ ಮೈಸೂರಿಗೆ ಹೋಗಿಲ್ಲ. ಮಾನ್ಯ ಉದಾಸಿಯವರೆ, ಹೌದು ಎನ್ನುತ್ತಾರೆ, ಪಾಪ? He is expressing his inability. ನೀವು ಸ್ವಲ್ಪ ಅವರ ಮೂಲಕ ನೋಟ್ ಹಾಕಿಸಿ. ನಿಮ್ಮ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ನಿಮಗೆ ಬೇಕಾದರೆ ಮಾನ್ಯ ಕರುಣಾಕರ ರೆಡ್ಡಿಯವರ ಮೂಲಕ ಅಥವಾ ಜನಾರ್ದನ ರೆಡ್ಡಿಯವರ ಮೂಲಕ ನೋಟ್ ಹಾಕಿಸಿ ನಿಮಗೆ ಡೆಫಿನೆಟಾಗಿ ನಿಮಗೆ ಯಾವ ಅಧಿಕಾರಿಗಳು ಬೇಕು ಅವರನ್ನು ಹಾಕಿ ಕೊಡುತ್ತಾರೆ, ಇಲ್ಲದಿದ್ದರೆ ಆಗುವುದಿಲ್ಲ. Not only Mr. Udasi, any minister, as a matter of fact, ನಾನು ಹೇಳುತ್ತೇನೆ, ಇಷ್ಟೊಂದು ನಿಸ್ತೇಜವಾದಂಥ, ನಿರ್ಲಜ್ಜವಾದಂಥ ಸರ್ಕಾರ ಕರ್ನಾಟಕದ ಇತಿಹಾಸದಲ್ಲಿ ಯಾವಾಗಲೂ ಬಂದಿರಲಿಲ್ಲ. ತಪ್ಪಾಗಿರಬಹುದು, ಜನ ಅವರಿಗೆ ಪಾಠ ಕಲಿಸಿರಬಹುದು, ಎಲ್ಲಾ ಆಗಿರಬಹುದು. ಸಚಿವ ಸಂಪುಟದಲ್ಲಿ ಇದ್ದವರು ಒಬ್ಬರೇ ಹೆಣ್ಣು ಮಗಳು, ಅವರನ್ನು ತೆಗೆದು ಹಾಕಿಬಿಟ್ಟಿರಿ. ಈಗ ನಮ್ಮ ಜಿಲ್ಲೆಗೆ ಜಿಲ್ಲಾ ಮಂತ್ರಿಗಳು ಇಲ್ಲದಂತಾಗಿಬಿಟ್ಟಿತು. ನಮ್ಮ ಜಿಲ್ಲೆಯಲ್ಲಿ ಹೇಳುವವರು ಕೇಳುವವರು ಇಲ್ಲದಂತಾಗಿ ಹೋಗಿ ಬಿಟ್ಟಿದೆ. ಪಾಪ, ದಸರಾ ಉತ್ಸವವನ್ನು ಬಹಳ ಚೆನ್ನಾಗಿ ಮಾಡಿದರು, ನಾವು ದಸರಾ ಉತ್ಸವವನ್ನು ಚೆನ್ನಾಗಿ ಮಾಡಿ ಎಂದು ಅವರಿಗೆ ಪೂರ್ಣ ಬೆಂಬಲವನ್ನು ಕೊಟ್ಟುಬಿಟ್ಟಿದ್ದೆವು. ನೀವು ಮೀಟಿಂಗ್‌ನಲ್ಲಿ ತೀರ್ಮಾನ ಮಾಡಿ ಎಂದು ಹೇಳಿದ್ದೆವು. ಇಷ್ಟೊಂದು ಕೆಟ್ಟದಾದ ರಾಜಕಾರಣ ಈ ತರಹ ಆಗಿದ್ದು, ಮಾನ್ಯ ಯಡಿಯೂರಪ್ಪನವರಿಗೆ ಈಗ ಏನಾಗಿದೆ, ಅಂದರೆ ಪಾಪ, ಅವರಿಗೆ ಸ್ವತಂತ್ರವಾಗಿ ಏನೂ ತೀರ್ಮಾನ ಮಾಡುವುದಕ್ಕಾಗುತ್ತಿಲ್ಲ. ಅವರ ಒಂದು ನಾಯಕತ್ವವನ್ನು ಈ ರಾಜ್ಯಕ್ಕೆ ನಿರ್ಭೀತಿಯಿಂದ ಕೊಡದೇ ಇರುವಂಥ ರೀತಿಯಲ್ಲಿ ಅವರ ಕೈಕಾಲುಗಳನ್ನು ಕಟ್ಟಿಹಾಕಿಬಿಟ್ಟಿದ್ದಾರೆ. ಸಮನ್ವಯ ಸಮಿತಿಯನ್ನು ಮಾಡಿ ಬಿಟ್ಟಿದ್ದೀರಿ.

ಶ್ರೀ ಎಂ. ಶ್ರೀನಿವಾಸ (ರಾಜರಾಜೇಶ್ವರಿ ನಗರ) : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನೀವು ಈಗಲೂ ಆಶೆ ಇಟ್ಟುಕೊಂಡಿದ್ದೀರಿ. ನಾನು ಮುಖ್ಯಮಂತ್ರಿ ಆಗಬೇಕೆಂದು ಹೇಳಿದ್ದೀರಿ.

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಪಾಪ ಅವರು ಯಾವಾಗಲೂ ಕೇಳಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಸರ್ಕಾರದ ಬಗ್ಗೆ ಮಾತನಾಡುತ್ತಿದ್ದಾರೆ, ಅವರ ಮಾತಿಗೆ ಗೌರವ ಇದೆ. ಆದರೆ ಒಂದು ವಿಚಾರವನ್ನು ಇಲ್ಲಿ ಗಮನಿಸಬೇಕಾಗಿರುವುದು. ಜನತಾದಳ ಇರುವಾಗ ಎಷ್ಟು ಭಾರಿ ಗೌರವದಿಂದ ನಡೆದುಕೊಂಡಿದೆ, ಎಷ್ಟು ಬಾರಿ ಹೋಳಾಗಿದೆ, ಎಷ್ಟು ಜನರ ಕಾಲು ಎಳೆದಿದ್ದಾರೆ, ಎಷ್ಟು ಜನರನ್ನು ಚಪ್ಪಲಿಯಲ್ಲಿ ಹೊಡೆದಿದ್ದಾರೆ, ಆಗೆಲ್ಲಾ ತುಂಬಾ ಗೌರವ.

ಶ್ರೀ ಸಿದ್ದರಾಮಯ್ಯ : ಆಯಿತಾ ಇನ್ನು ಏನಾದರೂ ಇದೆಯಾ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಅಲ್ಲಾ ಗುರುಗಳೆ, ತಾವು ಎಲ್ಲಾ ಅನುಭವ ಇರುವವರು. ಅಲ್ಲಿ ರಾಮಕೃಷ್ಣ ಹೆಗಡೆಯವರಿಗೆ ಯಾವ ರೀತಿ ಗೌರವ ಸಿಕ್ಕಿತು.

ಶ್ರೀ ಸಿದ್ದರಾಮಯ್ಯ : ಸತ್ತು ಹೋಗಿರುವವರ ಹೆಸರೆಲ್ಲಾ ಏಕೆ ತೆಗೆಯುತ್ತೀರಿ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಅವರಿಗೆ ಯಾವ ರೀತಿಯ ಗೌರವ ಸಿಕ್ಕಿತು? ತಮ್ಮ ಅನುಭವವನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ರಾಮಕೃಷ್ಣ ಹೆಗಡೆಯವರ ಹೆಸರನ್ನು ಹೇಳುವಾಗ ಹೇಗೆ ಸುಮ್ಮನೆ ಕುಳಿತಿರಿ, ಉದಾಸಿಯವರೆ? ದಯವಿಟ್ಟು ಕುಳಿತುಕೊಳ್ಳುವುದಕ್ಕೆ ಹೇಳಿ.

ಶ್ರೀ ಎಂ. ಶ್ರೀನಿವಾಸ (ರಾಜರಾಜೇಶ್ವರಿನಗರ) : ಏನೇನು ಆಗಿದೆ ನಮಗೆಲ್ಲಾ ಗೊತ್ತಿದೆ.

(ಗೊಂದಲ)

ಅಧ್ಯಕ್ಷರು: ಮಧ್ಯದಲ್ಲಿ ಎದ್ದು ನಿಂತು ಮಾತನಾಡಿದರೆ ದಾಖಲೆ ಹೋಗುವುದಿಲ್ಲವೆಂದು ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ : ಆಯಿತು ಕುಳಿತುಕೊಳ್ಳಿ. ನೀವು ಹೇಳಿದಂತೆ ಶ್ರೀನಿವಾಸರವರೆ ನಾನು ಒಪ್ಪಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಿ.ರಮಾನಾಥ್ ರೈ : ವರ್ತಮಾನದ ಕಾಲದ ಬಗ್ಗೆ ಮಾತನಾಡಿ, ಭೂತಕಾಲದ ವಿಷಯವೆಲ್ಲಾ ಏಕೆ ಮಾತನಾಡುತ್ತೀರಿ?

(ಗೊಂದಲ)

ಅಧ್ಯಕ್ಷರು: ನೀವು ಏನು ಮಾತನಾಡಿದರೂ ದಾಖಲೆಗೆ ಹೋಗುವುದಿಲ್ಲ.

(ಮಾನ್ಯ ಅಧ್ಯಕ್ಷರ ಆದೇಶದಂತೆ ದಾಖಲು ಮಾಡಲಿಲ್ಲ)

ಅಧ್ಯಕ್ಷರು: ನೀವು ಏನು ಮಾತನಾಡಿದರೂ ದಾಖಲೆಗೆ ಹೋಗುವುದಿಲ್ಲ. ಎಲ್ಲರಿಗೂ ಹೇಳುತ್ತಿದ್ದೇನೆ, please ಕುಳಿತುಕೊಳ್ಳಿ. ಅವರಿಗೂ ಹೇಳುತ್ತಿದ್ದೇನೆ. No. ನೀವು ಈ ತರಹ argue ಮಾಡಬೇಡಿ. ನೀವು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ದಯಮಾಡಿ ಯಾರೂ ಮಾತನಾಡದಿದ್ದರೆ ನಾನು ಬೇಗ ಮುಗಿಸಿ ಬಿಡುತ್ತೇನೆ. ಮಧ್ಯದಲ್ಲಿ time waste ಆಗಿ ಬಿಡುತ್ತದೆ. ಮಾನ್ಯ ಸಿ.ಸಿ.ಪಾಟೀಲರೆ ಏಕೆ ಆ ಕಡೆ ಮಾತನಾಡುತ್ತೀರಿ?

ಶ್ರೀ ಬಿ.ರಮಾನಾಥ್ ರೈ: ನೀವು ಮಧ್ಯದಲ್ಲಿ ಎದ್ದು ನಿಲ್ಲಬಹುದು, ನಾವು ಏಕೆ ನಿಂತು ಮಾತನಾಡಬಾರದು?

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ಏನು ಹೇಳುತ್ತಿದ್ದೇನೆಂದರೆ, ಮುಖ್ಯಮಂತ್ರಿಯಾಗಿ ಇವತ್ತು ಅವರಿಗೆ ಸ್ವತಂತ್ರವಾದ ನಿರ್ಧಾರ ಮಾಡದಿರುವಂಥ ಮತ್ತು ಈ ರಾಜ್ಯಕ್ಕೆ ನಾಯಕತ್ವ ಕೊಡಲಿಕ್ಕೆ ಸಾಧ್ಯವಿಲ್ಲದಿರತಕ್ಕಂಥ ಸ್ವತಂತ್ರವಾಗಿ ತೀರ್ಮಾನ ಮಾಡದಿರತಕ್ಕಂಥ ಪರಿಸ್ಥಿತಿ ಈಗ ತಂದುಬಿಟ್ಟಿದ್ದಾರೆ. ನನ್ನ ಪ್ರಕಾರ for the sake of his power to

survive ಮುಖ್ಯಮಂತ್ರಿ ಕುರ್ಚಿಗೆ ಯಾವ ಗೌರವವನ್ನು ಅವರು ಉಳಿಸಿ ಕೊಡಬೇಕಾಗಿತ್ತು, ಕಾಪಾಡಬೇಕಾಗಿತ್ತು ಅದನ್ನು ಕಾಪಾಡುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ನಾನು ಈಗ ಸ್ವಲ್ಪ ಪದಗಳನ್ನು ಬದಲಾವಣೆ ಮಾಡಿ ಹೇಳುತ್ತೇನೆ. ಗೌರವದಿಂದ ಹೇಳಬೇಕಲ್ಲವೆ? ಇಲ್ಲದಿದ್ದರೆ ಮಾನ್ಯ ಈಶ್ವರಪ್ಪನವರು ಜಗಳಕ್ಕೆ ಎದ್ದು ಬಿಡುತ್ತಾರೆ.

ಶ್ರೀ ಸಿ.ಸಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು : ಸಿ.ಸಿ.ಪಾಟೀಲರೆ, ಕುಳಿತುಕೊಳ್ಳಿ, ಮಾನ್ಯ ವಿರೋಧ ಪಕ್ಷದ ನಾಯಕರೆ ಇಲ್ಲಿ ಯಾರ ಹೆಸರನ್ನು ಹೇಳಬೇಡಿ.

ಶ್ರೀ ಸಿದ್ದರಾಮಯ್ಯ : ಎಲ್ಲರೂ ನಮ್ಮ ಸ್ನೇಹಿತರಲ್ಲಾ ಅದಕ್ಕಾಗಿ ತಮಾಷೆಗೆ ಹೇಳುತ್ತಿದ್ದೇನೆ. 1983 ರಿಂದ ಬಹಳ ಜನ ಇದ್ದೇವೆ. ಈಶ್ವರಪ್ಪನವರು 1989 ರಿಂದ ಇದ್ದಾರೆ, 1983 ರಿಂದ ಮಾನ್ಯ ಯಡಿಯೂರಪ್ಪನವರು ನಾವು ಒಟ್ಟಿಗೆ ಬಂದವರು. ಹಾಗಾಗಿ ಸ್ವಲ್ಪ ಸಲಿಗೆ, ಸ್ನೇಹ ಇವೆಲ್ಲಾ ಇರುತ್ತವೆ. 1983 ರಲ್ಲಿ ನಾವು, ಉದಾಸಿಯವರು, ನಮ್ಮ ಶ್ರೀನಿವಾಸರವರು ಒಟ್ಟಿಗೆ ಬಂದವರು. ಅದಕ್ಕಾಗಿಯೇ ಅವರು ಮಧ್ಯದಲ್ಲಿ ಎದ್ದೆದ್ದು ಮಾತನಾಡುವುದು. ಕೊನೆಗೆ ಮಾನ್ಯ ರೇಣುಕಾಚಾರ್ಯರನ್ನು ಮಂತ್ರಿಮಂಡಲಕ್ಕೆ ತೆಗೆದುಕೊಳ್ಳಬೇಡಿ ಎಂದು ಬೆಂಗಳೂರು ನಗರ ಶಾಸಕರು ಮತ್ತು ಇನ್ನಿತರ ಶಾಸಕರು ಹೇಳಿದರೂ ತೆಗೆದುಕೊಂಡು ಬಿಟ್ಟರು. ಬಳ್ಳಾರಿ ಶಾಸಕರ influence ನಿಂದ ನೀವು ಅವರ ಜೊತೆಗೆ ಹೋದಾಗಿನಿಂದ ಅನುಕೂಲವಾಯಿತು. ನೀವು ಇಲ್ಲೇ ಯಡಿಯೂರಪ್ಪನವರ ಹತ್ತಿರ ಉಳಿದುಕೊಂಡಿದ್ದರೆ definite ಆಗಿ ನಿಮಗೆ ಮಂತ್ರಿಸ್ಥಾನ ಸಿಗುತ್ತಿರಲಿಲ್ಲ. ನೀವು ಈ ಕೆಲಸವನ್ನು ಬಹಳ intelligent ಆಗಿ ಮಾಡಿದ್ದೀರಿ. He is very intelligent. Definite ಆಗಿ ನಿಮಗೆ ಅಬಕಾರಿ ಖಾತೆ ಸಿಗುತ್ತಾ ಇರಲಿಲ್ಲ. ಅವರಿಗೆ ಗೊತ್ತಿದ್ದೋ ಇಲ್ಲವೋ ಅಬಕಾರಿ ಖಾತೆ ಬೇಡವೆಂದು ಹೊರಟುಬಿಟ್ಟಿದ್ದಾ, ಪುಣ್ಯಾತ್ಮ. ನಾನು ಅವರಿಗೆ ಅಬಕಾರಿ ಒಳ್ಳೆಯ ಇಲಾಖೆ ಎಂದು ಹೇಳಿದೆ. ರೇಣುಕಾಚಾರ್ಯರೆ, ನಿಮ್ಮ ಒಂದೇ ಒಂದು ಇಲಾಖೆಯಿಂದ ಮಾನ್ಯ ಯಡಿಯೂರಪ್ಪನವರಿಗೆ ತೆರಿಗೆ ಬರುತ್ತಿರುವುದು ಅದು ನಿಮಗೆ ಗೊತ್ತೇ? That is the only department. ಯಾವುದು

12.00 ಪಿ.ಎಂ.

ತೆರಿಗೆಯನ್ನು ಹೆಚ್ಚು ಕೊಡುತ್ತಿರುವ ಇಲಾಖೆ ಇದೆಯೆಂದರೆ, Excise Department is the only department. Growth ಇರುವುದು 20 % ಇದೆ. ಇನ್ನು ಉಳಿದಿರುವ ಇಲಾಖೆಗಳೆಲ್ಲವು minus. Growth is minus. ರೇಣುಕಾಚಾರ್ಯರೆ, ನೋಡಿ ನಿಮಗೆ ಎಂತಹ ಇಲಾಖೆ ಸಿಕ್ಕಿದೆ! ಪಾಪ ಎಲ್ಲರೂ ಬೇಡವೆಂದು ಹೇಳಿದ್ದರು, ಕಳ್ಳಬಟ್ಟಿ ಸಾರಾಯಿ ಎಲ್ಲಿ ಸಿಗುತ್ತದೆಂದು ಎಲ್ಲಾ ಕಡೆ ರೈಡ್‌ಗೆ ಇವರೇ ಹೊರಟು ಹೋಗುತ್ತಾರೆ. ವಾಸನೆ ಎಲ್ಲಿ ಬರುತ್ತದೆ ಎಂದು ಅದನ್ನು ಹಿಡಿದುಕೊಂಡು ಹೊರಟು ಹೋಗುತ್ತಾರೆ. ಪಬ್‌ಗಳಿಗೆ ಹೋಗುತ್ತಾರೆ. ಬಹಳ ಹುಷಾರಾಗಿರಿ, ನೀವು ಬೇರೆಯವರನ್ನು ಕಳುಹಿಸಿ ರೈಡ್ ಮಾಡಿಸಿ, ನೀವು ಒಬ್ಬರೇ ಹೋಗಬೇಡಿ, ಅಥವಾ ಕಾರಿನಲ್ಲಿ ಬೇಕಾದರೆ ಕುಳಿತುಕೊಳ್ಳಿ. ಇಲ್ಲಿ ಏನಾಗಿದೆ ಎಂದರೆ, ರೇಣುಕಾಚಾರ್ಯ ಅವರು ಶ್ರೀರಾಮುಲು ಹಾಗೂ ಶ್ರೀ ಜಿ. ಕರುಣಾಕರ ರೆಡ್ಡಿಯವರ ಜೊತೆಯಲ್ಲಿ ಸೇರಿದ ಮೇಲೆ ಅವರಿಗೆ ಅದೃಷ್ಟಲಕ್ಷ್ಮಿ ಹೊಡೆಯಿತು.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಯಡಿಯೂರಪ್ಪನವರಿಗೂ ರೇಣುಕಾಚಾರ್ಯರಿಗೂ ವಿಶ್ವಾಸ ಹೇಗೆ ಇದೆ ಎಂಬುದು ಇವರಿಗೆ ಗೊತ್ತಿಲ್ಲ.

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರು ಮಾತು ಮುಗಿಸಲಿ. ಈ ತರಹ ಮಧ್ಯ ಮಧ್ಯದಲ್ಲಿ ಮಾತನಾಡುತ್ತಾ ಹೋದರೆ ಅದು ಮುಗಿಯುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ನಾನು ಅವರನ್ನು ಮಂತ್ರಿ ಮಾಡುವುದಕ್ಕಾಗುವುದಿಲ್ಲ ರೆಡ್ಡಿಯವರ ಕಡೆಗೆ ಹೋದರೆ ಮಾಡಬಹುದು ಎಂದು ಅವರೆ ಕಳುಹಿಸಿದ್ದಾರೆ.

ಅಧ್ಯಕ್ಷರು : ಆಯಿತು.

ಶ್ರೀ ಸಿದ್ದರಾಮಯ್ಯ : ಇಲ್ಲ. ಪಾಪ ಅಷ್ಟು ಪೆದ್ದ ಅಲ್ಲ ರೇಣುಕಾಚಾರ್ಯ. He is very intelligent. ಅವರು ಅಯ್ಯನೋರು ಬೇರೆ, ಅವರು intelligent ಇರುವುದಿಲ್ಲವೆ? ಇವತ್ತು ರಾಜ್ಯದಲ್ಲಿ ಸಂಪೂರ್ಣವಾಗಿ ಆಡಳಿತ ಕುಸಿದು ಬಿದ್ದು ಹೋಗಿದೆ. ಜನರನ್ನು ಇವರು ಸಂಪೂರ್ಣವಾಗಿ ಮರೆತುಬಿಟ್ಟಿದ್ದಾರೆ. ಜನರಿಗೆ ಪರಿಹಾರವನ್ನು ಕೊಡುವುದು

ನಿಂತುಹೋಯಿತು. ಅಭಿವೃದ್ಧಿ ಕೆಲಸಗಳೆಲ್ಲವೂ ನಿಂತುಹೋಯಿತು. ಹಾಗಾಗಿ ರಾಜ್ಯದಲ್ಲಿ ಪವರ್ ಇಲ್ಲ, ಕುಡಿಯುವುದಕ್ಕೆ ನೀರು ಇಲ್ಲ, ಕೈಗಾರಿಕೆಯನ್ನು ಹೊಸದಾಗಿ ಸ್ಥಾಪನೆ ಮಾಡುವುದಕ್ಕೆ ಯಾರೂ ಬರುತ್ತಿಲ್ಲ. ಭೂಮಿಯ ತಕರಾರುಗಳು ಇವೆ. ಯಾರೋ ಮಾಡಿಸಿದರೆ ನಮಗೆ ಏಕೆ ಹಿಡಿದುಕೊಂಡು ಕುಳಿತಿದ್ದೀರಿ? ನಾವೂ ಕೂಡ ಫಲವತ್ತಾದ ಭೂಮಿಯನ್ನು ತೆಗೆದುಕೊಳ್ಳಬೇಡಿ ಎಂದು ಹೇಳುತ್ತೇವೆ. ಅದನ್ನು ನೀವು ಹೇಳುತ್ತೀರಿ, ನಾವು ಹೇಳುತ್ತೇವೆ. ಫಲವತ್ತಾದ ಜಮೀನನ್ನು ತೆಗೆದುಕೊಳ್ಳಬಾರದು, ರೈತರು ಅವರಾಗಿ ಕೊಟ್ಟರೆ ತೆಗೆದುಕೊಳ್ಳಬೇಕೆಂದು ನಾವೂ ಸಹ ಹೇಳಿದ್ದೇವೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಇದು ಸುಧಾರಣೆಯಾಗುವುದು ಹೇಗೇ?

ಶ್ರೀ ಸಿದ್ದರಾಮಯ್ಯ : ಈ ಬಗ್ಗೆ ಕೇಂದ್ರ ಸರ್ಕಾರವೇ ಹೇಳಿದೆ. ಇದರ ಬಗ್ಗೆ ಒಂದು ಕಾನೂನನ್ನು ತರುತ್ತಿದ್ದಾರೆ. ಈ ಬಗ್ಗೆ ಸುಪ್ರೀಂ ಕೋರ್ಟು ಸಹ ಹೇಳಿದೆ.

ಡಾ: ಹೆಚ್.ಸಿ.ಮಹದೇವಪ್ಪ: SEZ ಎಂದು ಹೇಳಿ estate business ಮಾಡುವುದಕ್ಕಾಗುವುದಿಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಮಹದೇವಪ್ಪಣ್ಣ, ನಮಗೆಲ್ಲಾ ಗೊತ್ತಿದೆ. ನಿಮಗೆ ಗೊತ್ತಿಲ್ಲದೆಯೇ ಮಾತನಾಡುವುದಕ್ಕೆ ಹೋಗಬೇಡಿ. ನೀವು ಎಲ್ಲವೂ ಗೊತ್ತಿದ್ದು ತಪ್ಪುದಾರಿಯಲ್ಲಿ ಮಾತನಾಡಬೇಡಿ ಎಲ್ಲರೂ ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ : ನಿಮಗೆ ಹೆಚ್ಚಾಗಿ ಆಶೀರ್ವಾದವನ್ನು ಮಾಡುವಂತಹ ಪೇಜಾವರ ಸ್ವಾಮಿಗಳು ಇವತ್ತು ಚಳುವಳಿಯನ್ನು ಮಾಡುತ್ತಿಲ್ಲವೇ? ಅವರು ಉಪವಾಸ ಸತ್ಯಾಗ್ರಹವನ್ನು ಮಾಡುತ್ತಾರೆಂದು ಅಲ್ಲಿಗೆ ಯಾರ್‍ಯಾರು ಹೋಗಿದ್ದಾರೆ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ನಿರುದ್ಯೋಗ ಸಮಸ್ಯೆಯು ನಿವಾರಣೆಯಾಗುವುದು ಬೇಡವೆ?

ಶ್ರೀ ಸಿದ್ದರಾಮಯ್ಯ : ಶ್ರೀ ಮುರುಗೇಶ್ ನಿರಾಣಿ ಮತ್ತು ಡಾ:ವಿ.ಎಸ್.ಆಚಾರ್ಯರು ಅಲ್ಲಿಗೆ ಹೋಗಿ ಅವರಿಗೆ ಸಮಾಧಾನವನ್ನು ಹೇಳಿ ಬರಲಿಲ್ಲವೆ? ಶ್ರೀ ಸ್ವಾಮೀಜಿಯವರೇ ಚಳುವಳಿಯನ್ನು ಮಾಡುತ್ತಿದ್ದಾರೆ. ಹಾಗಾದರೆ ನಾವು ಹೇಳುವುದು ಸತ್ಯ ಅಲ್ಲವೆ? ಇವತ್ತು ಎಲ್ಲಿದೆ ಆಡಳಿತ? ಒಂದು ಸರ್ಕಾರ ಚೆನ್ನಾಗಿ ನಡೆಯುತ್ತಿರಬೇಕಾದರೆ ಅದು ಜನರ ಪರವಾಗಿ ಇದೆ ಎನ್ನಬೇಕಾದರೆ No.1, ಒಬ್ಬ ನಾಯಕನಿಗೆ ಅವರ ಶಾಸಕಾಂಗ ಪಕ್ಷದಲ್ಲಿ ಬೆಂಬಲ ಇರಬೇಕು. No.2, ಈ ರಾಜ್ಯದ ಹಣಕಾಸಿನ ಪರಿಸ್ಥಿತಿ ಚೆನ್ನಾಗಿರಬೇಕು. No.3, ಕಾನೂನಿನ ಸುವ್ಯವಸ್ಥೆ ಚೆನ್ನಾಗಿರಬೇಕು. No.4, ಯೋಜನೆಗಳಿಗೆ ಜನಪರವಾದ ಕಾರ್ಯಕ್ರಮಗಳನ್ನು ರೂಪಿಸಿ ಅದನ್ನು ಅನುಷ್ಠಾನ ಮಾಡಬೇಕು. There should be quality expenditure while implementing the programmes and projects ಅದು ಆಗಬೇಕು. ಇನ್ನು ಮೂರನೆಯದು ದಕ್ಷ ಆಡಳಿತ ಇರಬೇಕು. ಏಕೆಂದರೆ ಸವಲತ್ತುಗಳು, ಯಾರು targeted ಜನರು ಇದ್ದಾರೆ, ಆ ಜನರಿಗೆ ತಲುಪಿಸಬೇಕಾದರೆ, there should be a strong Government. ದಕ್ಷ ಆಡಳಿತ ಇರತಕ್ಕಂತಹ ಸರ್ಕಾರ ಇರಬೇಕು. ಇವು ಯಾವುದೂ ನಿಮ್ಮಲ್ಲಿ ಇಲ್ಲವಲ್ಲಾ? ಕಾನೂನು ಸುವ್ಯವಸ್ಥೆ ಇದೆಯಾ? ಕಳೆದ ಒಂದು ವರ್ಷದಿಂದ ನಮ್ಮ ರಾಜ್ಯದಲ್ಲಿ ಕಾನೂನಿನ ಸುವ್ಯವಸ್ಥೆಯು ಬಹಳ ಚೆನ್ನಾಗಿದೆ, ಒಂದೇ ಒಂದು firing ಆಗಿಲ್ಲ ಸುಮ್ಮನಾದರೂ ಇದ್ರಾ? ಅದನ್ನು ಇಲ್ಲಿ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದಾರೆ. ಮೊನ್ನೆ ದಿನ ಶಿವಮೊಗ್ಗದಲ್ಲಿ firing ಆಯಿತಲ್ಲಾ, ಅದು ಆಗುತ್ತಿರಲಿಲ್ಲ. ಇವರ ಬಾಯಿಯಲ್ಲಿ ಹೇಳಿಸಿದರಪ್ಪಾ ಎರಡು ಜನರು ಸತ್ತುಹೋದರು. ಅವರು ಹೇಳಿದ ನಾಳೆಗೆ ಇಬ್ಬರು ಸತ್ತುಹೋದರು.

ಡಾ: ಹೆಚ್.ಸಿ.ಮಹದೇವಪ್ಪ: ದಲಿತ ಮಹಿಳೆಯನ್ನು ಬೆತ್ತಲೆ ಮಾಡಿದರು. ಅವರು ನನಗೆ ರಕ್ಷಣೆ ಕೊಡಿ ಎಂದು ಹೇಳಿದರೂ ಕೂಡ ಇದುವರೆಗೂ ಕೂಡ ಅವರಿಗೆ ರಕ್ಷಣೆಯನ್ನು ಕೊಡಲಿಲ್ಲ.

ಶ್ರೀ ಸಿದ್ದರಾಮಯ್ಯ : ನೋಡಿ ಈ ತರಹದೆಲ್ಲಾ ಇದೆ. ಇವರು ಅಧಿಕಾರಕ್ಕೆ ಬಂದ ಮೇಲೆ ಕಾನೂನಿನ ವ್ಯವಸ್ಥೆ ಹೇಗೆ ಆಗಿದೆ ಎಂದರೆ

ಪ್ರತಿಯೊಂದಕ್ಕೂ ಜನರು ಬೀದಿಗೆ ಬರುತ್ತಿದ್ದಾರೆ. ವಿದ್ಯುತ್‌ಗೋಸ್ಕರ ಬೀದಿಗೆ ಬರುತ್ತಿದ್ದಾರೆ. ನಮ್ಮ ಜಮೀನನ್ನು ಕಿತ್ತುಕೊಳ್ಳುತ್ತಿದ್ದಾರೆಂದು ಜನರು ಬೀದಿಗೆ ಬರುತ್ತಿದ್ದಾರೆ. ನಮಗೆ ಬಿಪಿಎಲ್ ಕಾರ್ಡು ಕೊಟ್ಟಿಲ್ಲವೆಂದು ಬೀದಿಗೆ ಬರುತ್ತಿದ್ದಾರೆ. ನಮಗೆ ಪ್ರವಾಹದಲ್ಲಿ ಸಿಕ್ಕಿರುವವರಿಗೆ ಪರಿಹಾರವನ್ನು ಕೊಟ್ಟಿಲ್ಲವೆಂದು ಬೀದಿಗೆ ಬರುತ್ತಿದ್ದಾರೆ. ನಮಗೆ ಕುಡಿಯುವುದಕ್ಕೆ ನೀರು ಸಿಗುತ್ತಿಲ್ಲವೆಂದು ಬೀದಿಗೆ ಬರುತ್ತಿದ್ದಾರೆ. ಅವರೆಲ್ಲರೂ ಇವತ್ತಿನ ದಿವಸ ಬೀದಿಗೆ ಬಂದು ಜನರು ಚಳುವಳಿಗಳು, ಹೋರಾಟವನ್ನು ಮಾಡುತ್ತಿದ್ದಾರೆ. ನನ್ನ ಸರ್ಕಾರದಲ್ಲಿ ಒಂದೇ ಒಂದು ರೈತರ ಮೇಲೆ ಲಾಠಿ ಚಾರ್ಜು ಮಾಡುವುದಿಲ್ಲ. ಗೋಲಿಬಾರ್ ಮಾಡುವುದಿಲ್ಲ ಮಾನ್ಯ ಯಡಿಯೂರಪ್ಪನವರು ಹೇಳಿದ್ದರು. ಹಾವೇರಿಯಲ್ಲಿ ಗೋಲಿಬಾರ್ ಆಯಿತು. ಚಾಮರಾಜನಗರದಲ್ಲಿ ಒಬ್ಬ ಡಿ.ಸಿ. ಬೀದಿಯಲ್ಲಿ ದೊಣ್ಣೆಯನ್ನು ಹಿಡಿದುಕೊಂಡು ನಿಂತುಬಿಟ್ಟಿದ್ದ. ಅದು ಹೋಗಲಿ ಎಸ್‌ಪಿಯವರ ಕಡ್ಡಿಯನ್ನಾದರೂ ಹಿಡಿದುಕೊಂಡ್ರಾ? ಕಾನ್ಸ್‌ಟೇಬಲನ ದೊಣ್ಣೆಯನ್ನು ಹಿಡಿದುಕೊಂಡು ನಿಂತುಬಿಟ್ಟ. ಜನರನ್ನು ಹೆದರಿಸುವುದಕ್ಕೋ, ಏತಕ್ಕೋ ಅದು ನನಗೆ ಗೊತ್ತಿಲ್ಲ. ದೊಡ್ಡ ಲಾಠಿ ಇದೆಯಲ್ಲಾ ಆ ಬಗ್ಗೆ ಪತ್ರಿಕೆಯಲ್ಲಿ ಫೋಟೊಗಳು ಬಂದಿದೆ. ದಾವಣಗೆರೆಯಲ್ಲಿ ಜಮೀನನ್ನು ಕಿತ್ತುಕೊಳ್ಳಬೇಡಿ ಎಂದು ಹೇಳಿದರೆ ರೈತರಿಗೆ ಕೈಗೆ ಕೋಳವನ್ನು ಹಾಕಿಸಿಬಿಟ್ಟರು. ಬಳ್ಳಾರಿಯಲ್ಲಿ Airportಗೆ ಜಮೀನನ್ನು ತೆಗೆದುಕೊಳ್ಳಬೇಡಿ ಎಂದು ಹೇಳಿದರೆ ಅವರನ್ನು ಜೈಲಿಗೆ ಕಳುಹಿಸಿಬಿಟ್ಟರು. ಕಬ್ಬಿಗೆ ಒಳ್ಳೆಯ ಬೆಲೆ ಸಿಕ್ಕಿಲ್ಲವೆಂದು ರೈತರ ಹೋರಾಟ, ಕಬ್ಬಿಗಾಗಿ ನ್ಯಾಯಯುತವಾದ ಬೆಲೆ ಸಿಕ್ಕಿಲ್ಲವೆಂದು ಹೋರಾಟ ಆಯಿತು. Sugar price Rs.40 per K.G. ಇದೆ. ರೈತರಿಗೆ ಸರಿಯಾದ ಕಬ್ಬಿನ ಬೆಲೆಯನ್ನು ಕೊಡಲಿಲ್ಲ. ರೈತರು ಬೀದಿಗೆ ಇಳಿದು ಹೋರಾಟವನ್ನು ಮಾಡಿದರು. ನೀವು ಯಾವುದನ್ನೂ ಸಹ ಮಾಡಲಿಲ್ಲ. ಇದಕ್ಕೆ ಯಾವುದಾದರೂ ಪರಿಹಾರ ಇದೆಯಾ? ನಾನು ನಿಮಗೆ ಸುಮ್ಮನೆ ಈ ಕಾನೂನು ಸುವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ಯಾರಾದರೂ ಇವತ್ತು ಅಲ್ಪಸಂಖ್ಯಾತರು ನೆಮ್ಮದಿಯಿಂದ ಇದ್ದಾರಾ? ರೈತರು ನೆಮ್ಮದಿಯಿಂದ

ಇದ್ದಾರೆಯೇ? ರೈತರಿಗೆ ಕೈಕೋಳ ಹಾಕಿಸಿದ್ದಾರೆ, ನೀವು ನನ್ನನ್ನು ಧಾರವಾಡಕ್ಕೆ ಕರೆದಿರಿ, ಆದರೆ ನನಗೆ ಬರುವುದಕ್ಕಾಗಲಿಲ್ಲ. ನೀವು ಇದಕ್ಕೆ ಏನು ಹೇಳುತ್ತೀರಿ? ತಾವು ರೈತರ ಮೇಲೆ ಪ್ರಮಾಣ ವಚನ ಸ್ವೀಕಾರ ಮಾಡುತ್ತೀರಿ. ಹಸಿರು ಟವೆಲ್, ಎಲ್ಲಿ ಅದೆಲ್ಲಾ? ಅದು ನಿಮಗೆ ಜ್ಞಾಪಕಕ್ಕೆ ಬರಲಿಲ್ಲವೇ? ರೈತರ ಮೇಲೆ ಲಾಠಿ ಚಾರ್ಜು ಹಾಗೂ ಗೋಲಿಬಾರ್ ಮಾಡಿಸುವಾಗ ಇದು ನಿಮಗೆ ಜ್ಞಾಪಕಕ್ಕೆ ಬರಲಿಲ್ಲವೇ? ಅವರು ಪಾಪ ಏನು ಕೇಳಿದರು, ಕಬ್ಬಿಗೆ ಒಳ್ಳೆಯ ಬೆಲೆ ಕೊಡಿಸಿ, ನಮ್ಮ ಪಂಪುಸೆಟ್ಟುಗಳಿಗೆ ಕರೆಂಟ್ ಕೊಡಿಸಿ, ನಮಗೆ ಗೊಬ್ಬರ ಕೊಡಿಸಿ, ಬೀಜವನ್ನು ಕೊಡಿಸಿ, ನಮ್ಮ ಜಮೀನನ್ನು ಕಿತ್ತುಕೊಳ್ಳಬೇಡಿ. ಇವು ಅಪರಾಧಗಳೇ? ಅವರ ಮೇಲೆ IPC Section ಗಳಾದ 307, 326, 323ರ ಪ್ರಕಾರ ಕೇಸ್‌ಗಳು ಎಲ್ಲವೂ non-bailable offenceಗಳು. ಅವರುಗಳಿಗೆ ಜಾಮೀನು ಸಿಗಬಾರದು. ಅವರುಗಳು straight away ಜೈಲಿಗೆ ಹೊರಟುಹೋಗಬೇಕು. ಅವರನ್ನು ಹೆದರಿಸುವುದಕ್ಕೆ, ಚಳುವಳಿಯನ್ನು ಹತ್ತಿಕ್ಕುವುದಕ್ಕೆ, ರೈತರ ನ್ಯಾಯಬದ್ಧವಾದಂತಹ ಹಕ್ಕುಗಳನ್ನು ದಮನ ಮಾಡುವುದಕ್ಕೆ ಪ್ರಜಾಪ್ರಭುತ್ವದ ಕೊಲೆ, ಯಾರು ಹೀಗೆ ಮಾಡುತ್ತಾರೆ? ಆದರೆ ನಮ್ಮದು "ಅಭಿವೃದ್ಧಿ ಸರ್ಕಾರ, ಅಭಿವೃದ್ಧಿ ಮಂತ್ರವೇ ನಮ್ಮ ಮಂತ್ರ" ಬಾಯಿಯಲ್ಲಿ ಮಂತ್ರ ಹಾಕಿದರೆ ಮಾವಿನಕಾಯಿ ಬಿದ್ದುಹೋಗುತ್ತದೆಯೇ? ಅಲ್ಲಾವುದ್ದೀನನ ದೀಪವನ್ನು ಹಿಡಿದುಕೊಂಡು ಬಂದರೆ treasuryಗೆ ದುಡ್ಡು ಬಂದು ಬಿಡುತ್ತದೆಯೇ? ನಿಮಗೆ ಸುಮ್ಮನೆ ಒಂದು ವಿಷಯ ಹೇಳುತ್ತೇನೆ. ನಾನು ಜಾಸ್ತಿ ಹೇಳುವುದಕ್ಕೆ ಹೋಗುವುದಿಲ್ಲ. ಈ ಪ್ರವಾಹದ ಬಗ್ಗೆ ಬಹಳ ಅಭಿವೃದ್ಧಿ ಮಾಡಿಬಿಟ್ಟಿದ್ದೇವೆ. ಇಡೀ ಜಗತ್ತೆ ನಂಬುವಂತೆ ಮಾಡಿದ್ದೇವೆಂದು ಹೇಳಿದ್ದಾರೆ. ಇವತ್ತಿನವರೆಗೆ ಆ ಹೆಣ್ಣುಮಗಳು ಅಮ್ಮ ಅಮೃತಾನಂದಮಯಿ ತಮ್ಮ ಟ್ರಸ್ಟ್‌ನಿಂದ 100 ಮನೆಗಳನ್ನು ಕಟ್ಟಿಸಿ ಸರ್ಕಾರಕ್ಕೆ ಕೀಗಳನ್ನು ಕೊಟ್ಟಿರುವುದನ್ನು ಬಿಟ್ಟರೆ, ಬೇರೆ ಎಲ್ಲಾದರೂ ಇವರು ಒಂದು ಮನೆ ಕೊಟ್ಟಿರುವುದನ್ನು ತೋರಿಸಲಿ. ಅಮೃತಾನಂದಮಯಿಯವರೊಂದಿಗೆ ಮನೆಗಳ ಪರ್ಯಾಯವಾಗಿ ಐದು ಕೋಟಿ ರೂಪಾಯಿಗಳು, ಜಮೀನುಗಳನ್ನು ಕೊಡುವುದಾಗಿ ಒಂದು

ಒಪ್ಪಂದವನ್ನು ಸಹ ಮಾಡಿಕೊಂಡಿದ್ದಾರೆ. ರೇವಣ್ಣನವರು ಇಂಥದ್ದನ್ನೆಲ್ಲಾ ಹುಡುಕಿ, ಹುಡುಕಿ ಕಲೆಕ್ಟ್ ಮಾಡುವುದರಲ್ಲಿ ನಿಸ್ಸೀಮರಾಗಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾನು ಏಕೆ ಹೇಳುತ್ತಿದ್ದೇನೆಂದರೆ, 100 ಮನೆಗಳನ್ನು ಕೊಟ್ಟಿರುವುದನ್ನು ಬಿಟ್ಟರೆ ಬೇರೆ ಎಲ್ಲಿಯೂ ಕಟ್ಟಿಲ್ಲ. 63,200 ಮನೆಗಳನ್ನು ಶಿಫ್ಟ್ ಮಾಡುತ್ತೇವೆ, 300 ಹಳ್ಳಿಗಳನ್ನು ಶಿಫ್ಟ್ ಮಾಡುತ್ತೇವೆ, 149 ಹಳ್ಳಿಗಳು ಸಂಪೂರ್ಣ, 156 ಹಳ್ಳಿಗಳು ಭಾಗಶಃ ಶಿಫ್ಟ್ ಮಾಡುತ್ತೇವೆಂದು ಹೇಳಿದ್ದಾರೆ. ಇದಕ್ಕೆ ಜಮೀನು 5800–6000 ಎಕರೆ ಬೇಕು ಎಂದು ಹೇಳಿದ್ದಾರೆ ಇನ್ನು ಕೆಲವು ಊರುಗಳಲ್ಲಿ ಇವರಿಗೆ ಜಮೀನು ಸಿಕ್ಕಿಲ್ಲ. ಬಳ್ಳಾರಿ ಜಿಲ್ಲೆಯ ಸಿರಗುಪ್ಪದಲ್ಲಿ ಜನರೆಲ್ಲಾ ಈ ಜಮೀನು ಚೆನ್ನಾಗಿದೆಯೆಂದು ಹೇಳಿದ ಮೇಲೆ ಡಿ.ಸಿ.ಯವರು ಆ ಜಮೀನು ತೆಗೆದುಕೊಂಡರೆ, "ಅದು ಕಾಂಗ್ರೆಸ್‌ನವರದು ಜಮೀನು, ನಾನು ಹೇಳುತ್ತೇನೆ. ದೂರ ಇರುವ ನಮ್ಮ ಜಮೀನನ್ನು ತೆಗೆದುಕೊಳ್ಳಬೇಕು". ಎಂದು ಅವರು ಹೇಳುತ್ತಾರೆ. ಆ ಡಿ.ಸಿ. ಇವರ ಮಾತನ್ನು ಕೇಳಿಕೊಂಡು ಕ್ರಯವಾಗಿದ್ದ ಪತ್ರವನ್ನು ರದ್ದು ಮಾಡಿ ಹೊಸದಾಗಿ ತೆಗೆದುಕೊಳ್ಳುತ್ತಾರೆ. ಶ್ರೀರಾಮುಲುರವರ ಒತ್ತಡ ಅಲ್ಲಿಗೂ ಹೋಗಿದೆ. ನಾನು ಬಳ್ಳಾರಿಗೆ ಹೋಗಿದ್ದಾಗ ಆ ಡಿ.ಸಿ.ಯವರನ್ನು ಈ ಬಗ್ಗೆ ನಾನು ಕೇಳಿದೆ. ಅದಕ್ಕೆ ಅವರು "ನಾನೇನು ಮಾಡಲಿ ಸರ್ ? ಎಂ.ಎಲ್.ಎ.ರವರ ಒತ್ತಡ ಇದೆ." ಎಂದು ಪಾಪ ಆ ಡಿ.ಸಿ. ಹೇಳುತ್ತಾರೆ. "ಏಕೆ ಈ ರೀತಿ ಮಾಡಿದಿರಿ? ನೀವು ಸಿಕ್ಕಿಹಾಕಿಕೊಳ್ಳುವಿರಿ, ಯಾರ್ಯಾರದೋ ಮಾತನ್ನು ಕೇಳಿಕೊಂಡು ಏಕಿ ಈ ರೀತಿ ಮಾಡುತ್ತೀರಿ?" ಎಂದರೆ, "ಇಲ್ಲ ಸರ್, ನಾವೇನು ಮಾಡುವುದು? ನಾವು ಕ್ರಯ ಮಾಡಿರುವುದು ನಿಜ, ಆದರೆ ಅದನ್ನು ರದ್ದು ಮಾಡಲಿಕ್ಕೆ ಎಂ.ಎಲ್.ಎ. ಒತ್ತಡ ಬಂದು ಇದನ್ನು ರದ್ದುಮಾಡಲಾಗಿದೆ," ಎಂದು ಹೇಳಿದರು. ಏಕೆ ಹೀಗೆ ಮಾಡಿದಿರಿ? ರದ್ದು ಆಗಿರುವುದು ಸತ್ಯ ತಾನೇ?

ಶ್ರೀ ಎಂ.ಎಸ್. ಸೋಮಲಿಂಗಪ್ಪ : ಅಲ್ಲಿ ತಗ್ಗು ಜಮೀನು ತೆಗೆದುಕೊಂಡಿದ್ದರು. ತಾವೇ ಆ ಸ್ಥಳಕ್ಕೆ ಹೋಗಿ ನೋಡಿ, ಅದು ತಗ್ಗು ಜಮೀನು ಅಥವಾ ಬಗಡೆ ಜಮೀನು ಎನ್ನುವುದು ತಾವೇ ನೋಡಿ. ಬಗಡೆ ಜಮೀನನ್ನು ತೆಗೆದುಕೊಳ್ಳಿ ಎಂದು ನಾನು ಹೇಳಿದ್ದೇನೆ.

ಶ್ರೀ ಸಿದ್ದರಾಮಯ್ಯ : ಅವರು ಹೇಳುವುದೂ ನಿಜ, ಆದರೆ ಅದು ರದ್ದಾಗಿರುವುದು ನಿಜ.

ಶ್ರೀ ಹೆಚ್.ಡಿ. ರೇವಣ್ಣ : ಒಂದು ಕಡೆ ಅಲ್ಲ, ಹತ್ತು ಕಡೆ ಆ ರೀತಿ ರದ್ದಾಗಿದೆ. ಸಿರಗುಪ್ಪ ತಾಲ್ಲೂಕಿನಲ್ಲಿ ದುಡ್ಡು ತೆಗೆದುಕೊಂಡಿರುವುದಲ್ಲದೆ ಈಗ ಅವರಿಗೆ ಕೊಟ್ಟಿರುವ ಚೆಕ್ ಎಲ್ಲವನ್ನು ವಾಪಸ್ಸು ಕೊಡಿ ಎಂದು ಹೇಳಿದ್ದಾರೆ. ಕಾಂಗ್ರೆಸ್, ಜೆಡಿ(ಎಸ್) ಎನ್ನುವ ಒಂದೇ ಕಾರಣಕ್ಕೆ ಈ ರೀತಿ ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ : ಕೇಳಿರಿ, ಒಂದು ಕಡೆಯಲ್ಲ, ಹತ್ತುಕಡೆ ಈ ರೀತಿ ಆಗಿದೆಯಂತೆ, ಕೇವಲ ಬಳ್ಳಾರಿ ಜಿಲ್ಲೆಯೆಂದು ನಾನು ತಿಳಿದುಕೊಂಡಿದ್ದೆ. ಬೇರೆ ಕಡೆ ಕೂಡ ಆಗಿದೆಯಂತೆ. ನೀವು ಕೊಟ್ಟುಬಿಟ್ಟು ಹೀಗೆಲ್ಲಾ ಹೇಳಿದರೆ ಹೇಗೆ ? ರೇವಣ್ಣನವರಿಗೆ ಇವರೇ ಕೊಡುವುದು. ಈ ಬಿಜಾಪುರ ಜಿಲ್ಲೆಯ ದೇವರ ಹಿಪ್ಪರಗಿಯಲ್ಲಿ ನಮ್ಮ ಶಾಸಕರು ಇಲ್ಲೇ ಇದ್ದಾರೆ, ಅವರ ಊರಿನಲ್ಲಿ ಸರ್ಕಾರವೇ ಸರ್ವೆ ಮಾಡಿ ಪರಿಹಾರ ಕೊಡಬೇಕೆಂದೂ ಹೇಳಿದರೂ ಇವತ್ತಿನವರೆಗೂ ಕೊಟ್ಟಿಲ್ಲ. Those who are identified by the Government have not been given compensation. ನೋಡಿ ಕರುಣಾಕರ ರೆಡ್ಡಿಯವರೆ, ಬಿಜಾಪುರದ ದೇವರಹಿಪ್ಪರಗಿ ಕ್ಷೇತ್ರದಲ್ಲಿ ಪರಿಹಾರ ಸಿಕ್ಕಿಲ್ಲವಂತೆ. ಪ್ರವಾಹ ಆದಮೇಲೆ ಲೋಕಾಯುಕ್ತರವರು 11ನೇ ಅಕ್ಟೋಬರ್‌ನಲ್ಲಿ ಒಂದು ವರದಿ ಕೊಟ್ಟಿದ್ದಾರೆ. ಆ ವರದಿಯಲ್ಲಿ ಏನೇನು ದೋಷಗಳಿವೆ, ಏನೇನು ತಪ್ಪುಗಳನ್ನು ಮಾಡಿದ್ದೀರಿ, ಏಕೆ ಪರಿಹಾರ ಸಿಕ್ಕಿಲ್ಲ, ಇವೆಲ್ಲವನ್ನೂ ಹೇಳಿದ್ದಾರೆ. ಅದನ್ನು ಇವತ್ತಿನವರೆಗೆ ಸರಿಪಡಿಸಲಿಕ್ಕಾಗಿಲ್ಲ. ಸುಮಾರು 8000 ರಿಂದ 9000 ಜಾನುವಾರುಗಳು ಸತ್ತುಹೋದವು. ಅವಕ್ಕೆ ಸರಿಯಾಗಿ ಪರಿಹಾರ ಕೊಟ್ಟಿಲ್ಲ. ಕುರಿಗಾರರು ಎಂದರೆ ಬರಿ ಕುರುಬರು ಎಂದು ತಿಳಿದುಕೊಂಡು ಬಿಟ್ಟಿದ್ದಾರೆ. ಚಿತ್ರದುರ್ಗ ಜಿಲ್ಲೆಗೆ ಹೋದರೆ ಹಿಂದುಳಿದ ಜನಾಂಗಕ್ಕೆ ಸೇರಿದ ಗೊಲ್ಲರು ಕುರಿ ಸಾಕಾಣಿಕೆ ಮಾಡುತ್ತಾರೆ. ಕರುಬರು ಯಾವುದೋ ಕಾಲದಲ್ಲಿ ಕುರಿ ಸಾಕಾಣಿಕೆ ಮಾಡುತ್ತಿದ್ದರು. ಈಗ ಕುರಿಗಳೂ ಇಲ್ಲ, ಕುರಿಗಳನ್ನು ಮೇಯಿಸಲಿಕ್ಕೆ ಜಮೀನೂ ಇಲ್ಲ, ಎಲ್ಲಾ ಈಗ ಬಿಟ್ಟುಬಿಟ್ಟಿದ್ದಾರೆ. ಅವ್ಯಾವೋ ಒಂದಷ್ಟು ಕಾಡಿನಲ್ಲಿ ಮೇಯಿಸಿಕೊಂಡು ಇರುತ್ತಾರೆ ಅಷ್ಟೇ. ಅವರಿಗೆ

ಯಾವುದೇ ಗೋ ಶಿಕ್ಷಣ ಇಲ್ಲ, ಏನೂ ಇಲ್ಲ. ಆ ಕಡೆ ಬೆಳಗಾಂ, ಬಿಜಾಪುರ, ಧಾರವಾಡದ ಕಡೆಗೆ ಒಂದಷ್ಟು ಬಿಟ್ಟರೆ ಇನ್ನೆಲ್ಲಿಯೂ ಕುರಿಗಳು ಇಲ್ಲ, ಕುರುಬರು ಅಲೆಮಾರಿ ಜನಾಂಗದವರ ರೀತಿ ಸುತ್ತುತ್ತಾರೆ. ಉಳಿದವರೆಲ್ಲಾ ಊರುಗಳಲ್ಲಿ ಮೇಯಿಸುವವರೆಲ್ಲಾ ಬೇರೆ ಜಾತಿಯವರು. ಇವರೇನು ತಿಳಿದುಕೊಂಡು ಬಿಟ್ಟಿದ್ದಾರೆ, ಕುರುಬರು ಎಂದು ಅವರ ಮೇಲೆ ಏನೋ ಕೋಪವೋ ಏನೋ, ಅವರಿಗೆ ಇದುವರೆಗೆ ಪರಿಹಾರವನ್ನೇ ಕೊಟ್ಟಿಲ್ಲ. Postmortem certificate ತೋರಿಸಿ ಎಂದು ಅವರ್ಯಾರೋ ಅಧಿಕಾರಿ ಹೇಳುತ್ತಾರಂತೆ. ಆ ಕುರಿಗಳು ಹೊಳೆಯಲ್ಲಿ ಕೊಚ್ಚಿಕೊಂಡು ಹೋಗಿದ್ದರೆ ಎಲ್ಲಿಗೆ ಹೋಗಬೇಕು ಅವರು ರಿಪೋರ್ಟ್ ತರಲಿಕ್ಕೆ? ಅವೆಲ್ಲಾ ಕೊಚ್ಚಿಕೊಂಡು ಹೋಗಿ ಸಮುದ್ರ ಡ್ಯಾಮ್‌ಗೋ ಹೋಗಿ ಸೇರಿಕೊಂಡು ಬಿಟ್ಟಿದೆ. ಅದು ಎಲ್ಲಿ ಹೋಗಿ ಸೇರಿಕೊಂಡು ಕೊಳೆತು ಹೋಗಿದೆಯೋ? Postmortem certificate ತೆಗೆದುಕೊಂಡು ಬನ್ನಿ, ಇಲ್ಲದಿದ್ದರೆ ಪರಿಹಾರ ಕೊಡುವುದಿಲ್ಲವೆಂದರೆ ಹೇಗೆ ? ನಮ್ಮ ಸಮಾಜ ಕಲ್ಯಾಣ ಸಚಿವರು ಚಿತ್ರದುರ್ಗದಿಂದ ಬರುತ್ತೀರಿ, ನಿಮ್ಮ ಜಿಲ್ಲೆಯಲ್ಲಿ ಕುರಿ ಸಾಕಾಣಿಕೆ ಮಾಡುವವರು ಹೆಚ್ಚಾಗಿ ಗೊಲ್ಲರು, ಕುರುಬರು ಜಾತಿಯವರಲ್ಲವೇ? ನೀವೇನೂ ಮಾತನಾಡುವುದಿಲ್ಲವಲ್ಲ? ಅವರೇ ಹೆಚ್ಚು ಕುರಿ ಸಾಕುವುದು. ಈಗ ಎಲ್ಲಾ ಜಾತಿಯವರು ಕುರಿ ಸಾಕುತ್ತಾರೆ, ವೀರಶೈವರು, ಒಕ್ಕಲಿಗರು, ಕುರುಬರು, ಹರಿಜನರು, ದಲಿತರು, ಮುಸಲ್ಮಾನರು ಸಹಿತ ಕುರಿ ಸಾಕುತ್ತಾರೆ. ಬ್ರಾಹ್ಮಣರು ಸಹಿತ ಕುರಿ ಸಾಕುತ್ತಾರೆ. ಪೈಗಂಬರ್, ಕ್ರೈಸ್ತ ಜನಾಂಗದವರು ಎಲ್ಲಾ ಕುರಿ ಸಾಕುತ್ತಾರೆ. All Shepherds. ಕುರಿ ಸಾಕುವವರು shepherds ಅಷ್ಟೇ. It is a universal animal and universal food also. ಮಾನ್ಯ ಅಧ್ಯಕ್ಷರೆ, ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ ನಾನು ಎಲ್ಲಾದರೂ ಊರು, ಜಿಲ್ಲೆಗಳಿಗೆ ಹೋದಾಗ ಬಹಳಷ್ಟು ಜನ ನಮ್ಮವು ಹತ್ತು ಕುರಿ ಸತ್ತು ಹೋದವು, ನಮ್ಮವು 20, 30 ಕುರಿಗಳು ಸತ್ತುಹೋದವು ಎಂದು ನನ್ನ ಹತ್ತಿರ ಬಂದು ಅರ್ಜಿಗಳನ್ನು ಕೊಡುತ್ತಾರೆ. ರೆಡ್ಡಿಯವರೆ, ದಯಮಾಡಿ ಅವರಿಗೆ ಸ್ವಲ್ಪ liberal ಆಗಿ ಪರಿಹಾರ ಕೊಡಿ. ಎಲ್ಲಾ ಪಾಪ ಬಡವರು

ಇದ್ದಾರೆ. ಎಲ್ಲಾ ಜಾತಿಯವರು ಕುರಿ ಸಾಕಾಣಿಕೆ ಮಾಡುವವರಿದ್ದಾರೆ. ನನ್ನ ಮೇಲಿನ ಕೋಪಕ್ಕೆ ಏನೇನೋ ಮಾಡುವುದಕ್ಕೆ ಹೋಗಬೇಡಿ, ಆಮೇಲೆ ಶ್ರೀರಾಮುಲುರವರೆ, ನಾಯಕರೂ ಸಹ ಹಳ್ಳಿಗಳಲ್ಲಿ ವಿಪರೀತ ಕುರಿ ಸಾಕಾಣಿಕೆ ಮಾಡುತ್ತಾರೆ, ನಿಮ್ಮ ಮಾತು ಬಹಳ ಚೆನ್ನಾಗಿ ನಡೆಯುತ್ತದೆ, ನೀವು ಒಂದು ಸ್ವಲ್ಪ ಹೇಳಿ.

ಶ್ರೀ ಬಿ. ಶ್ರೀರಾಮುಲು : ಈಗ ಮಾತನಾಡುವಾಗ ಅದನ್ನೇ ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ನೀವು ಅದನ್ನೇ ಮಾತನಾಡುತ್ತಿದ್ದಿರಾ? ಇಲ್ಲ, ನೀವು ಏನೋ ವ್ಯವಹಾರದ ಬಗ್ಗೆ ಮಾತನಾಡುತ್ತಿರುವಿರಿ. ಮಾನ್ಯ ಅಧ್ಯಕ್ಷರೆ, ಈ ರೀತಿ ಕುರಿಗಳು ಕೊಚ್ಚಿಕೊಂಡು ಹೋಗಿವೆ. ಅವಕ್ಕೆ ಒಂದು ರೂಪಾಯಿ ಪರಿಹಾರವಿಲ್ಲ. ಅವರೇನು ಮಾಡಬೇಕು? ಅವರಿಗೆ ಪರಿಹಾರ ಕೊಡದಿದ್ದರೆ ಹೇಗೆ? ಅವರ ನಷ್ಟವನ್ನು ಹೇಗೆ ಪರಿಹರಿಸುವುದು ಹೇಳಿ ನೋಡೋಣ ? ಅವರ ನಷ್ಟ ಪರಿಹಾರವಾಯಿತೇ? ಅವಾಸ್ತವಿಕವಾಗಿ ನೀವು ಪ್ರಶ್ನೆ ಮಾಡಲಿಕ್ಕೆ ಪ್ರಾರಂಭಿಸಿದರೆ ವಾಸ್ತವಿಕವಾದ ವಿಚಾರಗಳಿಗೆ ಉತ್ತರ, ಪರಿಹಾರ ಸಿಗುವುದಿಲ್ಲ. Practical ಆಗಿ ಯೋಚನೆ ಮಾಡಬೇಕು. ಇದು ಇವತ್ತು ಆಗಬೇಕಾಗಿರುವುದು: ಆದರೆ ಆಗಿಲ್ಲ. ಆದ್ದರಿಂದ I demand, ಈಗಲೂ ಕೂಡ ಅವರಿಗೆ ಆ ಪರಿಹಾರವನ್ನು ಕೊಡಬೇಕು. ಸುಮ್ಮಸುಮ್ಮನೆ ನಾವು ಎಲ್ಲಾ ಕೊಟ್ಟಿದ್ದೇವೆಂದು ಹೇಳಬಾರದು. ಮಾನ್ಯ ಅಧ್ಯಕ್ಷರೆ, ಇವರು ಇಲ್ಲಿಯವರೆಗೆ 1,878 ಕೋಟಿ ರೂಪಾಯಿಗಳಷ್ಟು ಹಣವನ್ನು ಬಿಡುಗಡೆ ಮಾಡಿರುವುದು. ಕೇಂದ್ರ ಸರ್ಕಾರದಿಂದಲೇ 1,743 ಕೋಟಿ ರೂ. ಬಂದಿದೆ. CRF, Calamity Fund ಮತ್ತು Special grants, all put together ಈ ವರ್ಷ ಇಲ್ಲಿಯವರೆಗೆ 1,743 ಕೋಟಿ ರೂ. ಇವರು ಬಿಡುಗಡೆ ಮಾಡಿರುವುದು 1878 ಕೋಟಿ ರೂ. ಖರ್ಚು ಮಾಡಿರುವುದು 1500 ಅಥವಾ 1600 ಕೋಟಿ ರೂ.ಗಳು. ಕೇಂದ್ರ ಸರ್ಕಾರದಿಂದ ಬಂದಿರುವ ದುಡ್ಡೇ ಇವರ ಹತ್ತಿರ ಉಳಿದುಕೊಂಡಿದೆ. ಇವರೇ ಒಂದು ಕಡೆ Budget speech ನಲ್ಲಿ 341 ಕೋಟಿ ರೂ. contribution ಬಂದಿದೆ ಎಂದು

ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿರುವ ಕಡೆ ಸಾವಿರ ಚಿಲ್ಲರೆ ಬಂದಿದೆ ಎಂದು ಹೇಳುತ್ತಾರೆ. CRF central share, 104 ಕೋಟಿ 52 ಲಕ್ಷ. State share, 34 ಕೋಟಿ 84 ಲಕ್ಷ. CRF centre, for state, 139 ಕೋಟಿ 36 ಲಕ್ಷ. Amount released under NCCF, Government of India, 83 ಕೋಟಿ 83 ಲಕ್ಷ. Amount released under NCCF, Government of India, 1457.49 ಲಕ್ಷ Amount released under NCCF, Government of India, 53 ಕೋಟಿ 4 ಲಕ್ಷ. Total NCCF released, ರೂ. 1594 ಕೋಟಿ Grand total CRF plus NCCF 1733 ಕೋಟಿ 72 ಲಕ್ಷ. ಇದು ಇವರೇ ಕೊಟ್ಟಿರತಕ್ಕಂಥದ್ದು. The amount released by this to DC's and IO's by RD 1878 ಕೋಟಿ ರೂ. ಅಷ್ಟೆ ಇವರು release ಮಾಡಿರುವುದು. ಇವರ ಹತ್ತಿರ ಇಷ್ಟೂ ದುಡ್ಡು ಖರ್ಚಾಗಿಲ್ಲ. 341 ಕೋಟಿ ರೂ. ಸಾರ್ವಜನಿಕರಿಂದ ವಂತಿಗೆ ಬಂದಿದೆ. 1733 ಕೋಟಿ + 341 ಕೋಟಿ, ವಂತಿಗೆಯೇ 2 ಸಾವಿರ ಚಿಲ್ಲರೆ ಕೋಟಿ ರೂ. ಬಂದಿದೆ. ಕೇಂದ್ರ ಸರ್ಕಾರದ್ದು, ಜನ ಕೊಟ್ಟಿರುವುದು. ಅದು ಅಲ್ಲದೇ ಸರ್ಕಾರಿ ನೌಕರರು, Boards and corporations ಇವರೆಲ್ಲಾ ಕೊಟ್ಟಿರುವುದು ಒಂದು ಸಾವಿರ ಕೋಟಿಗಿಂತ ಹೆಚ್ಚಿಗೆ ಬಂದಿದೆ. ಈ ದುಡ್ಡೆಲ್ಲಾ ಬಂದ ಮೇಲೂ ನೀವು ಏಕೆ ಪರಿಹಾರ ಕೊಡಲಿಲ್ಲ? ನಾವು ಅಷ್ಟು ಮಾಡಿದೆವು, ಇಷ್ಟು ಮಾಡಿದೆವು, ಇಷ್ಟು ಪರಿಹಾರ ಕೊಟ್ಟೆವು ಎಂದು ಸುಮ್ಮನೆ ಬೆನ್ನು ತಟ್ಟಿಕೊಂಡು ಜಂಬ ಹೊಡೆದುಕೊಳ್ಳುವುದಲ್ಲ. ಪಾಪ ಜನರಿಗೆ ಇನ್ನು ಕಷ್ಟ ಇದೆ. ನಿಮ್ಮ pocket ನಿಂದ ನೀವು ಮಾಡಲಿಲ್ಲ? ನಿಮ್ಮ ಕೈಯಿಂದ ಒಂದೇ ಒಂದು ಮನೆಯನ್ನು ಕಟ್ಟಿದ್ದೀರಾ? ಒಂದು ಎಕರೆ ಜಮೀನನ್ನು ತೆಗೆದುಕೊಂಡಿದ್ದೀರಾ? ಅದನ್ನು development ಮಾಡುವುದಕ್ಕಾದರೂ ಒಂದು ರೂಪಾಯಿಯನ್ನು ಖರ್ಚು ಮಾಡಿದ್ದೀರಾ? ಅದನ್ನು development ಮಾಡುವುದಕ್ಕೂ ಕೂಡ ಖರ್ಚು ಮಾಡಿರುವ ಹಣ ಯಾವುದೆಂದರೆ, NREGS, National Rural Employment Guarantee Scheme ನಲ್ಲಿ ಬರತಕ್ಕಂಥ ಹಣ. ಮತ್ತೆ ನಿಮ್ಮದೇನು? what is your role ? what is your contribution ? ಏನು

ನರಸಿಂಹನಾಯಕರೆ, ನಿನ್ನೆ ಅವರು ಹೇಳು ಎಂದು ಹೇಳಿದರು, ಪಾಪ ನೀವು ಇಲ್ಲಿ ಬಂದು ಹೇಳಿದಿರಿ. ಈಗ ಗೊತ್ತಾಯಿತೇ ಸತ್ಯ ಹೇಗೆ ಹೇಳುತ್ತಿದ್ದೇನೆ ಎಂದು? ಬರೆದುಕೊಳ್ಳಿ, 1733 ಕೋಟಿ ಕೇಂದ್ರ ಸರ್ಕಾರದ್ದು, 341 ಕೋಟಿ ಜನರ ವಂತಿಗೆ, 1200 ಕೋಟಿ Boards, Corporations, ಸರ್ಕಾರಿ ನೌಕರರು ಕೊಟ್ಟಿರುವುದು, ಎಷ್ಟು ಆಯಿತು ಎಂದು ಲೆಕ್ಕ ಹಾಕಿ ಹೇಳಿ, ನೀವು ಬಿಡುಗಡೆ ಮಾಡಿರುವುದು 1878 ಕೋಟಿ. ಇನ್ನು ನಿಮ್ಮ ಹತ್ತಿರ ಎಷ್ಟು ದುಡ್ಡು ಇದೆ? ಅದನ್ನು ಏನು ಮಾಡಿದಿರಿ? ಖರ್ಚು ಮಾಡಿಕೊಂಡುಬಿಟ್ಟಿರಿ. ಸಂಬಳ ಕೊಡುವುದಕ್ಕೆ ದುಡ್ಡು ಇರಲಿಲ್ಲವೋ ಅಥವಾ ಇನ್ನಾವುದಕ್ಕೋ ದುಡ್ಡು ಇರಲಿಲ್ಲವೋ ಏನು ಕಥೆನೋ ನಿಮ್ಮದು? ಖರ್ಚು ಮಾಡಿದಿರಿ. ಅವರಿಗೆ ಕೊಡುವುದಕ್ಕಾಗಲಿಲ್ಲ. ಇವತ್ತಿನವರೆಗೂ ಒಂದು ಮನೆ ಕಟ್ಟಿಸಿಲ್ಲ. ನೂರು ಮನೆಯನ್ನು 'ಅಮ್ಮ' ಕಟ್ಟಿಸಿಕೊಟ್ಟಿರುವುದು ಬಿಟ್ಟರೆ, not a single house is build by Government. ಇವತ್ತು ಏನು ಎಷ್ಟೋ ಕಡೆ ಜಮೀನನ್ನು ತೆಗೆದುಕೊಂಡಿದ್ದೀರಲ್ಲಾ ನೀವು ಅದರ site formation ಮಾಡಿದ್ದೀರಲ್ಲಾ, ಮಾನ್ಯ ಜಗದೀಶ್ ಶೆಟ್ಟರೆ ಅದು NREGS ದುಡ್ಡು. Where is your money?

ಶ್ರೀ ಜಗದೀಶ್ ಶೆಟ್ಟರ್ : Details ಅನ್ನು ಹೇಳುತ್ತಾರೆ.

ಶ್ರೀ ಸಿದ್ದರಾಮಯ್ಯ : ನೀವು ಬರೆದುಕೊಂಡು ಹೇಳಬೇಕಲ್ಲಾ ಅವರಿಗೆ? ಅದಕ್ಕೆ ನೀವು ಬರೆದುಕೊಳ್ಳಿ ಎಂದು ಹೇಳಿದೆ. ಅವರು ಇಲ್ಲ, ಅದಕ್ಕೆ ನಿಮಗೆ ಹೇಳಿದೆ. ಅವರು ಎದ್ದು ಹೋದರಲ್ಲಾ? ಇಲ್ಲವೆಂದರೆ ನಿಮಗೆ ಹೇಳುತ್ತಿರಲಿಲ್ಲ. This much is certain. You have to admit, it is NREGS amount. Rural development ಗೆ ಬಂದಿರುವ ದುಡ್ಡು ಅದು. ಇವತ್ತು 2,841 ಕೋಟಿ ರೂ. NREGS ಸರ್ಕಾರಕ್ಕೆ allocation ಇದೆ. ಅದರಲ್ಲಿ ನಿಮ್ಮದು 10%, 90% ಕೇಂದ್ರ ಸರ್ಕಾರದ್ದು, ನಾನು ಇವೆಲ್ಲವನ್ನೂ ಏಕೆ ಹೇಳುತ್ತಿದ್ದೇನೆಂದರೆ, ಇವರ ಹತ್ತಿರ ಇಲ್ಲ ಖರ್ಚು ಮಾಡಲಿಕ್ಕೆ. No money. ಅದನ್ನು ಹೇಳಿದರೆ, ಬನ್ನಿ ಅಖಾಡಕ್ಕೆ . . .

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ,....

ಶ್ರೀ ಸಿದ್ದರಾಮಯ್ಯ : ಕುಳಿತುಕೊಳ್ಳಿ, ನಾನು ಆ ಕಡೆ ತಿರುಗಿ ನೋಡುವುದಿಲ್ಲ. ಬನ್ನಿ ಅಖಾಡಕ್ಕೆ ಎಂದು ನಿಮ್ಮನ್ನು ನಾನು ಕರೆದೆನೇ? ನಾನು ಮಾನ್ಯ ಯಡಿಯೂರಪ್ಪನವರಿಗೆ ಹೇಳುತ್ತಿದ್ದರೆ, ನೀವು ಎದ್ದೇಳುತ್ತಿದ್ದೀರಲ್ಲಾ? ದಯಮಾಡಿ ತಾವು ಕುಳಿತುಕೊಳ್ಳಿ. ಮಧ್ಯೆ ಏಕೆ ಎದ್ದೇಳುತ್ತೀರಿ? ಬನ್ನಿ ಅಖಾಡಕ್ಕೆ; ವಿಧಾನಸೌಧಕ್ಕೆ ಬನ್ನಿ ಎಂದು ಹೇಳುತ್ತಾರೆ. ಇಲ್ಲಿ ಬಂದರೆ ಅವರು ಇರುವುದೇ ಇಲ್ಲ.

ಅಧ್ಯಕ್ಷರು : ವಿಧಾನ ಪರಿಷತ್ತಿಗೆ reply ಕೊಡುವುದಕ್ಕೆ ಹೋಗಿದ್ದಾರೆ.

ಶ್ರೀ ಸಿದ್ದರಾಮಯ್ಯ : ಸರಿ ಅವರು ಇಲ್ಲಿ ಇರಬೇಕೋ ಬೇಡವೋ ಕರೆದುಬಿಟ್ಟು ?

ಅಧ್ಯಕ್ಷರು : ಬರುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಅವರು ಇದ್ದರು.

ಶ್ರೀ ಸಿದ್ದರಾಮಯ್ಯ : ಅವರು ಇದ್ದರು ಸರಿ ಜಗದೀಶ್ ಶೆಟ್ಟರ್ ಅವರೆ, ಬನ್ನಿ ಅಖಾಡಕ್ಕೆ ಎಂದು ನೀವು ಹೇಳಿದ್ದೀರಾ? ಅವರು ಹೇಳಿದರು ಎಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು : ವಿಧಾನ ಪರಿಷತ್ತಿಗೆ reply ಕೊಡುವುದಕ್ಕೆ ಹೋಗಿದ್ದಾರೆ.

ಶ್ರೀ ಸಿದ್ದರಾಮಯ್ಯ : ಹೋಗಲಿ. ನಿಮ್ಮ ಅನುಮತಿ ತೆಗೆದುಕೊಂಡು ಹೋಗಿದ್ದಾರೆ. ಆದರೆ Governor's address ಬಗ್ಗೆ ಚರ್ಚೆಯಾಗುತ್ತಿರುವುದು ಇಲ್ಲ. ಇಲ್ಲಿ ಇರಬೇಕೆನ್ನುವುದು ಅಷ್ಟೆ. ಮಾನ್ಯ ಅಧ್ಯಕ್ಷರೆ, ಆದುದರಿಂದ ಇವರು ಒಂದೂ ರೂಪಾಯಿಯನ್ನೂ ಖರ್ಚು ಮಾಡಿಲ್ಲ. ಇವರ ಹತ್ತಿರ ದುಡ್ಡೇ ಇಲ್ಲ. ಎಲ್ಲಾ ಜನ ಕೊಟ್ಟಿರುವುದು, ಕೇಂದ್ರ ಸರ್ಕಾರ ಕೊಟ್ಟಿರುವುದು, ಎಲ್ಲಾ ದುಡ್ಡು ಇವರ ಹತ್ತಿರ ಉಳಿದುಕೊಂಡಿತ್ತು, ಅದರಲ್ಲಿ ಮಾಡಬಹುದಾಗಿತ್ತು. ಈಗಾಗಲೇ ಮುಂಗಾರಿನೊಳಗೆ ಎಲ್ಲರಿಗೂ ಮನೆಯನ್ನು ಕಟ್ಟಿಸಿಕೊಡುತ್ತೇವೆಂದು ಹೇಳಿದ್ದಾರೆ. ಮೊನ್ನೆ ಮಾನ್ಯ ಯಡಿಯೂರಪ್ಪನವರು, ಜೂನ್ ಒಳಗೆ 63 ಸಾವಿರದ 200 ಮನೆಗಳನ್ನು ಕಟ್ಟಿಸಿ 307 ಹಳ್ಳಿಗಳನ್ನು shift ಮಾಡುತ್ತೇವೆ ಎಂದು statement ಕೊಟ್ಟಿದ್ದಾರೆ. Is it possible ? ಈಗಾಗಲೇ ನಾವು ಮಾರ್ಚ್

ಮಧ್ಯದಲ್ಲಿದ್ದೇವೆ. ಈ ತಿಂಗಳಿನಲ್ಲಿ ಯಾರೂ ಏನೂ ಕೆಲಸ ಮಾಡುವುದಿಲ್ಲ. ಸರ್ಕಾರಿ ನೌಕರರು ಯಾರೂ ಒಬ್ಬರು ಕೆಲಸ ಮಾಡುವುದಿಲ್ಲ. ಪೆಂಡಿಂಗ್ ಬಿಲ್ಸ್ ಬಂದಿದೆಯೋ ಇಲ್ಲವೋ, ದುಡ್ಡು ಬಂದಿದೆಯೋ ಇಲ್ಲವೋ ಎಂದು ಕಾಯುತ್ತಾ ಕುಳಿತಿದ್ದಾರೆ. PWD, Irrigation, rural developmentನಲ್ಲಿ ಪೆಂಡಿಂಗ್ ಬಿಲ್ಸ್ ಬಂದಿದೆಯೋ ಇಲ್ಲವೋ ಎಂದು ಕಾಯುತ್ತಿದ್ದಾರೆ.

ಶ್ರೀ ಬಿ.ಸಿ. ಪಾಟೀಲ್ : ಹಾವೇರಿ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್ ಮತ್ತು PWD ಗಾಡಿಗಳು ಡೀಸೆಲ್‌ಗೆ ದುಡ್ಡು ಇಲ್ಲದೇ ನಿಂತು ಹೋಗಿವೆ. C.E.O. ಅವರನ್ನು ಕೇಳಿದರೆ, ನಾವು NREG ದುಡ್ಡಿನಲ್ಲಿ ಡೀಸೆಲ್ ಮತ್ತು ಪೆಟ್ರೋಲ್‌ಗೆ ದುಡ್ಡು ಕೊಡುತ್ತೇವೆಂದು ಹೇಳುತ್ತಾರೆ, ಅದರಲ್ಲಿ Administrative purposeಗೆ 4% ದುಡ್ಡು ಇದೆ. ಆ ದುಡ್ಡನ್ನು ನಾವು ಡೀಸೆಲ್ ದುಡ್ಡಿಗೆ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಎರಡನೆಯದು, calamities ಆದಂತಹ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮತ್ತು PWD ರಸ್ತೆಗಳು ಏನು ಹಾಳಾಗಿವೆ ಮತ್ತು ಶಾಲಾ ಕಾಲೇಜುಗಳು ಏನು ಹಾಳಾಗಿದ್ದವು, ಅಂಗನವಾಡಿ ಕಟ್ಟಡಗಳಿಗೆ ಇವತ್ತಿನವರೆಗೂ ಒಂದು ಪೈಸೆಯೂ ಬಿಡುಗಡೆಯಾಗಿಲ್ಲ.

ಶ್ರೀ ಸಿದ್ದರಾಮಯ್ಯ : ಆಯಿತು, ನೀವು ಹೇಳುವುದು ಗೊತ್ತಾಯಿತು. ಅಲ್ಲಿ ಬಿಜಾಪುರದಲ್ಲಿ ಕಂಟ್ರಾಕ್ಟರ್‌ಗಳು ಚಳುವಳಿ ಮಾಡುತ್ತಿದ್ದಾರೆ ಮಾನ್ಯ ಬಿ.ಸಿ.ಪಾಟೀಲ್‌ರವರೆ. ಎರಡು ವರ್ಷಗಳಿಂದ ನಮಗೆ 3054ನಲ್ಲಿ ದುಡ್ಡು ಬಂದಿಲ್ಲ, 5054 ನಲ್ಲಿ ದುಡ್ಡು ಬಂದಿಲ್ಲ, ಏನು ಮಾನ್ಯ ಉದಾಸಿಯವರೆ, 3054 ರಲ್ಲಿ ಎರಡು ವರ್ಷಗಳಿಂದ ಬಿಲ್ ಕೊಟ್ಟಿಲ್ಲ ಅಲ್ಲವೇ? ಒಂದೊಂದು ಜಿಲ್ಲೆಯಲ್ಲಿ PWD ಯಲ್ಲಿ 40–50 ಕೋಟಿ ರೂ.ಬಿಲ್‌ಗಳು ಪೆಂಡಿಂಗ್‌ನಲ್ಲಿವೆ. ಕೊಡುತ್ತೀರಿ, ಮುಂದೆ ಕೊಡುವುದನ್ನು ನೋಡೋಣ, ನೀವು ಕೊಡುತ್ತೀರೋ, ಇಲ್ಲವೇ ನಾವೇ ಬಂದು ಕೊಡುತ್ತೇವೋ ನೋಡೋಣ?!

ಡಾ: ಹೆಚ್.ಸಿ. ಮಹದೇವಪ್ಪ : ಇನ್ನೂ ಕೊಟ್ಟಿಲ್ಲ.

ಶ್ರೀ ಸಿದ್ದರಾಮಯ್ಯ : ಈ ತಿಂಗಳು ಕೊಡುತ್ತೇವೆಂದು ಹೇಳುತ್ತಿದ್ದಾರೆ. ನಾನು ಮೈಸೂರು ಜಿಲ್ಲೆಯಲ್ಲಿ ಎಷ್ಟು ಪೆಂಡಿಂಗ್ ಬಿಲ್ ಇದೆಯೆಂದು

ಕೇಳಿದೆ. ಅಲ್ಲಿ 38 ಕೋಟಿ ರೂ.ಗಳಷ್ಟು ಪೆಂಡಿಂಗ್ ಬಿಲ್ ಇದೆ. ಅದೇ ರೀತಿ ಬಿಜಾಪುರದಲ್ಲೂ ಕೇಳಿದೆ. ಅಲ್ಲಿ Contractors' Associationನವರು ಚಳುವಳಿ ಮಾಡುತ್ತಿದ್ದಾಗ, ಆ ಜಿಲ್ಲೆಯಲ್ಲಿ ಎರಡು ವರ್ಷಗಳಿಂದಲೂ ಕೊಟ್ಟಿಲ್ಲ. 3054ದು, 12th Finance Commissionದು NABARD, ಯಾವುದರಲ್ಲಿಯೂ ಬಂದಿಲ್ಲ ಸರ್, ಅಸೆಂಬ್ಲಿಯಲ್ಲಿ ಈ ಕುರಿತು ಪ್ರಸ್ತಾಪಿಸಬೇಕೆಂದು ಕೇಳಿಕೊಂಡರು. ಎರಡು ವರ್ಷಗಳಿಂದ ದುಡ್ಡಿಲ್ಲ, ರಸ್ತೆಗಳಲ್ಲಿ ಮಣ್ಣು ಹಾಕುವುದಕ್ಕೆ ನಿಮ್ಮ ಹತ್ತಿರ ದುಡ್ಡಿಲ್ಲ, ಮೇಂಟೆನೆನ್ಸ್ ಇಲ್ಲ. Annual Repairs (AR) ಅಥವಾ ಇದ್ದರೂ ಅವರೇ ತಿಂದುಕೊಳ್ಳಬಹುದೇನೋ, ನನಗೆ ಗೊತ್ತಿಲ್ಲ. Superintending Engineer ಅವರನ್ನು ಟ್ರಾನ್ಸ್‌ಫರ್ ಮಾಡಿ ಪುನಃ ಅಲ್ಲಿಗೆ ತಂದು ನೇಮಿಸಿಬಿಟ್ಟರು. ಹೀಗಾದಾಗ, ನಿಮ್ಮ ಮಾತನ್ನು ಅವರು ಎಲ್ಲಿ ಕೇಳುತ್ತಾರೆ?

ಅಧ್ಯಕ್ಷರೆ, ಮೊದಲನೆಯದಾಗಿ, ದುಡ್ಡು ಕೊಟ್ಟಿಲ್ಲ, ಮಾನ್ಯ ಯಡಿಯೂರಪ್ಪನವರು ಅಂಕಿ-ಅಂಶಗಳನ್ನು ಕೊಟ್ಟು, ಸಿದ್ದರಾಮಯ್ಯನವರು ಸುಳ್ಳು ಹೇಳುತ್ತಿದ್ದಾರೆ ; he is misleading the people ಎಂದು ಒಂದು ಹೇಳಿಕೆ ಕೊಟ್ಟರು. ನಾನು ಕೇಳುತ್ತೇನೆ. ತೆರಿಗೆ ಬಹಳ ಪ್ರಮಾಣದಲ್ಲಿ ಬರುತ್ತದೆಂದು ಇವರು ಹೇಳಿದರು. ಡಿಸೆಂಬರ್ ಅಂತ್ಯದವರಗೆ Commercial Taxನಲ್ಲಿ ರೆವಿನ್ಯೂ ಕಲೆಕ್ಷನ್ ಕಳೆದ ವರ್ಷ 12,709 ಕೋಟಿ ರೂ. ಆಗಿತ್ತು, ಈ ವರ್ಷ ಡಿಸೆಂಬರ್ ಅಂತ್ಯಕ್ಕೆ 12,426 ಕೋಟಿ ರೂ. ಅಂದರೆ, ಕಳೆದ ವರ್ಷಕ್ಕೂ, ಈ ವರ್ಷಕ್ಕೂ 283 ಕೋಟಿ minus growth ಆಗಿದೆ. How can Mr. Yeddyurappa claims that ತೆರಿಗೆ ಚೆನ್ನಾಗಿದೆ, ವಸೂಲು ಮಾಡಿದ್ದೇವೆ? ಇದಕ್ಕೆ ಅವರು ಕಾರಣ ಏನು ಹೇಳುತ್ತಾರೆಂದರೆ, Global recession ಇತ್ತು ಎಂಬುದು! ನಾವು ಕಲೆಕ್ಷನ್ ಮಾಡುವುದು sales tax ಮಾತ್ರ. ಯಾರಾದರೂ ಉಣ್ಣುವುದು, ತಿನ್ನುವುದು, ಬಟ್ಟೆ ಹಾಕಿಕೊಳ್ಳುವುದನ್ನು ಬಿಟ್ಟು ಬಿಟ್ಟಿದ್ದಾರೆಯೇ? ಕಾರು, ಮೋಟಾರ್‌ಗಳನ್ನು ಓಡಿಸುವುದು ಮತ್ತು ಕಳೆದ ವರ್ಷಕ್ಕಿಂತಲೂ ಡೀಸೆಲ್, ಪೆಟ್ರೋಲ್ ಬಳಕೆಯ ಪ್ರಮಾಣ ಕಡಿಮೆಯಾಗಿದೆಯೇ? ಹೋಟೆಲ್‌ಗಳಿಗೆ ಹೋಗುವುದನ್ನು ಯಾರಾದರೂ ಕಡಿಮೆ ಮಾಡಿದ್ದಾರೆಯೇ? ಹೋಟೆಲ್‌ಗಳಲ್ಲಿ ವ್ಯಾಪಾರವೆಲ್ಲವೂ ನಿಂತು

ಹೋಗಿವೆಯೇ? ಬಟ್ಟೆ ಅಂಗಡಿಗಳೆಲ್ಲವನ್ನೂ ಮುಚ್ಚಿಕೊಂಡು ಹೋಗಿದ್ದಾರೆಯೇ? ದವಸ-ಧಾನ್ಯ ಅಂಗಡಿಗಳೆಲ್ಲವನ್ನೂ ಮುಚ್ಚಿಕೊಂಡು ಹೋಗಿದ್ದಾರೆಯೇ? Government of Karnatakaಕ್ಕೆ, Statesಗೆ major ಆಗಿ ಬರುವುದು only Sales Tax. Except real estate, construction activities ಕಡಮೆಯಾಗಿರುವುದು ಬಿಟ್ಟರೆ, ಬೇರೆಯದು ಆಗಿಲ್ಲ. Inflation is 7-8%. Generally, inflation is 7-8%. Tax growth in normal course 10% ಇರಬೇಕು. Here is a case of minus growth. ಇದಕ್ಕೆ ಬೆನ್ನು ತಟ್ಟಿಕೊಳ್ಳಬೇಕೆ? ಇದು misleading ಆಗುತ್ತದೆಯೇ? 29,500 ಕೋಟಿ ರೂ. ಈ ವರ್ಷದ ಪ್ಲಾನ್ ಸೈಜ್ ಆಗಿದೆ. ಬಹಳ ಭ್ರಮೆ ಇಟ್ಟುಕೊಂಡು ಮಾಡಿರುವ ಪ್ಲಾನ್ ಸೈಜ್ ಇದಾಗಿದೆ. What is the expenditure you have made till the end of December? Rs. 12,413 crore. It is the figure furnished by Honourable Chief Minister. it is not my figure. In the remaining 3 months, Rs. 17,088 crore has to be spent. In 9 months Rs. 12,403 crore has been spent. Is it possible to spend Rs. 17,088 crores in 3 months? That is the plan amount. I can understand if the plan is cut by 10 to 15%. Here is a case where the plan is going to be cut by more than 40% this year. Can we call this Government as a development oriented Government ? Not at all. ಹೇಳಿ ನೋಡೋಣ. ಇದರ ಬಗ್ಗೆ ಹೇಳಿದರೆ, ಅದು misleading ಆಗುತ್ತದೆಯೇ? These are the figures furnished by you only.

12.30 P.M.

Truth is this. ಹಣಕಾಸಿನ ಪರಿಸ್ಥಿತಿ ಕುರಿತು ಹೇಳುವುದಾದರೆ, there is a clear case of mis-management, fiscal mis-management. They only said. Yeddyurappa himself made it very clear. The debt burden is Rs. 78,000 crore. The debt service for this year is Rs. 5,300 crore i.e., interest payment, ಇದು debt trap ಕಡೆಗೆ ಹೋಗುತ್ತಿದೆಯೋ ಅಥವಾ fiscal correction and consolidation ಕಡೆಯತ್ತ ಸಾಗುತ್ತಿದೆಯೇ?

Can we call that this Government is going towards the fiscal correction and consolidation? Whatever fiscal correction and consolidation has been done in the year 2004-05, 2005-06, ಅವೆಲ್ಲವನ್ನೂ ಹಾಳು ಮಾಡಿದ್ದೀರಿ.

ಕುರ್ಚಿ ಹಿಡಿದುಕೊಳ್ಳುವುದೇ ನಿಮಗೆ ಕಷ್ಟವಾಗಿಬಿಟ್ಟಿದೆ. ಇದೆಲ್ಲವನ್ನೂ ಮಾಡುವುದಕ್ಕೆ ನಿಮಗೆ ಸಮಯವಾದರೂ ಎಲ್ಲಿಗೆ? ಏನಾದರೂ ಆಗಲಿ, ಮರ್ಯಾದೆ ಹೋಗಲಿ, ಸ್ವಾಭಿಮಾನ ಹಾಳಾಗಲಿ, ದುಡ್ಡು ಏನಾದರೂ ಆಗಲಿ, ನಾವು ಕುರ್ಚಿ ಹಿಡಿದುಕೊಳ್ಳುತ್ತೇವೆ! ಅಥವಾ ದುಡ್ಡು ಏನಾದರೂ ಇದೆಯೇ? where is the money? ಈ ವರ್ಷದ target 48,000 ಕೋಟಿ ರೂ. ತೆರಿಗೆ ಬರುವುದಾಗಿ ಬರೆದುಕೊಂಡಿದ್ದೀರಿ. Upto December, you have collected only Rs. 31,000 crore. Another Rs. 17,000 crore, is it possible to collect in 3 months? There will be a gap in targeted receipts and realization of the taxes. It will be more than Rs. 10,000 crore. ಮಾಡುವುದಕ್ಕೆ ನಿಮ್ಮ ಹತ್ತಿರ ದುಡ್ಡು ಎಲ್ಲಿದೆ? ಅಭಿವೃದ್ಧಿಗೆ ದುಡ್ಡಿಲ್ಲ. ಕೆಲಸ ಮಾಡುವುದಕ್ಕೆ ದುಡ್ಡಿಲ್ಲ, ಇದರ ಬಗ್ಗೆ ಹೇಳಿದರೆ, you are misleading ಎನ್ನುವುದು. ಬನ್ನಿ ಅಸೆಂಬ್ಲಿಗೆ, ಚರ್ಚಿಸೋಣ ಎನ್ನುತ್ತೀರಿ. This is the financial position of the Government. This is a fical mis-management. ಇವತ್ತು ನಮ್ಮ ಒಟ್ಟು GDP ಯಲ್ಲಿ ಸುಮಾರು 29-30% debt burden ಆಗಿದೆ. The total debt burden is 29-30% of the GDP. ಈಗ 13th Finance Commissionನಲ್ಲಿ ಶಿಫಾರಸ್ಸು ಮಾಡಿರುವುದು it should not exceed 25% under any circumstances. ಎಲ್ಲವೂ ಸರಿಯಾಗಿದೆ. ದುಡ್ಡು ತುಂಬಿ ತುಳುಕುತ್ತಿದೆ, ಮನೆಗಳನ್ನು ಕಟ್ಟುವುದಕ್ಕೆ ಯಾರ್ಯಾರು ಪ್ರಾಮಿಸ್ ಮಾಡಿದ್ದಾರೋ, ನಿಮ್ಮಿಂದ ಒಂದೂ ಮನೆಯನ್ನು ಕಟ್ಟುವುದಕ್ಕಾಗದೆ, ಮನೆಗಳನ್ನು ಕಟ್ಟಿಕೊಡಲು ಪ್ರಾಮಿಸ್ ಮಾಡಿರುವವರಿಗಾಗಿ ಜಾತಕ ಪಕ್ಷಿಗಳ ತರಹ ಕಾಯ್ದುಕೊಂಡು ಕುಳಿತಿದ್ದೀರಿ. ದುಡ್ಡು ಇಲ್ಲದಿರುವುದರಿಂದಲೇ ತಾನೇ ಈ ಪರಿಸ್ಥಿತಿ? ದುಡ್ಡು ಇದ್ದಿದ್ದರೆ ಮನೆಗಳನ್ನು ಏಕೆ ಕಟ್ಟುತ್ತಿರಲಿಲ್ಲ?

ಮನೆಗಳನ್ನು ಕಟ್ಟಿಕೊಡುವುದಕ್ಕೆ ಯಾರ್‍ಯಾರು ಪ್ರಾಮಿಸ್ ಮಾಡಿದ್ದರೋ, ಅದರಂತೆ ಮನೆಗಳನ್ನು ಕಟ್ಟಿಕೊಟ್ಟಿದ್ದಾರೋ, ಅವರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸೋಣ. ನಿನ್ನೆ ಯಾರೋ ನಾರಾಯಣಸ್ವಾಮಿಯವರು ಮಾಡಿದರು, ಅದಕ್ಕೆ ನಾವು ಅಭಿನಂದನೆಗಳನ್ನು ಸಲ್ಲಿಸಿದ್ದೇವೆ. ಅಭಿನಂದನೆಗಳನ್ನು ಸಲ್ಲಿಸಬೇಕು. ಈಗ "ಅಮ್ಮ" (ಮಾತಾ ಅಮೃತಾನಂದಮಯಿ)ನವರು 100 ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ, ಅವರಿಗೆ ಅಭಿನಂದನೆಗಳನ್ನು ಸಲ್ಲಿಸೋಣ. ಕಷ್ಟದಲ್ಲಿರುವವರಿಗೆ ಯಾರ್‍ಯಾರು ಸಹಾಯ ಮಾಡುತ್ತಾರೋ, ಯಾರ್‍ಯಾರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತಾರೋ, ಅವರೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸೋಣ. ಈ ಸಲ ರಾಜ್ಯದ ಜನರೆಲ್ಲರೂ ಸ್ಪಂದಿಸಿದ್ದಾರೆ. ಆದರೆ, ನೀವು ಸ್ಪಂದಿಸಿಲ್ಲವಲ್ಲ? As a Government, ನೀವು ಸ್ಪಂದಿಸಿಲ್ಲ, ನಿಮ್ಮದು ಸ್ಪಂದನವಿಲ್ಲ. As far as the finance is concerned, this is the situation of Karnataka. ಮಾತು ಎತ್ತಿದರೆ ರೈತರಿಗೆ ಮಾಡುತ್ತೇನೆ, ರೈತರ ಪರವಾಗಿರುತ್ತೇವೆಂದು ಹೇಳುತ್ತೀರಿ? ಆದರೆ ಎಲ್ಲಿ? ಈ ವರ್ಷ 61 ಸಾವಿರ ಕೋಟಿ ರೂ. ಖರ್ಚು ಮಾಡುತ್ತೇವೆಂದು ಹೇಳಿದ್ದೀರಿ. ಆದರೆ, ಮಾರ್ಚ್ ಕೊನೆಯವರೆಗೆ ಖರ್ಚು ಮಾಡಿರುವುದು 38 ಸಾವಿರ ಕೋಟಿ ರೂ. ಇನ್ನೂ 24 ಸಾವಿರ ಕೋಟಿಯನ್ನು ಎಲ್ಲಿಂದ ಖರ್ಚು ಮಾಡುತ್ತೀರಿ? ದುಡ್ಡು ಎಲ್ಲಿದೆ? Tax ಕೂಡ ವಸೂಲಿ ಮಾಡಲಿಲ್ಲ. ಅಬ್ಕಾರಿ ಬಾಬ್ತು ಒಂದನ್ನು ಬಿಟ್ಟು ಬೇರೆಯದ್ದರಲ್ಲಿ ತೆರಿಗೆಯನ್ನು ವಸೂಲಿ ಮಾಡಲಿಲ್ಲ. ಅಬ್ಕಾರಿಯಲ್ಲಿ ಏಕೆ ತೆರಿಗೆ ಬಂತು ಎಂದರೆ, ನಾನು ಈ ಹಿಂದೆಯೂ ಹೇಳಿದ್ದೇನೆ, ಈಗಲೂ ಹೇಳುತ್ತೇನೆ. After the abolition of arrack ಸಾರಾಯಿ ಕುಡಿಯುತ್ತಿದ್ದವರೆಲ್ಲರೂ ವಿಸ್ಕಿ ಕುಡಿಯಲು ಪ್ರಾರಂಭ ಮಾಡಿದರು. ಹಳ್ಳಿ ಹಳ್ಳಿಗಳಲ್ಲಿ ವಿಸ್ಕಿ ಬಾಟೆಲ್‌ಗಳು ಓಡಾಡುತ್ತಿವೆ. ಆದ್ದರಿಂದ Excise Actಗೆ ಒಂದು ತಿದ್ದುಪಡಿಯನ್ನು ಮಾಡಿ ಎಂದು ನಾನು ಸಲಹೆ ಕೊಡುತ್ತೇನೆ. ಈಗಲಾದರೂ ಅದನ್ನು ಮಾಡಿ 20 ಬಾಟೆಲ್ ವಿಸ್ಕಿಯನ್ನು ಅವನ ಸ್ವಂತಕ್ಕೆ ಕುಡಿಯಲು ಎಂದು ಹೇಳಿ ಇಟ್ಟುಕೊಂಡು ಬಿಡಬಹುದು. There is a provision under the Excise Act.

ಅವನು ಪ್ರತಿದಿನ 20 ಕ್ವಾರ್ಟರ್ ಬಾಟಲ್ ತೆಗೆದುಕೊಂಡು ಹೋಗುತ್ತಾನೆ. ನಾನು ಅಬ್ಕಾರಿ ಇಲಾಖೆಯವರಿಗೆ ಏನು 20 ಬಾಟಲ್ ತೆಗೆದುಕೊಂಡು ಹೋಗುತ್ತಾರೆಂದು ಕೇಳಿದೆ. ಈ ಕಡೆ ಪೊಲೀಸ್‌ನವರು ಹೋಗುತ್ತಾರೆ ಅವರು ಮಾಮೂಲಿ ವಸೂಲಿ ಮಾಡಿಕೊಂಡು ಬರುತ್ತಾರೆ. ಆ ಕಡೆ ಅಬ್ಕಾರಿಯವರು ಹೋಗುತ್ತಾರೆ, ಅವರೂ ಮಾಮೂಲಿ ವಸೂಲಿ ಮಾಡಿಕೊಂಡು ಬರುತ್ತಾರೆ. ಅವನು ಮಾಮೂಲಿ ಕೊಟ್ಟಮೇಲೆ 38 ರೂಪಾಯಿಗೆ ಮಾರಬೇಕಾಗಿದ್ದ ವಿಸ್ಕಿ ಬಾಟಲ್‌ನ್ನು 60 ರೂಪಾಯಿಗೆ ಮಾರುತ್ತಾರೆ. ಆದ್ದರಿಂದ ನಮ್ಮ ಅಬ್ಕಾರಿ ಇಲಾಖೆಯಲ್ಲಿ 20% ಜಾಸ್ತಿ ತೆರಿಗೆ ಬರುತ್ತಿದೆ. Why not in other tax yielding departments? Why only in Excise? Recession ಆಗಿದ್ದರೆ exciseಗೂ ತಟ್ಟಬೇಕಾಗಿತ್ತಲ್ಲಾ? Stamps and Duty ಯಲ್ಲಿ minus, Motor vehicle Tax ನಲ್ಲಿ minus, Commercial Taxನಲ್ಲಿ minus. Why? it is because of recession. ನಾವಿದ್ದಾಗ the growth of the Commercial Tax was 2004–05, 2005–06 ರಲ್ಲಿ 29%. Let him dispute. 2005–06ರಲ್ಲಿ ವ್ಯಾಟ್ ಜಾರಿಗೆ ತಂದಮೇಲೆಯೇ 27%. Why not this time? Recession, can anybody agree with this argument? No. ಇವರಿಗೆ ನರ್ಮ್ ಕಾರ್ಯಕ್ರಮದಲ್ಲಿ, ಎನ್‌ಆರ್‌ಇಜಿಎಸ್, ಎನ್.ಆರ್.ಹೆಚ್.ಎಮ್. (ಕೇಂದ್ರೀಯ ಗ್ರಾಮೀಣ ಆರೋಗ್ಯ)ದಲ್ಲಿ ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ. ಎನ್.ಆರ್.ಹೆಚ್.ಎಮ್ ನಲ್ಲಿ 108 ಸಂಖ್ಯೆಯಲ್ಲಿ ಉಚಿತ ಆಂಬ್ಯುಲೆನ್ಸ್‌ನ್ನು ಮಾಡಿಕೊಂಡಿದ್ದಾರೆ. ಮಾನ್ಯ ಶ್ರೀರಾಮುಲುರವರು ಇಲ್ಲ. ಇದರಲ್ಲಿ 150 ಕೋಟಿ ರೂ. ಕೇಂದ್ರ ಸರ್ಕಾರದ್ದು 12th Finance Commission ದುಡ್ಡು. 10 ಕೋಟಿ ರೂ. ರಾಜ್ಯ ಸರ್ಕಾರದ್ದು, ಉಳಿದದ್ದು ಕೇಂದ್ರ ಸರ್ಕಾರದ ಕಾರ್ಯಕ್ರಮ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನದ್ದು. ಆದರೆ ಆ ವಾಹನದ ಮೇಲಿರುವ ಫೋಟೋ ಮಾತ್ರ ಯಡಿಯೂರಪ್ಪನವರದ್ದು ಮತ್ತು ಶ್ರೀರಾಮುಲುರವರದ್ದು. ಸ್ವಲ್ಪ ಮನಮೋಹನಸಿಂಗ್‌ರವರ ಫೋಟೋವನ್ನೂ ಹಾಕಿದ್ದರೆ ನಿಮಗೇನಾಗುತ್ತಿತ್ತು? ಇದು ನ್ಯಾಯವೇ? ನಮ್ಮಲ್ಲಿ ಯಡಿಯೂರಪ್ಪನವರದ್ದು,

ಶೋಭಾ ಕರಂದ್ಲಾಜೆಯವರದ್ದು, ಸುರೇಶ್ ಕುಮಾರ್‌ರವರ ಫೋಟೋ ಇತ್ತು. ನಾನು ಹೋಗಿ ನರ್ಮ್ ಕಾರ್ಯಕ್ರಮದಲ್ಲಿ 90 ಪರ್ಸೆಂಟ್ ಹಣ ಕೇಂದ್ರ ಸರ್ಕಾರದಿಂದ ಬರುತ್ತದೆ, ಹತ್ತು ಪರ್ಸೆಂಟ್ ಹಣ ಮಾತ್ರ ರಾಜ್ಯ ಸರ್ಕಾರದ್ದು, ನೀವು ಯಾರ ಫೋಟೋ ಹಾಕಿಕೊಳ್ಳಬೇಕು ಎಂದು ಕೇಳಿದೆ. ಆಮೇಲೆ ಮನಮೋಹನಸಿಂಗ್ ಮತ್ತು ಜಯಪಾಲರೆಡ್ಡಿಯವರ ಫೋಟೋವನ್ನು ಹಾಕಿದರು. See the fun. ಹಣವನ್ನು ಕೊಟ್ಟಿರುವವರ ಫೋಟೋವನ್ನು ಹಾಕಿ ನೆನಪು ಮಾಡಿಕೊಳ್ಳಿ.

ಶ್ರೀ ಕೆ.ಜಿ. ಕುಮಾರಸ್ವಾಮಿ : ಪ್ರಧಾನ ಮಂತ್ರಿ ಗ್ರಾಮಸಡಕ್ ಯೋಜನೆಯಲ್ಲಿ ಮಾಜಿ ಪ್ರಧಾನಿಗಳಾದ ವಾಜಪೇಯಿಯವರ ಫೋಟೋವನ್ನೆಲ್ಲಾ ನೀವು ತೆಗೆದುಹಾಕಿಬಿಟ್ಟಿರಿ. ಒಂದೇ ಒಂದು ಫೋಟೋ ಇಲ್ಲ. ಆ ಹೆಸರುಗಳನ್ನೂ ತೆಗೆದುಹಾಕಿಬಿಟ್ಟಿರಿ.

ಶ್ರೀ ಅರವಿಂದ ಲಿಂಬಾವಳಿ : ವಾಜಪೇಯಿಯವರೇನು ಚತುಷ್ಪಥ ರಸ್ತೆಗಳನ್ನು ಮಾಡಿದರಲ್ಲಾ, ಅವರು ನಿಂತಿರುವ ಫೋಟೋ ಇತ್ತು. ಅವರು ಆ ಕೆಲಸವನ್ನು ಮಾಡಿದ್ದಾರೆ. ಅವರ ಫೋಟೋವನ್ನು ಹಾಕಿದ್ದರೆ ಇವರಿಗೆ ಏನು ಸಮಸ್ಯೆಯಾಗಿತ್ತೋ, 75 ಕೋಟಿ ರೂ. ಟೆಂಡರ್‌ನ್ನು ಮಾಡಿ ಆ ಫೋಟೋಗಳನ್ನೆಲ್ಲಾ ತೆಗೆದರು. ಫೋಟೋ ತೆಗೆಯುವುದಕ್ಕೆ 75 ಕೋಟಿ ರೂ.ಗಳು.

ಶ್ರೀ ಸಿದ್ದರಾಮಯ್ಯ : Mr. Limbavali, with due respect to your statement ಅವರು ಪ್ರಧಾನ ಮಂತ್ರಿಯಾಗಿರುವವರೆಗೂ ಅವರ ಫೋಟೋ ಇತ್ತು. ಹಾಗಾದರೆ, ನೆಹರುರವರದ್ದು, ಇಂದಿರಾ ಗಾಂಧಿಯವರದ್ದು, ರಾಜೀವ್ ಗಾಂಧಿಯವರದ್ದು ಎಲ್ಲರದ್ದನ್ನು ಹಾಕಿಕೊಂಡಿರಲು ಆಗುತ್ತದೆಯೇ? ವಾಜಪೇಯಿ ಒಬ್ಬರದೇ ಏಕೆ?

ಶ್ರೀ ಪ್ರಕಾಶ್ ಹುಕ್ಕೇರಿ : ಎಂ.ಪಿ. ಚುನಾವಣೆ ಬಂದಾಗ ಚುನಾವಣಾ ಆಯೋಗದವರು ಆ ಫೋಟೋಗಳನ್ನು ತೆಗೆಸಿದ್ದಾರೆ.

ಅಧ್ಯಕ್ಷರು : ಎಲ್ಲರು ಎದ್ದು ನಿಂತುಕೊಂಡರೆ ಹೇಗೆ?

ಶ್ರೀ ಟಿ.ಬಿ. ಜಯಚಂದ್ರ : ಲೋಕಸಭೆಯ ಚುನಾವಣೆಯ ಸಂದರ್ಭದಲ್ಲಿ ಎಲ್ಲಾ ಫೋಟೋಗಳನ್ನು ತೆಗೆಯಬೇಕೆಂದು ತೀರ್ಮಾನ ಮಾಡಿದ ಹಿನ್ನೆಲೆಯಲ್ಲಿ ಅವುಗಳನ್ನು ತೆಗೆದಿರುವುದೇ ಹೊರತು ಬೇರೆ ಯಾರೂ ತೆಗೆದಿರುವುದಿಲ್ಲ.

ಶ್ರೀ ಅರವಿಂದ ಲಿಂಬಾವಳಿ : ಚುನಾವಣೆಯಾದ ಮೇಲಾದರೂ ಹಾಕಬಹುದಾಗಿತ್ತಲ್ಲಾ?

ಶ್ರೀ ಟಿ.ಬಿ. ಜಯಚಂದ್ರ : ಏಕೆ ಹಾಕುತ್ತೀರಿ?

ಶ್ರೀ ಸಿ.ಸಿ. ಪಾಟೀಲ್ : ಮಾನ್ಯ ಸಿದ್ದರಾಮಯ್ಯನವರೆ, ಪ್ರಧಾನ ಮಂತ್ರಿಗಳಾದ ಮನಮೋಹನ್‌ಸಿಂಗ್‌ರವರ ಫೋಟೋ ಹಾಕುವುದನ್ನು ನಾನು ಒಪ್ಪುತ್ತೇನೆ. Why and what about Smt. Sonia Gandhi Photo?

ಶ್ರೀ ಟಿ.ಬಿ. ಜಯಚಂದ್ರ : ಅವರ ಯು.ಪಿ.ಎ. ಛೇರ್ಮನ್. She is a UPA Chairperson.

Sri C.C. Patil : No. No. She is not a part and parcel of the Government.

Sri T.B. Jayachandra : She is a UPA Chairperson. She has got all the status of a Cabinet Minister. It is a programme of the UPA.

ಶ್ರೀ ಸಿ.ಸಿ. ಪಾಟೀಲ್ : ಪ್ರಧಾನ ಮಂತ್ರಿಗಳಾದ ಮನಮೋಹನ್‌ಸಿಂಗ್‌ರವರ ಫೋಟೋವನ್ನು ಹಾಕಲು ನಮ್ಮ ಅಭ್ಯಂತರವಿಲ್ಲ. ಆದರೆ, ಸೋನಿಯಾ ಗಾಂಧಿಯವರ ಫೋಟೋ ಏಕೆ ?

ಶ್ರೀ ಸಿ. ಕೃಷ್ಣ ಬೈರೇಗೌಡ : UPA is recognized by the Parliament. It has become a part of the official machinery. ಎನ್.ಡಿ.ಎ. ಇದ್ದಾಗ Co-ordination Committee ಗೆ ಯಾವ ರೀತಿಯ recognition ಇತ್ತೋ ಅದೇ ರೀತಿ ಯು.ಪಿ.ಎ.ಗೂ official recognition ಇದೆ. ಶ್ರೀಮತಿ ಸೋನಿಯಾ ಗಾಂಧಿಯವರು ಅದರ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದಾರೆ. Official recognition ಇದೆ. ನೀವು ಏನಾದರೂ ಹೇಳಿಕೊಳ್ಳಿ. ಆದರೆ,

recordsಗೆ clarity ಇರಬೇಕು. ಅವರು ರಾಜಕೀಯಕ್ಕೆ ಏನಾದರೂ ಮಾತನಾಡಿಕೊಳ್ಳಲಿ, ಆದರೆ, recordsಗೆ clarity ಇರಬೇಕು.

Sri Siddaramaiah : She is having the cabinet status.

ಶ್ರೀ ಸಿ.ಎಂ. ಉದಾಸಿ : ತಮಗೆ ಗೊತ್ತಿರಬಹುದು, ಇತ್ತೀಚೆಗೆ ಒಂದು ಪತ್ರಿಕೆಯಲ್ಲಿ ವರದಿ ಬಂದಿದೆ. ಈ ದೇಶದಲ್ಲಿ 540 ಸಂಘ ಸಂಸ್ಥೆಗಳ ಹೆಸರಿನಲ್ಲಿ ರಾಜೀವ್ ಗಾಂಧಿ ಮತ್ತು ಇಂದಿರಾ ಗಾಂಧಿಯವರ ಹೆಸರಿನಲ್ಲಿ ಸರ್ಕಾರಿ ಕಾರ್ಯಕ್ರಮದಲ್ಲೂ ಸಹಿತ ದಾಖಲೆಯಲ್ಲಿದೆಯೆಂದು ಇಂಟರ್‌ನೆಟ್‌ನಲ್ಲಿ ವರದಿ ಬಂದಿದೆ. ಪತ್ರಿಕೆಯಲ್ಲಿ ವರದಿ ಬಂದಿರುವುದನ್ನು ತಾವು ನೋಡಿರಬಹುದು. ಆದ್ದರಿಂದ ನಾವು ಟೀಕೆಟಿಪ್ಪಣಿಯನ್ನು ಮಾಡಬೇಕಾಗಿಲ್ಲ. ಹೆಸರಿನ ಸಲುವಾಗಿ ಇಷ್ಟೊಂದು ಚರ್ಚೆಯಾಗುವ ಅವಶ್ಯಕತೆ ಇದೆಯೇ ಎನ್ನುವುದರ ಬಗ್ಗೆ ಒಂದು ಸಲ ಆಲೋಚನೆ ಮಾಡಿ ಎಂದು ಹೇಳಬಯಸುತ್ತೇನೆ.

ಶ್ರೀ ಸಿದ್ದರಾಮಯ್ಯ : ನಾನು ಮಾನ್ಯ ಶ್ರೀರಾಮುಲು ಹೆಸರು ಏಕೆ ಹಾಕಿಕೊಂಡಿದ್ದೀರಿ? ಅಥವಾ ಅವರ photo ಏಕೆ ಹಾಕಿಕೊಂಡಿದ್ದೀರಿ? ಅಥವಾ ಮಾನ್ಯ ಯಡಿಯೂರಪ್ಪನವರ photo ಏಕೆ ಹಾಕಿಕೊಂಡಿದ್ದೀರಿ ಎಂದು ಕೇಳಲಿಲ್ಲ. But, ಆ ದುಡ್ಡು, it is not totally ನಿಮ್ಮ ಹಣ ಅಲ್ಲ. That you must know. ಆ project cost 221 ಕೋಟಿ ರೂ.ಗಳು. 517 '108 ಆಂಬ್ಯುಲೆನ್ಸ್'ಗಳನ್ನು ಅದರಲ್ಲಿ ತೆಗೆದುಕೊಳ್ಳಬೇಕು. ಸಿಕಂದರಾಬಾದ್‌ನ Research Institute ನಲ್ಲಿ training ಕೊಡಿಸಿ ಎಲ್ಲವನ್ನೂ ಮಾಡಿದ್ದಾರೆ. ಈ ವರ್ಷದ ಮಾರ್ಚ್‌ನೊಳಗೆ 517 ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಇದರಲ್ಲಿ 15 ಕೋಟಿ ರೂ.ಗಳನ್ನು ಮಾತ್ರ State Government ಕೊಟ್ಟಿದೆ. ಇನ್ನುಳಿದ ದುಡ್ಡು 12th Finance Commission ದುಡ್ಡು ಮತ್ತು National Rural Health Mission ದುಡ್ಡಾಗಿದೆ. ಇದು ಹೌದೋ, ಅಲ್ಲವೋ ಎಂಬುದನ್ನು ಮಾನ್ಯ ಶ್ರೀರಾಮುಲುರವರೇ ಹೇಳಲಿ. ದಯವಿಟ್ಟು ಇದನ್ನು ಅವರೇ clarify ಮಾಡಲಿ. It is a fact. It cannot be disputed. ನಾನು ಇದನ್ನು ತಿಳಿದುಕೊಂಡೇ ಹೇಳುತ್ತಿದ್ದೇನೆ. ಉತ್ತರ ಕೊಡುವಾಗ ಎಲ್ಲವನ್ನೂ ಹೇಳಿ.

ಹೋಗಲಿ, ಮಾನ್ಯ ಶ್ರೀರಾಮುಲುರವರೆ, ಇದು 'ಅದೇ ದುಡ್ಡು' ಎಂದು ಎದ್ದು ನಿಂತು ಹೇಳಿಬಿಡಿ, ಎಲ್ಲರಿಗೂ ಗೊತ್ತಾಗಲಿ. ನಾನು ಹೇಳಿದರೆ ಅದು ಸುಳ್ಳು ಎಂದುಕೊಳ್ಳುತ್ತಾರೆ, ಆದ್ದರಿಂದ ನೀವೇ ಹೇಳಿಬಿಡಿ. ನಾನು ಇದನ್ನೊಂದು example ಕೊಟ್ಟೆ ಅಷ್ಟೆ. ಈ ತರಹದ್ದು ಬೇಕಾದಷ್ಟು ಇವೆ. I am not goint to quote all those examples. ಇದು ಆಯಿತೆ? ಕೊನೆಯದಾಗಿ, ಮಾನ್ಯ ಲಿಂಬಾವಳಿಯವರ ಖಾತೆಗೆ ಸೇರಿದ ವಿಷಯವೊಂದನ್ನು ಪ್ರಸ್ತಾಪಿಸಬಯಸುತ್ತೇನೆ. ಕನ್ನಡ ವಿಶ್ವವಿದ್ಯಾಲಯದ ಜಾಗ ಕೊಡುವ ವಿಚಾರದಲ್ಲಿ ಹಠಕ್ಕೆ ಬೀಳಬೇಡಿ. ಕನ್ನಡ ವಿಶ್ವವಿದ್ಯಾಲಯದ ಜಾಗವನ್ನು ಕೊಡುವ ಬಗ್ಗೆ ಇಡೀ writers ಸಮೂಹ, intellectuals ವಿರೋಧ ಮಾಡುತ್ತಿದ್ದಾರೆ.

ಶ್ರೀ ಅರವಿಂದ ಲಿಂಬಾವಳಿ : 'ಇಡೀ'ಯಲ್ಲ, ನಿಮಗೆ ಯಾರು ಹೇಳಿದರು? 'ಹಿಡಿ'ಯಷ್ಟು ಜನರು ಮಾತ್ರ ವಿರೋಧ ಮಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಈ ಮನವಿಯನ್ನು ನಿಮಗೆ ಕೊಡುತ್ತೇನೆ. ಇದಕ್ಕೆ ಯಾರ್‍ಯಾರು ಸಹಿ ಮಾಡಿದ್ದಾರೆಂದು ನೀವೇ ನೋಡಿ.

ಶ್ರೀ ಅವರಿಂದ ಲಿಂಬಾವಳಿ : ಅದು ಗೊತ್ತಿದ್ದೇ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಯಾರ್‍ಯಾರು ಸೈನ್ ಮಾಡಿದ್ದಾರೆ ಎಂಬುದು ಗೊತ್ತಿಲ್ಲದೇ ಮಾತನಾಡುತ್ತಿದ್ದೀರಿ.

ಶ್ರೀ ಅರವಿಂದ ಲಿಂಬಾವಳಿ : ಅದು ಗೊತ್ತಿರುವುದರಿಂದಲೇ, ಇದರಲ್ಲಿ involve ಆಗಿರುವುದರಿಂದಲೇ ಈ ಮಾತನ್ನು ಹೇಳುತ್ತಿದ್ದೇನೆ. ಹಿಡಿಯಷ್ಟು ಜನ ಮಾತ್ರ ಇದನ್ನು ವಿರೋಧ ಮಾಡುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಈ ಮನವಿಯನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ದಯವಿಟ್ಟು ಇದರಲ್ಲಿ ಯಾರ್‍ಯಾರು ಸಹಿ ಮಾಡಿದ್ದಾರೆ ಎಂಬುದನ್ನು ನೀವೇ ನೋಡಿ, ಆಮೇಲೆ ಆ ಬಗ್ಗೆ ಅವರಿಗೆ ಹೇಳಿಬಿಡಿ. ನಿಮಗೂ ಒಂದು ಕಾಪಿಯನ್ನು ಕೊಟ್ಟಿರಬೇಕು. ರಾಷ್ಟ್ರಕವಿಯಾದ ಶ್ರೀ ಜಿ.ಎಸ್. ಶಿವರುದ್ರಪ್ಪನವರು ಒಳ್ಳೆಯ writer ಅಲ್ಲವೋ? ಜ್ಞಾನಪೀಠ

ಪ್ರಶಸ್ತಿ ಪಡೆದಂತಹ ಶ್ರೀ ಅನಂತಮೂರ್ತಿಯವರು ಒಳ್ಳೆಯ ಸಾಹಿತಿಗಳಲ್ಲವೇ? ನಾನು ಇಲ್ಲಿ ಸಹಿ ಮಾಡಿರುವ ಎಲ್ಲರ ಹೆಸರುಗಳನ್ನೂ ಸಹ ಹೇಳಲಿಕ್ಕೆ ಹೋಗುವುದಿಲ್ಲ.

ಶ್ರೀ ಅರವಿಂದ ಲಿಂಬಾವಳಿ : ಈ ತರಹ ಯಾರ್‍ಯಾರು ಸಾಹಿತಿಗಳಿದ್ದಾರೆ, ನಾಡಿನ ಹಿರಿಯರಿದ್ದಾರೆ, ಅವರಿಗೆ ತಪ್ಪು ಕಲ್ಪನೆಯಾಗಿದೆ. ಅವರಿಗೆ ತಪ್ಪು ಮಾಹಿತಿಗಳನ್ನು ಕೊಡಲಾಗಿದೆ. ನಾನು ಅಂತಹವರಿಗೆ ಎಲ್ಲಾ ಮಾಹಿತಿಗಳನ್ನು ಕೊಡಲಿಕ್ಕೆ ಸಿದ್ಧನಾಗಿದ್ದೇನೆ.

ಶ್ರೀ ಸಿದ್ದರಾಮಯ್ಯ : ನನಗಿಂತ, ನಿಮಗಿಂತ ಅವರು ಬುದ್ಧಿವಂತರಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಅರವಿಂದ ಲಿಂಬಾವಳಿ : ನಿಶ್ಚಿತವಾಗಿಯೂ ಅವರು ಬುದ್ಧಿವಂತರಿದ್ದಾರೆ. ಆದರೆ ...

ಶ್ರೀ ಸಿದ್ದರಾಮಯ್ಯ : ಶ್ರೀಯುತ ಅನಂತಮೂರ್ತಿಯವರಾಗಲಿ ಅಥವಾ ಶ್ರೀಯುತ ಶಿವರುದ್ರಪ್ಪನವರಾಗಲಿ, ನನಗಿಂತ ಮತ್ತು ನಿಮಗಿಂತ intellectuals ಆಗಿದ್ದಾರೆ. ಅವರು ಒಳ್ಳೆಯ writer ಆಗಿದ್ದಾರೆ, ಸಾಹಿತಿಗಳಾಗಿದ್ದಾರೆಂದು ನಾನು ಅಂದುಕೊಂಡಿದ್ದೇನೆ. I don't know, whether you agree with me or not?

ಶ್ರೀ ಅರವಿಂದ ಲಿಂಬಾವಳಿ : ನಿಶ್ಚಿತವಾಗಿಯೂ ನನಗಿಂತ ತಾವು ಬುದ್ಧಿವಂತರು. ತಮಗಿಂತ ಅವರೆಲ್ಲಾ ಬುದ್ಧಿವಂತರು.

ಶ್ರೀ ಸಿದ್ದರಾಮಯ್ಯ : ಹಾಗಾದರೆ ಅದರಲ್ಲಿ dispute ಮಾಡುವುದು ಬೇಡ ಬಿಡಿ. Please, ಕುಳಿತುಕೊಳ್ಳಿ. ದಯವಿಟ್ಟು ನಾನು ಮಾತನಾಡುವುದಕ್ಕೆ ಬಿಡಿ. ನೀವು ಹೇಳಬೇಕಾದುದನ್ನು ಉತ್ತರ ಕೊಡುವಾಗ ಹೇಳಿ.

ಶ್ರೀ ಅರವಿಂದ ಲಿಂಬಾವಳಿ : ಒಂದು ನಿಮಿಷ ನಾನು ಮಾತನಾಡುತ್ತೇನೆ. ಅವರ ಕಡೆಯಲ್ಲಿ ಸಂಪೂರ್ಣವಾದಂತಹ ಮಾಹಿತಿಗಳಿಲ್ಲ. ಆ ಹಿನ್ನೆಲೆಯಲ್ಲಿ ನಾನು ಹೇಳುವುದೇನೆಂದರೆ, ನಾನು ಎಲ್ಲಾ ಮಾಹಿತಿಗಳನ್ನು ಅವರಿಗೆ ಒದಗಿಸುತ್ತೇನೆ. ತಾವೂ ಬನ್ನಿ, ಅವರೂ ಬರಲಿ. ನಾವೆಲ್ಲರೂ ಕುಳಿತೇ ಚರ್ಚೆ ಮಾಡೋಣ. ಸರ್ಕಾರದ ಕಡೆಯಿಂದ ತಪ್ಪಾಗಿದ್ದರೆ ಆಗ

ಹೇಳಿ. IGNCA ಮತ್ತು ಇತರ ಅನೇಕ ಪ್ರತಿಷ್ಠಾನಗಳ ಉದಾಹರಣೆಗಳಿವೆ. ಅದರ ಆಧಾರದ ಮೇಲೆ ಇದನ್ನೂ ಮಾಡಲಾಗಿದೆ. IGNCAಗೆ ರಾಜೀವ್ ಗಾಂಧಿಯವರೇ ಅಧ್ಯಕ್ಷರಾಗಿದ್ದರು. ಕೆಲವೊಂದು ತಪ್ಪು ಮಾಹಿತಿಗಳು ಅವರಿಗೆ ಹೋಗಿದೆ. ಅದನ್ನು ಸರಿಪಡಿಸಲಿಕ್ಕೆ ನಾನು ಸಿದ್ಧನಿದ್ದೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ಅವರ ಜೊತೆಗೆ ಚರ್ಚೆ ಮಾಡಿದ್ದೇನೆ. ನನಗೆ ಗೊತ್ತಿರುವ ಮಟ್ಟಿಗೆ I am also conviced. I am totally conviced. ವಿಜಯನಗರ ಪುನಃಶ್ಚೇತನ ಟ್ರಸ್ಟ್ ಎಂಬುದೊಂದು private trust ಆಗಿದೆ. Kannada University ಗೆ ಯಾವ ಉದ್ದೇಶದಿಂದ 700 ಎಕರೆ ಜಮೀನನ್ನು ಕೊಡಲಾಯಿತು? ಹಿಂದೆ ಅಲ್ಲಿ ಇದ್ದಂತಹ ಶ್ರೀಯುತ ಕಂಬಾರ್‌ರವರು, ಶ್ರೀಯುತ ಲಕ್ಕೇಗೌಡರು, ಶ್ರೀಯುತ ಕಲ್ಬುರ್ಗಿಯವರು, ಅವರೆಲ್ಲರೂ ಕೂಡ ಈಗ ಕೊಟ್ಟಿರುವ ಜಮೀನು ನಮ್ಮ activities ಗೆ ಸಾಲುವುದಿಲ್ಲ. ಪಕ್ಕದಲ್ಲಿ ಇರತಕ್ಕ ಇನ್ನಷ್ಟು ಜಮೀನನ್ನು ಕೊಡಿ ಎಂದು ಕೇಳಿದ್ದರು. ಕನ್ನಡ ಸಾಹಿತ್ಯ, ಕಲೆ, ಇತಿಹಾಸ ಬಹಳ vast ಆಗಿದೆ. ಆದ್ದರಿಂದ ಕನ್ನಡ ವಿಶ್ವವಿದ್ಯಾಲಯದ ಚಟುವಟಿಕೆಗಳಿಗೆ ಇನ್ನಷ್ಟು ಜಮೀನು ಕೊಡಿ ಎಂದು ಅವರು ಕೇಳಿದ್ದರು. ಅಲ್ಲದೆ ಅಲ್ಲಿ ಬಹಳಷ್ಟು ಅಧ್ಯಯನ ಪೀಠಗಳಿವೆ. ಎಲ್ಲಾ ಅಧ್ಯಯನ ಪೀಠಗಳನ್ನೂ ಸಹ ತೆಗೆದುಕೊಂಡು ಹೋಗಿ ಅಲ್ಲೇ ಹಾಕಿದ್ದೀರಿ. ಇಷ್ಟೆಲ್ಲಾ ಇರುವಾಗ, ನೀವು ಮಾಡಲೇಬೇಕು ಎನ್ನುವುದಾದರೆ, ಆ ಟ್ರಸ್ಟ್‌ಗೆ ಬೇರೆ ಕಡೆಗೆ ಜಾಗ ಕೊಡಿ. Why in the University only? This is not the part and parcel of university work. ಅದು Kannada University ಕೆಲಸವಲ್ಲ. ಇದೊಂದು private trust. ಅದರಲ್ಲಿ Vice-Chancellor ಇದ್ದಾರೆಯೇ? Education Minister ಆದ ನೀವು ಅದರ ಅಧ್ಯಕ್ಷರಾಗಿದ್ದೀರಾ?

ಶ್ರೀ ಅರವಿಂದ ಲಿಂಬಾವಳಿ : ಒಂದು ನಿಮಿಷ ತಾವು ಯೀಲ್ಡ್ ಆಗುವುದಾದರೆ ನಾನು ಹೇಳುತ್ತೇನೆ. ಇದೊಂದು private trust ಅಲ್ಲ. ತಪ್ಪು ಮಾಹಿತಿ ಸದನದ ದಾಖಲೆಗೆ ಹೋಗಬಾರದು ಎಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಅದು Government trust ಆಗಿದೆಯೇ?

ಶ್ರೀ ಅರವಿಂದ ಲಿಂಬಾವಳಿ : ಹೌದು, ಇದು Government trust ಆಗಿದೆ.

ಶ್ರೀ ಸಿದ್ದರಾಮಯ್ಯ : How is it a Government Trust ? ಎನ್ನುವುದನ್ನು ನೀವು ಉತ್ತರ ಕೊಡುವಾಗ ಹೇಳಿ.

ಶ್ರೀ ಅರವಿಂದ ಲಿಂಬಾವಳಿ : ಒಂದೇ ನಿಮಿಷ ನೀವು ಯೀಲ್ಡ್ ಆಗಿ. ನಾನು ಇದನ್ನು clarify ಮಾಡಿಬಿಡುತ್ತೇನೆ. ಈ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ, ನಾನು ಉತ್ತರ ಕೊಡುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಇದರ ಬಗ್ಗೆ ನೀವೇ ಕೊಡಬಹುದು.

ಅಧ್ಯಕ್ಷರು : ಒಂದು ನಿಮಿಷ, ಅವರು clarification ಕೊಡುತ್ತಾರಂತೆ.

ಶ್ರೀ ಸಿದ್ದರಾಮಯ್ಯ : ನೋಡಿ, ನೀವು ಅವರ ಪರ ಇದ್ದೀರಿ.

ಶ್ರೀ ಅರವಿಂದ ಲಿಂಬಾವಳಿ : ಸರ್ಕಾರದ ಆದೇಶದ ಪ್ರಕಾರವೇ ವಿಜಯನಗರ ಪುನಃಶ್ಚೇತನ ಪ್ರತಿಷ್ಠಾನ ಟ್ರಸ್ಟ್ ಸ್ಥಾಪನೆಯಾಗಿದೆ. ಸರ್ಕಾರದ ಆದೇಶ ಸಂಖ್ಯೆ: 667/2009. ಇದರಲ್ಲಿ ಮೂರು ಜನ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿದ್ದಾರೆ, ಉನ್ನತ ಶಿಕ್ಷಣ ಇಲಾಖೆ ; ಮತ್ತು ಕಾರ್ಯದರ್ಶಿ ಅಥವಾ ಪ್ರಧಾನ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತ ಇಲಾಖೆ ; ಮಾನ್ಯ ವಿಧಾನ ಸಭಾ ಸದಸ್ಯರಾದ, ವಿಜಯನಗರ by position ; ಮಾನ್ಯ ವಿಧಾನ ಸಭಾ ಸದಸ್ಯರು, ಗಂಗಾವತಿ; ಮಾನ್ಯ ವಿಧಾನ ಸಭಾ ಸದಸ್ಯರು, ಕಂಪ್ಲಿ ಇದರಲ್ಲಿದ್ದಾರೆ. ಇದರ ಅಧ್ಯಕ್ಷರು ಮತ್ತು Member-Secretary ಯನ್ನು ಸರ್ಕಾರ ನೇಮಕ ಮಾಡುತ್ತದೆ. ಇವರು ಯಾವುದೋ ಒಂದು private trustಗೆ ಇದರ responsibility ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಇದು ಹಾಗಲ್ಲ. ಸಮಾಜದ ಬೇರೆ ಬೇರೆ ಭಾಗದಿಂದ ಬಂದಿರತಕ್ಕ ಸಾರ್ವಜನಿಕರನ್ನು ಟ್ರಸ್ಟ್‌ನಲ್ಲಿ ನೇಮಿಸಲಾಗಿದೆ. ಯಾವ ರೀತಿಯಲ್ಲಿ IGNCA ನಲ್ಲಿ ಹಾಕಿದ್ದಾರೋ, ಹಾಗೆಯೇ ಇಲ್ಲೂ ಮಾಡಿದ್ದೇವೆ. ಶ್ರೀಯುತ ಅನಂತಮೂರ್ತಿಯವರು IGNCA ನಲ್ಲಿ trustee ಆಗಿದ್ದಾರೆ. IGNCA ಬಗ್ಗೆ ಮಾನ್ಯ ಕೃಷ್ಣ ಬೈರೇಗೌಡರಿಗೆ ಚೆನ್ನಾಗಿ ಗೊತ್ತಿದೆ. ಶ್ರೀಮತಿ ಸೋನಿಯಾ

ಗಾಂಧಿಯವರೇ ಹಿಂದೆ ಇದರ ಅಧ್ಯಕ್ಷರಾಗಿದ್ದರು. IGNCA ಚೆನ್ನಾಗಿ ಕೆಲಸ ಮಾಡುತ್ತಿಲ್ಲವೇ? ಅದು ಚೆನ್ನಾಗಿ ಕೆಲಸ ಮಾಡುತ್ತಿದೆ. ನಾನೂ ಆ ಮಾತನ್ನು ಹೇಳುತ್ತೇನೆ. IGNCA Government of India ದ autonomous trust ಆಗಿದೆ. ಅದರಲ್ಲಿ ಶ್ರೀಯುತ ಅನಂತಮೂರ್ತಿಯವರು ಇದ್ದಾರೆ, ಶ್ರೀಯುತ ಶೆಟ್ಟರ್ ರವರೂ ಸಹ ಇದ್ದಾರೆ. ಅದೇ ಟ್ರಸ್ಟ್‌ಗೆ ನಾವು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ 10 ಎಕರೆ ಜಾಗವನ್ನು ಕೊಟ್ಟಿದ್ದೇವೆ. ಬೆಂಗಳೂರಿನ ಬೆಲೆ ಜಾಸ್ತಿಯೋ, ಹಂಪಿಯಲ್ಲಿರುವಂತಹ ಭೂಮಿಯ ಬೆಲೆ ಜಾಸ್ತಿಯೋ? ಟ್ರಸ್ಟ್‌ಗೆ ನಾವು ಹಣ ಕೊಡುತ್ತೇನೆ. They are accountable to the Government of Karnataka. The President and Member-Secretary will be nominated by the State Government. ಹೀಗಿರುವಾಗ ಇದನ್ನೊಂದು ಖಾಸಗಿ ಟ್ರಸ್ಟ್ ಎಂದು ಹೇಗೆ ಹೇಳುತ್ತೀರೋ, ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ನಾವೂ ಅಲ್ಲಿಯೇ ಪಕ್ಕದಲ್ಲಿ ಇದ್ದೇವೆ. ನಮ್ಮನ್ನು ಅದರ ಸದಸ್ಯರನ್ನಾಗಿ ಮಾಡಿಕೊಂಡಿಲ್ಲ.

ಶ್ರೀ ಸಿದ್ದರಾಮಯ್ಯ : ಅದು Government trust ಅಲ್ಲವೇ? ಅದಕ್ಕೆ BJP ಯವರನ್ನು ಮತ್ತು RSS ನವರನ್ನು ಅದಕ್ಕೆ ಹಾಕಿಕೊಂಡಿದ್ದಾರೆ. ನೀವೇನು RSS ನವರೂ ಅಲ್ಲ, BJP ಯವರೂ ಅಲ್ಲ.

ಅಧ್ಯಕ್ಷರು : MLA by position ಅದರ ಸದಸ್ಯರಾಗಿರುತ್ತಾರೆಂದು ಮಾನ್ಯ ಸಚಿವರು ಹೇಳಿದರು. ಇವತ್ತು ಆ constituency ಯಲ್ಲಿ ಒಬ್ಬರು ಎಂ.ಎಲ್.ಎ. ಇರಬಹುದು, ನಾಳೆ ಬೇರೆಯವರು ಬರಬಹುದು.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಒಂದೇ ಪಕ್ಷದವರನ್ನು ಟ್ರಸ್ಟ್‌ಗೆ ಹಾಕಿಕೊಂಡಿದ್ದಾರೆ.

ಶ್ರೀ ಸಿದ್ದರಾಮಯ್ಯ : With due respect to Sri Ananth Kumar, ಅವರ ಮಿಸೆಸ್ ಶ್ರೀಮತಿ ತೇಜಸ್ವಿನಿ ಕೂಡ 18 ಜನ ಟ್ರಸ್ಟ್ ಸದಸ್ಯರಲ್ಲಿ ಒಬ್ಬರಾಗಿದ್ದಾರೆ. ಮಾನ್ಯ ಲಿಂಬಾವಳಿಯವರೆ, ನೀವು ಮೊಂಡಾಟಕ್ಕೆ ಬೀಳಬೇಡಿ, ಪ್ರತಿಷ್ಠೆಗೆ ಬೀಳಬೇಡಿ. ನೀವು ಟ್ರಸ್ಟ್ ಮೂಲಕ ಏನನ್ನು ಮಾಡಬೇಕೆಂದಿದ್ದೀರೋ, ಆ ಕೆಲಸವನ್ನು ಯೂನಿವರ್ಸಿಟಿಯವರಿಗೇ ವಹಿಸಿ.

ಅವರಿಗೆ ಪಕ್ಕದಲ್ಲಿರುವ ಜಾಗವನ್ನೂ ಸಹ ಕೊಡಿಸಿ. Please don't interfere with the activities of Kannada University. ಇಲ್ಲದಿದ್ದರೆ, ಈ ರಾಜ್ಯದಲ್ಲಿ ಒಂದು ದೊಡ್ಡ ಹೋರಾಟ / ಚಳುವಳಿ ಪ್ರಾರಂಭವಾಗುತ್ತದೆ. ಇದರಿಂದ ನಿಮಗೂ ಕಷ್ಟವಾಗುತ್ತದೆ. ನಾವೂ ಕೂಡ ಇದರ ಬಗ್ಗೆ ಸೆಪರೇಟಾಗಿ ನೋಟೀಸ್ ಕೊಟ್ಟು, ಈ ವಿಷಯವನ್ನು ಪ್ರಸ್ತಾಪಿಸುತ್ತೇವೆ. ಇದರ ಹಿನ್ನೆಲೆ ಸಂಪೂರ್ಣವಾಗಿ ಆಗ ಚರ್ಚೆ ಮಾಡೋಣ. ಈಗ ಸುಮ್ಮನೆ ಪ್ರಸ್ತಾವಿಕವಾಗಿ ಕೆಲವೊಂದು ಮಾತುಗಳನ್ನು ಹೇಳಿದ್ದೇನೆ. ಇದರ ಬಗ್ಗೆ ನಂತರ ಸಂಪೂರ್ಣವಾಗಿ ಚರ್ಚೆ ಮಾಡೋಣ. We will not allow the Government.

ಶ್ರೀ ಅರವಿಂದ ಲಿಂಬಾವಳಿ : ಆಯಿತು, debate ಮಾಡೋಣ. ನಾನು ಈ ಬಗ್ಗೆ ನಿಮ್ಮನ್ನು convince ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : ನೋಡೋಣ. Whether I am goint to convince you or you are going to convince me ಎಂಬುದನ್ನು ನೋಡೋಣ. 80 ಎಕರೆ ಜಾಗವನ್ನು ಆ ಟ್ರಸ್ಟ್‌ಗೆ ಕೊಡಲಿಕ್ಕೆ ಹೊರಡಿಸಿರುವ ಆಜ್ಞೆಯನ್ನು ರದ್ದು ಮಾಡಬೇಕೆಂದು ಕೋರುತ್ತೇನೆ. ಆ ಜಾಗವನ್ನು ವಾಪಸ್ ಕೊಟ್ಟು, ಅದರ ಪಕ್ಕದಲ್ಲಿ ಇರತಕ್ಕ ಜಮೀನನ್ನೂ ಸಹ ವಿಶ್ವವಿದ್ಯಾಲಯಕ್ಕೆ ಕೊಡಬೇಕು. ಮಾನ್ಯ ಶ್ರೀರಾಮುಲುರವರೆ, ಉಳಿದ ಜಾಗವನ್ನೂ ವಿಶ್ವವಿದ್ಯಾಲಯಕ್ಕೆ ಕೊಡಿಸಿಬಿಡಿ. ಎಲ್ಲದರಲ್ಲೂ ನಿಮ್ಮ ಮಾತು ನಡೆಯುತ್ತದೆ, ಇದೊಂದರಲ್ಲಿ ನಿಮ್ಮ ಮಾತು ನಡೆಯುವುದಿಲ್ಲವೇ? ನೀವು ಹೇಳಿದಂತೆಯೇ ಎಲ್ಲವೂ ನಡೆಯುತ್ತದೆ. ಮಾನ್ಯ ಯಡಿಯೂರಪ್ಪನವರಿಗೆ ಹೇಳಿ ಇದೊಂದು ಮಾಡಿಸಿಬಿಡಿ. ಆ ಆದೇಶವನ್ನು ರದ್ದು ಮಾಡಿಸಿಬಿಡಿ. ಇಲ್ಲದಿದ್ದರೆ ಜನ ಸುಮ್ಮನೆ ನಿಮಗೆ ಶಾಪ ಹಾಕುತ್ತಾರೆ! ಇದನ್ನು ಕೈಬಿಡುವುದು ಒಳ್ಳೆಯದು. ಇಲ್ಲದಿದ್ದರೆ ದೊಡ್ಡ ತಾಪತ್ರಯವಾಗುತ್ತದೆ. ಮಾನ್ಯ ಅಧ್ಯಕ್ಷರೆ, ಮಾನ್ಯ Governor's address ಮೂಲಕ ಏನು ಮಾತುಗಳನ್ನು ಇವರು ಮಾನ್ಯ ರಾಜ್ಯಪಾಲರಿಂದ ಹೇಳಿಸಿದ್ದಾರೋ, ಇವುಗಳು ಸರಿಯಿಲ್ಲ. ಅದು ಹಣಕಾಸಿನ ಪರಿಸ್ಥಿತಿ ಬಗ್ಗೆ ಇರಬಹುದು, ನೆರೆ ಪರಿಹಾರದ ಬಗ್ಗೆ ಇರಬಹುದು,

ವಿದ್ಯುಚ್ಛಕ್ತಿ ಕೊಡತಕ್ಕದ್ದರ ಬಗ್ಗೆ ಇರಬಹುದು, ಈ ರಾಜ್ಯದಲ್ಲಿ ಕೈಗಾರಿಕೆಗಳು ಬರಲಿಕ್ಕೆ ಒಳ್ಳೆ ವಾತಾವರಣ, industry-friendly atmosphere create ಮಾಡತಕ್ಕದ್ದು ಇರಬಹುದು, ಯಾವುದೇ ಇರಲಿ, ಎಲ್ಲದರಲ್ಲೂ ರಾಜ್ಯದ ಅಭಿವೃದ್ಧಿ ಕೆಲಸ ಕುಂಠಿತವಾಗಿದೆ. ಕೋಟ್ಯಂತರ ರೂಪಾಯಿಗಳ ಬಿಲ್‌ಗಳು ಬಾಕಿ ಉಳಿದಿವೆ.

1.00 ಪಿ.ಎಂ.

ಇವತ್ತು ಪ್ಲಾನಿನ ಎಲ್ಲಾ details ಅನ್ನು ಇಲ್ಲಿ ಓದುವುದಕ್ಕೆ ಹೋಗುವುದಿಲ್ಲ, ಯಾವ್ಯಾವ ಇಲಾಖೆನಲ್ಲಿ plan ನಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದಾರೆಂದು ನೋಡಬೇಕು, Not even 40% Agriculture ನಲ್ಲಿ ಇಲ್ಲ. ಪವರ್‌ನಲ್ಲಿ ಇಲ್ಲ, ನೀರಾವರಿನಲ್ಲಿಲ್ಲ, ಗ್ರಾಮೀಣಾಭಿವೃದ್ಧಿಯಲ್ಲಿಲ್ಲ, not even 40% ಎಲ್ಲೆಲ್ಲಿ major ಹಣ ಖರ್ಚು ಮಾಡಬೇಕಾಗಿದೆ ಅಲ್ಲೆಲ್ಲಾ ಕೂಡ not even 40%. ನಮ್ಮ ಸಮಾಜ ಕಲ್ಯಾಣ ಸಚಿವರಾದ ಶ್ರೀ ಸುಧಾಕರ್‌ರವರು ಇಲ್ಲಿ ಇಲ್ಲ, ನನಗೆ ಬಜೆಟ್‌ನಲ್ಲಿ 950 ಕೋಟಿ ರೂ. ಇಟ್ಟುಬಿಟ್ಟು 400 ಕೋಟಿ ರೂ. ಅಷ್ಟೆ ಕೊಟ್ಟಿದ್ದಾರೆ, ಹಣ ಕೊಟ್ಟಿಲ್ಲವೆಂದು ನಾನೇನು ಮಾಡಲಿ ಎಂದು ಆ ದಲಿತ ಸಂಘಟನೆಗಳೆಲ್ಲಾ ಅವರ ಹತ್ತಿರ ಹೋದಾಗ ಅಳುತ್ತಾ ಕುಳಿತಿದ್ದರು. Scholarships ಕೊಟ್ಟಿಲ್ಲ, ಧರಣಿ ಎಲ್ಲಾ ನಡೆಯುತ್ತಿದೆ, ಅದನ್ನು ಕೊಡುವುದಕ್ಕೆ ನಿಮ್ಮಲ್ಲಿ ಹಣವಿಲ್ಲವೆಂದರೆ, ನೀವು ಅಧಿಕಾರದಲ್ಲಿ ಏತಕ್ಕೆ ಇರಬೇಕು, ಯಾವ ಪುರುಷಾರ್ಥಕ್ಕಾಗಿ ಇರಬೇಕು, ಏನು ಮಾಡುವುದಕ್ಕೆ ಇರಬೇಕು ಹೇಳಿ ನೋಡೋಣ, you have failed in all fronts, you have failed to tackle. ಆಮೇಲೆ ಉದ್ಯೋಗಗಳಿಲ್ಲ, ಆರೋಗ್ಯ ಇಲಾಖೆಯಲ್ಲಿ ಅಡುಗೆಯವರಿಲ್ಲ, ಮಾಸ್ಟರ್ಸ್ ಇಲ್ಲ, ಕಾಗೇರಿಯವರೆ, ಪಾಪ ಆ grant-in-aid school ಗಳಲ್ಲಿ 8–10 ತಿಂಗಳು ಸಂಬಳವನ್ನು ಕೊಟ್ಟಿಲ್ಲವಂತಲ್ಲ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅತಿವೃಷ್ಟಿಯ ಹಿನ್ನೆಲೆಯಲ್ಲಿ ಆರ್ಥಿಕ ಮಿತವ್ಯಯವಿರುವುದರಿಂದ ಕೊಡಲಾಗಿಲ್ಲ.

ಶ್ರೀ ಸಿದ್ದರಾಮಯ್ಯ : ಅತಿವೃಷ್ಟಿಗೆ ಒಂದು ರೂಪಾಯಿಯನ್ನು ಖರ್ಚೇ ಮಾಡಿಲ್ಲ ಮಿತವ್ಯಯವೇತಕ್ಕೆ? ಆಮೇಲೆ ಇವರು austerity measures announce ಮಾಡುವುದು, ಯಡಿಯೂರಪ್ಪನವರು helicopter ನಲ್ಲಿ ಸುತ್ತಿದ್ದೆ ಸುತ್ತಿದ್ದು, 40–50 ಕೋಟಿ ರೂ. ವೆಚ್ಚ, ನಿಮ್ಮ advertisement ಬದಲು ಅವರಿಗೆ ಸಂಬಳ ಕೊಡಬಹುದಾಗಿತ್ತಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಆರ್ಥಿಕ ಮಿತವ್ಯಯವೆನ್ನುವ ಕಾರಣಕ್ಕೋಸ್ಕರಕ್ಕಾಗಿ, ಅತಿವೃಷ್ಟಿ ಇರುವುದರಿಂದಾಗಿ ನಾವು ಅನುದಾನಕ್ಕೆ ಒಳಪಡಿಸುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದೇವೆ, ಅದನ್ನು ಮತ್ತೆ ಪ್ರಾರಂಭಿಸುತ್ತೇವೆ.

ಶ್ರೀ ಸಿದ್ದರಾಮಯ್ಯ : ಇನ್ನು ಜನಸ್ಪಂದನ ಕಾರ್ಯಕ್ರಮದ ಬಗ್ಗೆ, ನಮಗೆ ಇಷ್ಟು ಲಕ್ಷ ಅರ್ಜಿಗಳು ಬಂದಿದ್ದು, ಇಷ್ಟು ಲಕ್ಷ ಅರ್ಜಿಗಳನ್ನು dispose ಮಾಡಿದ್ದೇವೆಂದು ಹೇಳುತ್ತಿರುತ್ತಾರೆ, ಅದರಲ್ಲಿ 90% ಮನೆ ಕೊಡಿ, ಸೈಟ್ ಕೊಡಿ ಎಂದು ಬರುತ್ತವೆ, ಯಾರಿಗಾದರೂ ಮನೆ ಕೊಡುವುದಕ್ಕೆ ಇವರಿಗೆ ಅಧಿಕಾರವಿದೆಯೇ? ಅವರು ಅರ್ಜಿಗಳನ್ನು ಏನು ಮಾಡುತ್ತಾರೆ? Application received, disposed off, ಮನೆಯೂ ಕೊಟ್ಟಿಲ್ಲ, ಜಾಗನೂ ಕೊಟ್ಟಿಲ್ಲ. ನಿವೇಶನ ಕೊಡಿ ಎಂದು ಬರುತ್ತವೆ, ration card ಕೊಡಿ,SC/ST loan ಕೊಡಿ ಎಂದು ಬರುತ್ತವೆ, ಅವು ಬಿಟ್ಟು ಜನಸ್ಪಂದನ ಕಾರ್ಯಕ್ರಮದಲ್ಲಿ ಇನ್ನೇನಾದರು ಬರುತ್ತವೆಯೇ? ನಾವು ಸ್ಪಂದನ ಮಾಡುತ್ತಿದ್ದೇವೆ ಎಂದು ಹೇಳುತ್ತಾರೆ, ಏನು ಸ್ಪಂದನ? Light ಕೊಡುವುದು ಸ್ಪಂದನ, ಬಡವರಿಗೆ ಅಕ್ಕಿ ಕೊಡುವುದು ಸ್ಪಂದನ, ಪರಿಹಾರ ಕೊಡುವುದು ಸ್ಪಂದನ, ಮನೆ ಎಲ್ಲಿ ಕೊಟ್ಟಿದ್ದಾರೆ? 80,000 sites ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ, ಈ ವರ್ಷ ಎಲ್ಲಿ ಕೊಟ್ಟಿದ್ದೀರಿ ಹೇಳಿ ನೋಡೋಣ, Not a single site is distributed. ಇವರು ಅಧಿಕಾರದಲ್ಲಿ ಕುಳಿತುಕೊಳ್ಳುವಂಥ ನೈತಿಕ ಹಕ್ಕನ್ನು ಕಳೆದುಕೊಂಡಿದ್ದಾರೆ, ಇವರು ಅಧಿಕಾರಕ್ಕೆ ಬಂದ ಮೇಲೆ ಜನರಿಗೆ ದೊಡ್ಡ ಟೋಪಿ ಹಾಕಿದ್ದಾರೆ, ಬರೀ ಭರವಸೆಗಳು. ಯಡಿಯೂರಪ್ಪನವರು ಎಲ್ಲಿಗೆ ಹೋದರೂ, ಯಾವ ವೇದಿಕೆಯಲ್ಲಾದರೂ ಕೋಟಿಗಟ್ಟಲೆ ಭರವಸೆಗಳು,

ದುಡ್ಡು ಮಾತ್ರವಿಲ್ಲ. ಆ ದಲಿತರಲ್ಲಿ ಒಬ್ಬರಿಗೆ ಒಂದು backlog ಹುದ್ದೆ ಕೊಟ್ಟಿಲ್ಲ, ಎಲ್ಲಾ ಏನಾಗಿದೆ ಎಂದರೆ, ಇಲ್ಲಿ ಒಂದು ಜಾತಿಯ ಜನರಿಗೆ ಅನುಕೂಲವಾಗುತ್ತದೆ ಎಂದು ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಎಲ್ಲಾ ಜನರು ಇವತ್ತು ಒಳಗೆ ಒಂದು ರೀತಿ ಬೂದಿ ಮುಚ್ಚಿದ ಕೆಂಡದ ರೀತಿಯಲ್ಲಿದ್ದಾರೆ, ಅನ್ಯಾಯ ಆಗಿದೆ. There is no social justice served ಈ ತರಹವಿರುವ ಸರ್ಕಾರ, Governor's address ನಲ್ಲಿ ಏನು ಹೇಳಿಸಿದ್ದಾರೆ? ಇದನ್ನು ನಾನು ತೀವ್ರವಾಗಿ ವಿರೋಧ ಮಾಡಿ, ಈ ರಾಜ್ಯಕ್ಕೆ ಏನಾದರೂ ಒಳ್ಳೆಯದಾಗಬೇಕಾದರೆ, ನೀವು ರಾಜೀನಾಮೆ ಕೊಟ್ಟು ಹೋಗುವುದು ಒಳ್ಳೆಯದು, ನೀವು ರಾಜೀನಾಮೆ ಕೊಡಬೇಕು, You have no moral right to continue in the power ಎಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ನಿಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಧನ್ಯವಾದಗಳು.

ಶ್ರೀ ಕೆ.ಎಂ.ಶಿವಲಿಂಗೇಗೌಡ [ಅರಸೀಕೆರೆ] : ಮಾನ್ಯ ಅಧ್ಯಕ್ಷರೆ, ಈಗ ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆಯಲ್ಲಿ ನಮ್ಮ ವಿರೋಧ ಪಕ್ಷದ ನಾಯಕರು ಎಲ್ಲಾ ಸವಿಸ್ತಾರವಾಗಿ ಮಾತನಾಡಿದ್ದಾರೆ. ಈಗ ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ರಾಜ್ಯಪಾಲರ ಭಾಷಣದಲ್ಲಿ ಅವರು ಯಾವ ಸಾಧನೆಯನ್ನು ಹೇಳಿಸಿಲ್ಲ, ಎಲ್ಲಾ ಬರೀ ಸುಳ್ಳನ್ನೇ ಹೇಳಿಸಿದ್ದಾರೆ. ಆದುದರಿಂದ ಯಾವುದು ಮಾತನಾಡುವುದಕ್ಕೆ ಹೋದರೂ ಎರಡೆರಡು ಗಂಟೆ ಬೇಕು, 6 ಗಂಟೆಗೆ ಉತ್ತರವೆಂದು ಕಾಲಮಿತಿಯನ್ನು ಹೇಳಿದ್ದೀರಿ, ನಾವು ಸೀಮಿತವಾಗಿ ಕೆಲವೇ ಕೆಲವು ವಿಚಾರಗಳನ್ನು ಈ ಸಂದರ್ಭದಲ್ಲಿ ಪ್ರಸ್ತಾಪಿಸುವುದಕ್ಕೆ ಬಯಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು 108 ಆರೋಗ್ಯ ಕವಚದ ಬಗ್ಗೆ ಹೇಳಿದರು, ನಾನು ಪೂರ್ವಗ್ರಹಿತನಾಗಿ ಅದರ ಹಿಂದೆ ಬಿದ್ದೆ, Estimate Committee ಯಲ್ಲಿ ಅದು submit ಆಯಿತು. ಆವಾಗ ತಂದಿರುವ ಈ ಆರೋಗ್ಯ ಕವಚವೆನ್ನುವುದು ಒಳ್ಳೆಯ ಯೋಜನೆ, ಆದರೆ ಚಿನ್ನದ ಸೂಜಿಯಿಂದ ಕಣ್ಣಿಗೆ ಚುಚ್ಚಿಕೊಂಡರೆ ರಕ್ತವೇ ಬರುವುದು. ರಾಜ್ಯ ಸರ್ಕಾರ ಅದರ

ನಿರ್ವಹಣೆಯಲ್ಲಿ ತಪ್ಪಿದೆ ಎಂದು ಬಜೆಟ್ ಭಾಷಣದ ಮೇಲಿನ ಚರ್ಚೆಯಲ್ಲಿ ಈ ಸದನದಲ್ಲಿ ನಿಂತುಕೊಂಡು ನಾನು challenge ಆಗಿ ಹೇಳಿದೆ. ಅವರಿಗೆ ನೀವೇನು ಕೊಡುತ್ತಿದ್ದೀರಿ, ಅದರಲ್ಲಿ ಅರ್ಧಭಾಗ ಹಣ ಕೊಡಿ, ನಾನು ಇಡೀ ಸಂಸ್ಥೆಯನ್ನು ನಡೆಸಿಕೊಂಡು, ನಿಮ್ಮ ಕರ್ನಾಟಕ ರಾಜ್ಯದ ಬೊಕ್ಕಸಕ್ಕೆ ಹಣವನ್ನು ಉಳಿಸುತ್ತೇನೆ ಎಂದು ನಾನು challenge ಆಗಿ ಹೇಳಿದೆ, ಕೇಳಲಿಲ್ಲ. ಆದರೆ ಮಾರನೆ ಬೆಳಿಗ್ಗೆ ನಮಗೆ ಸಿಕ್ಕಿದ ಪ್ರಸಾದ, ಮಾನ್ಯ ಆರೋಗ್ಯ ಸಚಿವರು ಬಳ್ಳಾರಿಯಲ್ಲಿ, ಕೆಲವು ವಿರೋಧ ಪಕ್ಷದ ನಾಯಕರು ನಾಯಿ ಬೊಗಳಿದಂತೆ ಬೊಗಳುತ್ತಾರೆ ಬಿಡಿ ಎಂದು ಹೇಳಿದ್ದು ಪತ್ರಿಕೆಯಲ್ಲಿ ಬಂತು, ಓದಿ, ಇದರ ಹಣೆಬರಹ ಇಷ್ಟೆ ಎಂದು ನಾನು ಸುಮ್ಮನಾದೆ. ಆದರೆ ಇವತ್ತು ಆರೋಗ್ಯ ಕವಚದಲ್ಲಿ 90% ದುಡ್ಡನ್ನು ಕೊಟ್ಟಿದ್ದಾರೆ, ನೀವು ಪ್ರಧಾನ ಮಂತ್ರಿಗಳನ್ನು ಹಾಕಲಿಲ್ಲ, ಅವರನ್ನು ಹಾಕಲಿಲ್ಲ, ಇವರನ್ನು ಹಾಕಲಿಲ್ಲ ಎಂದು ಹೇಳುತ್ತೀರಿ, ಸಹಭಾಗಿತ್ವವೆಂದು ಆ ಕಂಪನಿಯ ಎಷ್ಟೆಷ್ಟು ದೊಡ್ಡ photo ಮೊದಲು ಸತ್ಯಂ ಕಂಪನಿಯಲ್ಲಿತ್ತು ಈಗ ಅದ್ಯಾರೋ GKVKಯವರಿಗೆ ಕೊಟ್ಟಿದ್ದಾರಂತೆ. ಈ ವಿಚಾರದ ಬಗ್ಗೆ ನಾವೇನಾದರು ಸವಿಸ್ತಾರವಾಗಿ ಮಾತನಾಡುವುದಕ್ಕೆ ಹೋದರೆ, MOUನಲ್ಲಿ ಅದಕ್ಕೆ ಹಗ್ಗ ಮೂಗುದಾರವೇನಿಲ್ಲ, ಯಾರೂ ಕೇಳುವಂತಿಲ್ಲ. 517 ಆಂಬ್ಯುಲೆನ್ಸ್ ಕೊಂಡುಕೊಳ್ಳುವುದಕ್ಕೆ ಕರ್ನಾಟಕ ಸರ್ಕಾರದ NRHMನ ಹಣ, ಮೊದಲೇ 40 ಕೋಟಿ ರೂಪಾಯಿಗಳನ್ನು advance ಆಗಿ ಆ ಸಂಸ್ಥೆಗೆ ಕೊಟ್ಟಿದ್ದಾರೆ. ಅದರ ಜೊತೆಗೆ ಇವತ್ತು ಅವರನ್ನು ಲೆಕ್ಕ ಕೇಳುವಂತಿಲ್ಲ, ಆ 40 ಕೋಟಿ ರೂ. ತೀರಿದ ಮೇಲೆ ಒಂದು utilization certificate ತಂದು ಅಲ್ಲಿ ಕೊಟ್ಟುಬಿಟ್ಟು ಹಣ draw ಮಾಡುವುದಷ್ಟೆ ಇಲ್ಲಿ ಕೆಲಸ. ಆಮೇಲೆ ಅಲ್ಲಿ ಅವರೇನು ಓಡಿಸುತ್ತಾರೆ trip, ಆ tripಗಳನ್ನು ಸರ್ಕಾರಿ ಅಧಿಕಾರಿಗಳು, ವೈದ್ಯರು ಪ್ರಶ್ನೆ ಮಾಡುವಂತಿಲ್ಲ. ನಮ್ಮ ಹಾಸನದಲ್ಲಿ, ಸಾಮಾನ್ಯವಾಗಿ ಅಪಘಾತವಾದಾಗಲೇ 108 ಉಪಯೋಗಿಸುವುದು, ಅಪಘಾತವಾದಾಗ ಅವರು ತೆಗೆದುಕೊಂಡು ಹೋಗುವುದು ಖಾಸಗಿ Nursing Homeಗೆ. ಅಲ್ಲಿ treatment ಆದ ಮೇಲೆ ರೂ.70,000 ಬಿಲ್ ಆದರೆ ಅವರ ಮನೆಮಠ

ಹರಾಜ್ ಮಾಡಿ ತಂದು ಕೊಡಬೇಕು. ಏತಕ್ಕೆ ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಾರೆಂದರೆ, ಅವರು ಅವರನ್ನು commissionಗೆ book ಮಾಡಿಕೊಂಡಿರುತ್ತಾರಂತೆ ಇದು ಅಲ್ಲಿರುವ ಸುದ್ದಿ. ಬಡವರಿಗೆ ಕೊಡುವ ಯೋಜನೆ ಒಳ್ಳೆಯದು, ಆದರೆ ಇದರ ಕಾರ್ಯನಿರ್ವಹಣೆ ಇದೆಯಲ್ಲಾ, ಅವರನ್ನು ಸಹಭಾಗಿತ್ವವೆಂದು ಕರೆಯುತ್ತಾರೆ, ಹೇಗೆ ಸಹಭಾಗಿತ್ವವೆಂದು ಕರೆಯುತ್ತೀರಿ, ಅವರ service ಅನ್ನು ಸಹಭಾಗಿತ್ವವೆಂದು ಕರೆಯುವುದಕ್ಕಾಗುತ್ತದೆಯೇ? ಖಾಸಗಿ ಸಹಭಾಗಿತ್ವವೆಂದರೆ, ಅದಕ್ಕೆ ಅವರು ಕೂಡ ಹಣ ಕೊಟ್ಟಿರಬೇಕು. ಒಂದು ಅಂಗಡಿಗೆ ಹೋದರೆ, ಇನ್ನೂರು ರೂಪಾಯಿ ಹೇಳಿ, 180ಕ್ಕೆ ಕೊಡುತ್ತೇನೆ 20% discount ಕೊಡುತ್ತೇನೆಂದು ಹೇಳುವಂತೆ, ಅವರ service charge ನಲ್ಲಿ 5% discount ಕೊಡುತ್ತಾರಂತೆ, ಅದಕ್ಕೆ ಇದನ್ನು ಸಹಭಾಗಿತ್ವವೆನ್ನುವುದಾದರೆ ಇದು ಈ ದೇಶದಲ್ಲಿ ಎಷ್ಟರಮಟ್ಟಿಗೆ ಒಳ್ಳೆಯದು, ಈ ದೇಶದ ಬೊಕ್ಕಸಕ್ಕೆ ಎಷ್ಟು ನಷ್ಟವುಂಟಾಗುತ್ತದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಎಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡದೆ ನೇರವಾಗಿ, ನಿನ್ನೆ ದಿವಸ ವಿದ್ಯುತ್ ಅಭಾವದ ಬಗ್ಗೆ ಏನು ಚರ್ಚೆ ನಡೆಯಿತು, ಆ ಚರ್ಚೆ ನಡೆದಂಥ ಸಂದರ್ಭದಲ್ಲಿ, ಸನ್ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ಉತ್ತರವನ್ನು ಕೊಡುವ ಸಂದರ್ಭದಲ್ಲಿ, ಈ ಸದನವನ್ನು ಯಾವ ರೀತಿ mis–lead ಮಾಡಿದ್ದಾರೆ, ಏನು ತಪ್ಪು ಹೇಳಿಕೆ ನೀಡಿದ್ದಾರೆನ್ನುವ ವಿಚಾರವನ್ನು ಈ ಸದನದ ಗಮನಕ್ಕೆ ತರುವುದಕ್ಕೆ ನಾನು ಬಯಸುತ್ತೇನೆ. ಇವತ್ತು ಕಲ್ಲಿದ್ದಲನ್ನು washing ಮಾಡುವ ವಿಚಾರದಲ್ಲಿ ನೇರವಾಗಿ ಮಾನ್ಯ ಮುಖ್ಯಮಂತ್ರಿಗಳು, ಆಪಾದನೆ ಮಾಡಿದರು. ಕಾಂಗ್ರೆಸ್ ಹೆಸರು ಹೇಳಲಿಲ್ಲ, 2000–2007ರವರೆಗೆ ಈ ರಾಜ್ಯದಲ್ಲಿ ಯಾರು ಅಧಿಕಾರದಲ್ಲಿದ್ದರು? ಅವರೂ ಅಧಿಕಾರದಲ್ಲಿ, 20 ತಿಂಗಳು ಇದ್ದರು, ಅದನ್ನು ಅವರು ಮರೆತರು. ಅವರೂ ಸೇರಿ ಈ ರಾಜ್ಯದ ಬೊಕ್ಕಸಕ್ಕೆ 3,500 ಸಾವಿರ ಕೋಟಿ ರೂ. ಹಣವನ್ನು ವ್ಯಯ ಮಾಡಿದ್ದಾರೆ. ಅನ್ಯಾಯ ಎಸಗಿದ್ದಾರೆ ಎನ್ನತಕ್ಕಂತಹ ಆಪಾದನೆಯನ್ನು ಅವರು ಮುಂದಿಟ್ಟರು. 2000ನೇ ಇಸವಿಯಿಂದ 2007ರವರೆಗೆ ಕಲ್ಲಿದ್ದಲನ್ನು

washing ಮಾಡತಕ್ಕಂತಹ ವಿಚಾರವನ್ನು ಸದನದ ಮುಂದಿಟ್ಟಿದ್ದಾರೆ, ಸದನದಲ್ಲಿ ದಾಖಲಾಗಿದೆ. ಇದಕ್ಕೆ ನೇರವಾಗಿ ಮಾನ್ಯ ರೇವಣ್ಣರವರು ಕಾರಣ ಎನ್ನತಕ್ಕಂಥದ್ದನ್ನು ಪ್ರಸ್ತಾಪ ಮಾಡಿದರು. ಈಗ ಕೇಂದ್ರ ಸರ್ಕಾರ 2000ನೇ ಇಸವಿಯಲ್ಲಿ ಯಾವ ರಾಯಚೂರು ಥರ್ಮಲ್ ಘಟಕ ಪ್ರಾರಂಭವಾಯಿತು, ಅವತ್ತು ಒಂದು ನಿರ್ದೇಶನ ಕೊಟ್ಟಿದೆ. ಆಮದು coal ನ್ನು ಬಿಟ್ಟು ಇಂಡಿಯನ್ coal ನ್ನು ಉಪಯೋಗಿಸಬೇಕಾದರೆ ನೀವು ವಾಷಿಂಗ್ ಅನ್ನು ಮಾಡತಕ್ಕಂಥದ್ದು ಕಡ್ಡಾಯ ಎನ್ನತಕ್ಕಂತಹ ಮಾತನ್ನು ಅವತ್ತಿನ ಕೇಂದ್ರ ಸರ್ಕಾರ ನಿರ್ದೇಶನ ಕೊಟ್ಟಿತ್ತು. ಯಾರೂ ಸ್ವತಃ ಮಾಡಿತಕ್ಕಂತಹ ನಿರ್ದೇಶನ ಅಲ್ಲ ಇದು. ಆದಾದ ಮೇಲೆ ಆ ವಾಷಿಂಗ್ ಅನ್ನು 1999 ರಿಂದ 2007ರವರೆಗೆ ಗುಪ್ತಾ ಕೋಲ್ ಹಾಗೂ ನಾಯರ್ ಕೋಲ್, ನಾಗಪುರ ಹಾಗೂ ಮಹಾರಾಷ್ಟ್ರದವರಿಗೆ ನೀಡಿರುತ್ತಾರೆ. ಅದನ್ನು ನೀಡಿ, ಇವತ್ತು ಆ ವಾಷಿಂಗ್ ಅನ್ನು ನಡೆಸಿಕೊಂಡು ಬರುತ್ತಿದ್ದಾರೆ. ಮಧ್ಯಂತರದಲ್ಲಿ ಮಾನ್ಯ ರೇವಣ್ಣನವರು ಯಾರಿಗೋ ಕಂಪನಿಯವರಿಗೆ ಕೊಟ್ಟು ಏನೋ ಹಣ ಲಪಟಾಯಿಸಿರತಕ್ಕಂಥದ್ದು ಅಲ್ಲ. ಕೇಂದ್ರ ಸರ್ಕಾರದ ನಿರ್ದೇಶನ. ಆದರೆ ಒಂದು ಮುಖದಲ್ಲಿ ಹೇಳಿದರು, 500 ಕೋಟಿ ರೂಪಾಯಿಯನ್ನು ನಾನು ಕರ್ನಾಟಕ ರಾಜ್ಯದ ಬೊಕ್ಕಸಕ್ಕೆ ಉಳಿಸಿ ಬಿಟ್ಟಿದ್ದೇನೆ, 3,500 ಕೊಟಿ ರೂ. ನಾನು ತಡೆದಿದ್ದೇನೆ, 3,500 ಕೋಟಿ ರೂಪಾಯಿಯನ್ನು ಇವರು ಹೊಡೆದರು, ನುಂಗಿದರು ಎನ್ನತಕ್ಕಂತಹ ಮಾತನ್ನು ಹೇಳಿದರು. ಆದರೆ ಒಂದು ಹಂತದಲ್ಲಿ ಆ ವಾಷಿಂಗ್ ಮಾಡುವುದರಿಂದ ಎಷ್ಟು ಪ್ರಮಾಣದ ವಿದ್ಯುತ್ ಉತ್ಪಾದನೆ ಆಗುತ್ತದೆ ಎನ್ನತಕ್ಕಂಥದ್ದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಒಂದು ಟನ್‌ಗೆ 3,400 ರಿಂದ 3,800 ರವರೆಗೆ ನಮಗೆ ಗ್ರಾಸ್ ಗ್ಯಾಲರಿ ವ್ಯಾಲ್ಯು ಉತ್ಪತ್ತಿಯಾಗುತ್ತದೆ. ಆದ್ದರಿಂದ ಅದೇ ಇಂಡಿಯನ್ ಕೋಲ್ ಅನ್ನು ವಾಷ್ ಮಾಡದೆ ಉತ್ಪತ್ತಿ ಮಾಡಿದರೆ 3000 ದಿಂದ 3200 ಮಾತ್ರ ಉತ್ಪತ್ತಿ ಆಗುತ್ತದೆ. ಆ ಮಧ್ಯದಲ್ಲಿ ಕರೆಂಟ್ ಉತ್ಪತ್ತಿ ಕಡಿಮೆ ಆಗುತ್ತದೆ. ಆ ಉತ್ಪತ್ತಿ ಕಡಿಮೆ ಆಗುವುದರ ಜೊತೆಯಲ್ಲಿ ಇವತ್ತು ಇಂತಹ ಅಭಾವದ ಪರಿಸ್ಥಿತಿಯಲ್ಲಿ ಕರೆಂಟ್ ಉತ್ಪತ್ತಿ ಮಾಡುವುದರ

ಜೊತೆಯಲ್ಲಿ ನಮ್ಮ ಮೆಷಿನರೀಸ್ ಅಲ್ಲಿ ಬಾಯ್ಲರ್‌ಗಳು ಏನಿವೆ, ಹಳ್ಳಿ ಕಡೆ ಥರ್ಮಲ್ ಘಟಕಗಳು ಕೆಟ್ಟು ಹೋಯಿತೇ ಎಂದು ಕೇಳಿದರೆ ಇವರು ಏನು ಹೇಳುತ್ತಾರೆ, ಆ ಥರ್ಮಲ್ ಘಟಕಗಳು ಹಾಳಾಗಿ ಹೋಗಿ ಒಂದೊಂದು ಸಾರಿ ರಿಪೇರಿಗೆ ಬಂದರೆ ಕೋಟ್ಯಾಂತರ ರೂಪಾಯಿ ಹಣ ವ್ಯಯ ಆಗುತ್ತಿದೆ. ಇದನ್ನು ಲೆಕ್ಕ ಹಾಕಬೇಕಾಗುತ್ತದೆ. ಅದರ ಜೊತೆಯಲ್ಲಿ ಕರೆಂಟಿನ ಉತ್ಪತ್ತಿ ನಿಲ್ಲುತ್ತದೆ. ಆ ಘಟಕವನ್ನು ರಿಪೇರಿ ಮಾಡಿಸಬೇಕಾದರೆ ಕೋಟ್ಯಾಂತರ ರೂಪಾಯಿ ಹಣ ಖರ್ಚಾಗುತ್ತದೆ. ಇದೆಲ್ಲವನ್ನೂ ನಾವು ಯೋಚನೆ ಮಾಡಬೇಕಾಗುತ್ತದೆ. ಆದರೆ ಇವರ ಸರ್ಕಾರ ಬಂದ ಮೇಲೆ ಆ ವಾಷಿಂಗ್ ನಿಲ್ಲಿಸಿದ್ದಾರೆ. 2000ನೇ ಇಸವಿಯಲ್ಲಿ ತೇವಾಂಶ ಎಂದು ಹೇಳಿ ಒಂದು ಪರ್ಸೆಂಟ್ ಹಣವನ್ನು ಡಿಡೆಕ್ಟ್ ಮಾಡಿ ಯಾರು ಟೆಂಡರ್‌ದಾರ ಇರುತ್ತಾನೆ, ಅವನಿಂದ ಒಂದು ಪರ್ಸೆಂಟ್ ಹಣ ಡಿಡಕ್ಟ್ ಮಾಡಿ ಕಂಪನಿಗೆ ಕೊಡುತ್ತಿದ್ದರು. ಸರ್ಕಾರಕ್ಕೆ ಉಳಿಯುತ್ತಿತ್ತು. KPCL ಗೆ ಕೊಡುತ್ತಿದ್ದರು. ಮಾನ್ಯ ರೇವಣ್ಣರವರು ಈ ರಾಜ್ಯದಲ್ಲಿ ಪವರ್ ಮಿನಿಸ್ಟರ್ ಆದ ಮೇಲೆ ಪರ್ ಟನ್‌ಗೆ 10% ಹಣವನ್ನು ತೇವಾಂಶಕ್ಕೋಸ್ಕರ ಕಟ್ ಮಾಡಿ ಸುಮಾರು 300 ರಿಂದ 400 ರೂ. ಹಣವನ್ನು ತೇವಾಂಶದ ಹಣದಲ್ಲಿ ಉಳಿಸಿದರು. ಅದರ ಜೊತೆಗೆ ಇವರು ಇಂಡಿಯನ್ ಕೋಲ್ ಸಪ್ಲೈ ಮಾಡುವುದಕ್ಕೆ SGS ಕಂಪನಿಯಿಂದ ಕ್ವಾಲಿಟಿ ಕಂಟ್ರೋಲ್ testing ಮಾಡಿಸುತ್ತಾರೆ. KPCL ನಿಂದಲೂ ಕ್ವಾಲಿಟಿ ಟೆಸ್ಟ್ ಮಾಡಿಸುತ್ತಾರೆ. ಅದಾದ ಮೇಲೆ ಅಷ್ಟೂ ಸಾಲದು ಎಂದು ಇವೆರಡರ ರಿಸಲ್ಟ್‌ನ್ನು ಮೂರನೇ ಪಾರ್ಟಿಯಿಂದ inspection ಮಾಡಿಸುತ್ತಾರೆ. ಇಂತಹ ಒಂದು ನಿರ್ಣಯವನ್ನು ಅವರು ತೆಗೆದುಕೊಂಡು ಆ ನಿಟ್ಟಿನಲ್ಲಿ ಕೆಲಸ ಮಾಡಿ ಭಾರತ ದೇಶದ ರಾಷ್ಟ್ರಪತಿಗಳು ಹಾಗೂ ಪ್ರಧಾನ ಮಂತ್ರಿಗಳು ಒಳ್ಳೆಯ ವಿದ್ಯುತ್ತನ್ನು ಉತ್ಪಾದನೆ ಮಾಡಿದ್ದೀರಿ ಎಂದು ಹೇಳಿ ಸುವರ್ಣ ಪದಕವನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಕಾಲದಲ್ಲಿ ಯಾವ ಸುವರ್ಣ ಪದಕವನ್ನು ತೆಗೆದುಕೊಂಡರೋ ನನಗೆ ಗೊತ್ತಿಲ್ಲ. ನಾನು ಕೆಲವು ಟೆಕ್ನಿಕಲ್ ವ್ಯಕ್ತಿಗಳ ಜೊತೆ ಚರ್ಚೆ ಮಾಡಿದ್ದರ ಮೇರೆಗೆ 750 ರಿಂದ 800 ರೂ. ವಾಷಿಂಗ್ ಮಾಡುವುದರಿಂದ ಉಳಿತಾಯವಾಗುತ್ತದೆ. ಕೇವಲ

ವಾಷಿಂಗ್ ಮಾಡುವ 450 ರೂ. ಉಳಿಸುವುದಕ್ಕೋಸ್ಕರ ನಮ್ಮ ಮೆಷಿನರಿ ಎಲ್ಲಾ ಹಾಳು ಮಾಡಿಕೊಂಡು, ನಮ್ಮ ಉತ್ಪತ್ತಿ ಎಲ್ಲಾ ಹಾಳು ಮಾಡಿಕೊಂಡು ನಮ್ಮಲ್ಲಿರತಕ್ಕಂತಹ ಸಾಮರ್ಥ್ಯವನ್ನು ಹಾಳು ಮಾಡಿಕೊಂಡು ಈ ದೇಶದಲ್ಲಿ ವಿದ್ಯುಚ್ಛಕ್ತಿ ಅವ್ಯವಸ್ಥೆಗೆ ನಾವು ಕಾರಣರಾಗುತ್ತೇವೆಂದರೆ, ಇದು ಎಷ್ಟರ ಮಟ್ಟಿಗೆ ಸತ್ಯ? ಅದನ್ನು ಮಾನ್ಯ ಮುಖ್ಯಮಂತ್ರಿಗಳು ತಿಳಿಯದೆ, ಈ ಸದನದಲ್ಲಿ ಒಬ್ಬ ವ್ಯಕ್ತಿ ಮೇಲೆ ನೇರವಾದ ಆಪಾದನೆ ಮಾಡುತ್ತಾರೆ. ಈ ವಾಷಿಂಗ್‌ನಿಂದ ಕಾಂಗ್ರೆಸ್ ಸರ್ಕಾರದವರು ಜನತಾ ಸರ್ಕಾರದವರು 3500 ಕೋಟಿ ರೂ.ಗಳನ್ನು ದುರುಪಯೋಗ ಮಾಡಿ ಈ ರಾಜ್ಯದ ಬೊಕ್ಕಸಕ್ಕೆ ನಷ್ಟ ಮಾಡಿದ್ದಾರೆ ಎನ್ನುವುದಾದರೆ ಇದು ಎಷ್ಟರ ಮಟ್ಟಿಗೆ ಸತ್ಯ ಎನ್ನತಕ್ಕಂಥದ್ದನ್ನು ತಿಳಿದುಕೊಳ್ಳಬೇಕು. ಅವರು ಹಿರಿಯರಿದ್ದಾರೆ, ನಾನು ಬೇರೆ ಮಾತುಗಳನ್ನಾಡುವುದಿಲ್ಲ. ಇದನ್ನು ಈ ಕರ್ನಾಟಕ ರಾಜ್ಯದ ಜನತೆಗೆ ನಾವು ತಿಳಿಸಬೇಕಾಗಿತ್ತು. ನಾನು ಮುಂದೆ ಏತಕ್ಕೋಸ್ಕರ ಈ ಆಪಾದನೆ ಮಾಡಿದರು ಎಂದು ಹೇಳುತ್ತೇನೆ. ಸದನದಲ್ಲಿ ಉತ್ತರ ಕೊಡತಕ್ಕಂತಹ ನೆಪದಲ್ಲಿ ಒಂದು ಸರ್ಕಾರವನ್ನು ನಡೆಸತಕ್ಕಂತಹ ಕಾಲದಲ್ಲಿ ಅವರ ಮೇಲೆ ಏಕಾಏಕಿ ಇಂತಹ ಆಪಾದನೆಗಳನ್ನು ಮಾಡತಕ್ಕಂಥದ್ದು ಅಷ್ಟು ಒಳ್ಳೆಯ ಆರೋಗ್ಯಕರವಾದ ಬೆಳವಣಿಗೆ ಅಲ್ಲ. ಈ ಸದನದಲ್ಲಿ ಆರೋಪ ಪ್ರತ್ಯಾರೋಪಗಳು ಇರತಕ್ಕಂಥದ್ದೇ. ಆದರೆ ಆರೋಪವನ್ನು ಮಾಡಬೇಕಾದರೆ ನಾವು ಮೊದಲನೇ ಸಾರಿ ಬಂದಿರತಕ್ಕಂತಹ ಶಾಸಕರು ಸಹಿಸಿಕೊಳ್ಳಬಹುದು, ನಾವು ಶಾಸನದ ಅಡಿಯಲ್ಲಿ ಕೆಲಸ ಮಾಡಬೇಕಾದರೆ ಕೆಲವೊಂದು ತಪ್ಪುಗಳನ್ನು ಮಾಡಬಹುದು. ಅವರಿಗೆ ಸುದೀರ್ಘವಾದ 40 ವರ್ಷಗಳ ರಾಜಕಾರಣದ ಇತಿಹಾಸವಿದೆ. ವಿರೋಧ ಪಕ್ಷದಲ್ಲಿ ಸುಮಾರು 20 ವರ್ಷಗಳ ಕಾಲ ಕುಳಿತು ಕೆಲಸ ಮಾಡಿದ್ದಾರೆ. ಅಂತಹವರು, ಈ ರಾಜ್ಯವನ್ನು ನಡೆಸತಕ್ಕಂತಹ ಒಬ್ಬ ಸಭಾನಾಯಕರು, ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಸದನಕ್ಕೆ ಇದನ್ನು ತಿಳಿಸಬೇಕಾಗಿತ್ತು ಎನ್ನತಕ್ಕಂಥದ್ದು ನನ್ನ ಮನವಿ. ಯಾವತ್ತೂ ಎರಡೂ ಕಡೆಯ ವಿಚಾರಗಳನ್ನೂ ಹೇಳಬೇಕು. ಒಂದು ಏತಕ್ಕೋಸ್ಕರ ವಾಷಿಂಗ್ ಅನ್ನು ಮಾಡಿದರು, coal ನ್ನು ವಾಷ್ ಮಾಡುತ್ತಿದ್ದರು, ಅದರಿಂದ ಏನು

ಆಗುತ್ತಿತ್ತು ಇದೆಲ್ಲವನ್ನೂ ಸಭಾನಾಯಕರಾದವರು ಸವಿಸ್ತಾರವಾಗಿ ಸದನಕ್ಕೆ ತಿಳಿಸಬೇಕು. ಇಲ್ಲವೆಂದರೆ ನಾವು ಮಿಸ್‌ಲೀಸ್ ಆಗುತ್ತೇವೆ. ನಾವು ತಪ್ಪು ಗ್ರಹಿಕೆ ಮಾಡಿ ಬೇರೊಬ್ಬರ ಮೇಲೆ ಆಪಾದನೆ ಮಾಡುವುದಕ್ಕೆ ಪ್ರಾರಂಭ ಮಾಡುತ್ತೇವೆ. ಇದನ್ನು ಸಭಾ ನಾಯಕರು ಮಾಡಬಾರದು ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಅದರ ಜೊತೆಯಲ್ಲಿ ಇನ್ನೊಂದು ಆಪಾದನೆ ಮಾಡಿದರು. ಕಲ್ಲಿದ್ದಲ್ಲಿನ transporting ನಲ್ಲಿ ನೇರವಾಗಿ ಮಾನ್ಯ ರೇವಣ್ಣರವರು M.A.M. Ramaswamy ಯವರಿಗೆ ಕಲ್ಲಿದ್ದಲಿನ transport ಅನ್ನು ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಕುಮಾರಸ್ವಾಮಿಯವರಿಗೆ ಬಹುಮತ ಇಲ್ಲದೆ ಇರುವ ಕಾಲದಲ್ಲಿ ಕೊಟ್ಟು ಒಂದು ಟನ್‌ಗೆ ಒಂದು ಸಾವಿರ ರೂ. ಹಣವನ್ನು ದುರುಪಯೋಗ ಮಾಡಿದ್ದಾರೆ, ಇದರ ಹಿನ್ನೆಲೆ ಇದೆ ಎನ್ನತಕ್ಕಂತಹ ಮಾತನ್ನು ಹೇಳಿದರು. ಅವತ್ತು ಮಾನ್ಯ ರೇವಣ್ಣರವರ ಕಾಲದಲ್ಲಿ ಕೊಟ್ಟಿರತಕ್ಕಂಥದ್ದು ಪ್ರಾರಂಭ ಮಾಡಿರತಕ್ಕಂಥದ್ದು ಅಲ್ಲ. 2000ನೇ ಇಸವಿಯಲ್ಲಿ ಯಾವತ್ತು ರಾಯಚೂರಿನಲ್ಲಿ ಥರ್ಮಲ್ ಘಟಕ ಪ್ರಾರಂಭ ಆಯಿತು ಅಂದಿನಿಂದಲೂ ಸಹ ಹಡಗಿನ ಮುಖಾಂತರ coal ನ್ನು ತರಿಸಿದ್ದಾರೆ. ಆ ಪದ್ಧತಿ ಇದೆ. ಆದರೆ ಆ ಪದ್ಧತಿಗೆ ಇವತ್ತು ಯಾವ ರೀತಿ ಇವರು ಅರ್ಥೈಸಿದ್ದಾರೆ ಎಂದರೆ, M.A.M. Ramaswamy ಜಾತ್ಯಾತೀತ ಜನತಾದಳದ ಒಬ್ಬ ಒಬ್ಬ ರಾಜ್ಯಸಭೆ ಸದಸ್ಯರು. ಅವರ ಹೆಸರನ್ನು ಹೇಳಿ ಬಿಟ್ಟರೆ ಜನ ಆ ಕಡೆ ಡೈವರ್ಟ್ ಆಗುತ್ತಾರೆ, ಅವರು ಒಬ್ಬ ಉದ್ಯಮಿಗಳು ಕೂಡ. ಅಂತಹ ಉದ್ಯಮಿಗಳಿಗೆ ಇವರು ಕೊಟ್ಟಿರಬಹುದು ಎನ್ನತಕ್ಕಂತಹ ಭಾವನೆ ಈ ರಾಜ್ಯದ ಜನತೆಯಲ್ಲಿ ಮೂಡಲಿ ಎಂದು ಅವರ ಮನಸ್ಸನ್ನು ಆ ಕಡೆ ಡೈವರ್ಟ್ ಮಾಡಲಿಕ್ಕೆ ಈ ವಿಚಾರವನ್ನು ಹೇಳುತ್ತಾರೆ. ಅವರು one of the share-holder ಅಷ್ಟೆ. ಅವರು ಆ ಕಂಪನಿಯ ಪಾಲುದಾರರೂ ಅಲ್ಲ, ಆ ಕಂಪನಿಯ ಏಜೆಂಟರು ಅಲ್ಲ. ಅವರು one of the share-holders. ಆದರೆ ಅದು ಏನೇ ಇರಬಹುದು, ಅವತ್ತು ಕೇಂದ್ರ ಸರ್ಕಾರದ ರೈಲ್ವೆ ಇಲಾಖೆಯಿಂದ ದೃಢೀಕರಣ ಪತ್ರ ಬಂದಿದೆ. ಏನೆಂದರೆ, ವ್ಯಾಗನ್‌ಗಳ ಅವಕಾಶವಿಲ್ಲ. 1800 ಕಿ.ಮೀ. ಆಗುತ್ತದೆ.

ಅಲ್ಲಿಂದ ಕಲ್ಲಿದ್ದಲ್ಲನ್ನು ತರಿಸಿ ಇಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆಯನ್ನು ಮಾಡುವುದಕ್ಕೆ ತಡವಾಗುತ್ತದೆಯಾದ ಕಾರಣ ಹಡಗಿನ ಮೂಲಕವೇ 2000 ನೇ ಇಸವಿಯಿಂದ ಇಲ್ಲಿಯವರೆವಿಗೆ ಕಲ್ಲಿದ್ದಲ್ಲನ್ನು ತರಿಸಿಕೊಂಡು ಬಂದಿದ್ದಾರೆ. ಮುತ್ತಯ್ಯ ಎನ್ನತಕ್ಕಂಥವರು ಈ ಕಲ್ಲಿದ್ದಲನ್ನು ಸಪ್ಲೈ ಮಾಡುತ್ತಿದ್ದರು. 2004 ರಲ್ಲಿ ಎಸ್‌ಆರ್‌ಎಸ್ ಎನ್ನತಕ್ಕಂಥ ಕಂಪನಿ ಕಲ್ಲಿದ್ದಲನ್ನು ಸಪ್ಲೈ ಮಾಡುತ್ತಿತ್ತು. 2004 ರಲ್ಲಿ South Indian Corporation ಎನ್ನತಕ್ಕಂಥ ಸಂಸ್ಥೆಗೆ ಇವರು ಗುತ್ತಿಗೆಯನ್ನು ಕೊಟ್ಟಿದ್ದಾರೆ. ಇದರಲ್ಲಿ ಪಾರದರ್ಶಕತೆ ಇಲ್ಲದಿದ್ದರೆ, ಅದರಲ್ಲೇನಾದರೂ ಅವ್ಯವಹಾರ ನಡೆದಿದ್ದರೆ ಇವರು ವಿಚಾರಣೆಯನ್ನು ಮಾಡಲಿ. ಸಿ.ಬಿ.ಐ. ತನಿಖೆಗೆ ಹಾಕಲಿ. ನಾವು ಬೇಡವೆನ್ನುವುದಿಲ್ಲ. ಅಲ್ಲಿ ಪಾರದರ್ಶಕತೆ ಇರಬೇಕು. ನೀವೇ ಹಣಕಾಸಿನ ಮಂತ್ರಿಗಳು. ನೀವು ಅಲ್ಲಿ one of the Committee Members ಆಗಿದ್ದೀರಿ. ಹಣಕಾಸಿನ ಮಂತ್ರಿಗಳಾದ ತಾವು ಅಲ್ಲಿ ಸದಸ್ಯರಾಗಿದ್ದೀರಿ. ನಿಮಗೆ ನೋಟ್ ಬರುತ್ತದೆ. ನಿಮಗೆ ಪ್ರತಿಯೊಂದು ಫೈಲ್ ಬರುತ್ತದೆ. ನೀವು ಅಂಥ ಸಂದರ್ಭದಲ್ಲಿ ಈ ಸಂಸ್ಥೆಗೆ ಕೊಟ್ಟಿರತಕ್ಕಂಥ ಹಣ ಜಾಸ್ತಿಯಾಗಿದೆ, ಇವತ್ತು ಸಮುದ್ರದ ಮೂಲಕ ಹಡಗಿನಲ್ಲಿ ಕಲ್ಲಿದ್ದಲನ್ನು ತರಿಸುವುದು ಬೇಡ, ನಾವು ರೈಲ್ವೆ ಮಾರ್ಗದಲ್ಲಿ ವ್ಯಾಗನ್‌ಗಳ ಮೂಲಕ ತರಿಸೋಣವೆನ್ನುವ ಸಲಹೆಯನ್ನು ತಾವೇಕೆ ಕೊಡಲಿಲ್ಲ? ನೀವು ಇದರಲ್ಲಿ ಪಾತ್ರದಾರರಲ್ಲವೋ? ಒಂದು ವೇಳೆ ನಡೆದಿದ್ದರೆ ಇದಕ್ಕೆ ನೀವು ಪಾತ್ರದಾರರಾಗುವುದಿಲ್ಲವೆ? ಅವತ್ತು ಕಡೆಯ 20 ತಿಂಗಳುಗಳಲ್ಲಿ ನೀವು ಅಧಿಕಾರದಲ್ಲಿ ಇದ್ದಿರಲ್ಲ, ಆಗಲೇ ನೀವು ಇದನ್ನು ರದ್ದು ಮಾಡಿ ಎಂದು ಹೇಳಬೇಕಾಗಿತ್ತು. ಆಗ ನೀವು ಸರ್ಕಾರ ನಡೆಸಿ ಈಗ ಮನ ಬಂದಂತೆ ಮಾತನಾಡಿ ಎಂ.ಎ.ಎಂ. ರಾಮಸ್ವಾಮಿಯವರಿಗೆ ಒಂದು ಟನ್‌ಗೆ ಒಂದು ಸಾವಿರ ರೂ.ಗಳನ್ನು ಅಧಿಕವಾಗಿ ಕೊಟ್ಟು ಈ ರಾಜ್ಯದ ಬೊಕ್ಕಸಕ್ಕೆ ನಷ್ಟವನ್ನುಂಟು ಮಾಡಿದ್ದಾರೆ ಎಂದು ಹೇಳುವುದಾದರೆ ಇದು ಎಷ್ಟರಮಟ್ಟಿಗೆ ಸಾಧ್ಯ? ನೀವು ಇದರ ಬಗ್ಗೆ ಆಲೋಚನೆಯನ್ನು ಮಾಡಬೇಕಾಗಿತ್ತು. ಇದು ಎಲ್ಲಿಂದ ಪ್ರಾರಂಭವಾಗಿದೆ? 2000ನೇ ಇಸವಿಯಿಂದ ಪ್ರಾರಂಭವಾಗಿ ಇಲ್ಲಿಯವರೆವಿಗೆ ಬಂದಿರತಕ್ಕಂಥ

ವ್ಯವಹಾರದಲ್ಲಿ ಇವತ್ತು ಯಾವ ರೀತಿ ಟೆಂಡರ್ ಆಗಿದೆ, ಪಾರದರ್ಶಕತೆ ಬಗ್ಗೆ ಹೇಳುತ್ತೀರಿ. ರಾಮಸ್ವಾಮಿಯವರು ರಾಜ್ಯಸಭೆ ಮೆಂಬರ್ ಆಗಿದ್ದರೂ ಕೂಡ ಅವರು ಇವತ್ತಿನಿಂದೇನೂ ಕಾಂಟ್ರ್ಯಾಕ್ಟ್ ಕೆಲಸ ಮಾಡುತ್ತಿಲ್ಲ, ಅವರ ಕಂಪನಿ ಹುಟ್ಟಿಕೊಂಡು ಸುಮಾರು 30, 40 ವರ್ಷದಿಂದ ನಡೆಯುತ್ತಿದೆ. ಅವರು ಕಾಂಟ್ರ್ಯಾಕ್ಟ್ ಕೆಲಸವನ್ನು ಮಾಡುತ್ತಾರೆ. ಇವತ್ತು ಇಲ್ಲಿ ಇಲ್ಲವೆಂದರೂ ಇವತ್ತು ಮದ್ರಾಸ್‌ನಲ್ಲಿ ಮಾಡುತ್ತಿದ್ದಾರೆ. ಆಂಧ್ರದಲ್ಲಿ ಮಾಡುತ್ತಿದ್ದಾರೆ. ಅವರು ಎಲ್ಲೋ ಒಂದು ಟೆಂಡರ್ ಹಾಕಿ ಗುತ್ತಿಗೆಯನ್ನು ಪಡೆದು ಕೆಲಸವನ್ನು ಮಾಡುತ್ತಾರೆ. ಆದರೆ ನೀವು ಈ ರೀತಿ ಇವತ್ತು ಆ ಸಂಸ್ಥೆ ಗುತ್ತಿಗೆ ತೆಗೆದುಕೊಂಡಿತು ಎಂದು ಹೇಳಿದ್ದೀರಿ. ಮಾನ್ಯ ಕುಮಾರಸ್ವಾಮಿಯವರು ಬಹುಮತವನ್ನು ಕಳೆದುಕೊಂಡಾಗ ಕ್ಯಾಬಿನೆಟ್‌ಗೆ ಆ ವಿಚಾರ ಬಂದಿಲ್ಲ. ಕ್ಯಾಬಿನೆಟ್ ಮುಂದೆ ಆ ವಿಚಾರ ಬರುವುದೂ ಇಲ್ಲ. ಆದರೆ ನೀವು ಆ ರೀತಿ ಮಾಡಿರತಕ್ಕಂಥ ಆಪಾದನೆ ಎಷ್ಟರಮಟ್ಟಿಗೆ ಸತ್ಯ? ನಿನ್ನೆ ನಾವು ದಿಗ್ಭ್ರಾಂತರಾಗಿ ಹೋದೆವು. ಏನೋ ರೇವಣ್ಣನವರು ಬಹಳ ಲೂಟಿ ಹೊಡೆದಿದ್ದಾರೇನೋ ಎನ್ನತಕ್ಕಂಥ ಭಾವನೆ ನಮ್ಮ ಮನಸ್ಸಿನಲ್ಲಿಯೇ ಬಂತು. ಆ ರೀತಿ ನೀವು ಆಟಾಟೋಪವಾಗಿ ಅವರ ಮೇಲೆ ಮಾಡಿದಂಥ ಛಾರ್ಜಸ್ ಇದೆಯಲ್ಲಾ, ಅದು ಈ ಪ್ರಜಾಪ್ರಭುತ್ವ ತಾಂತ್ರಿಕ ವ್ಯವಸ್ಥೆಯೊಳಗಡೆ, ಪ್ರಜಾತಂತ್ರ ವ್ಯವಸ್ಥೆಯೊಳಗಡೆ ಸಲ್ಲತಕ್ಕಂಥದ್ದಲ್ಲ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ರಾಜಕಾರಣದಲ್ಲಿ ಇರತಕ್ಕಂಥವರೆಲ್ಲರೂ ತಪ್ಪು ಒಪ್ಪುಗಳನ್ನು ಮಾಡತಕ್ಕಂಥದ್ದು ಸಹಜತೆ ಇರುತ್ತದೆ. ಆದರೆ ಆಪಾದನೆಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ, ನಿಜವಾಗಿಯೂ ಇಂಥ ಆಪಾದನೆಗಳನ್ನು ಮಾಡಬೇಕಾದರೆ, ತಮ್ಮ ವ್ಯವಸ್ಥೆಯನ್ನು ನೋಡಿಕೊಂಡು ಮಾಡಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ ಸನ್ಮಾನ್ಯ ಸಭಾನಾಯಕರು ಇನ್ನೊಂದು ವಿಚಾರವನ್ನು ಸದನದ ಮುಂದೆ ಇಟ್ಟರು. ಅದೇನೆಂದರೆ ಕಲ್ಲಿದ್ದಲನ್ನು ಖರೀದಿ ಮಾಡತಕ್ಕಂಥದ್ದರಲ್ಲಿ, ನಮ್ಮ ರೇವಣ್ಣನವರು ನೇರವಾಗಿ ಮುಖ್ಯಮಂತ್ರಿಗಳು ಕಾರಣ, ಕಾರಣ ಎನ್ನತಕ್ಕಂಥ ಮಾತನ್ನು ಪದೇ ಪದೇ ಪ್ರಸ್ತಾಪ ಮಾಡುತ್ತಿದ್ದರು. ನಾವು

ನೋಡುತ್ತಿದ್ದೆವು. ಅವರು ಎದ್ದು ಎದ್ದು ಪ್ರಸ್ತಾಪ ಮಾಡುತ್ತಲೇ ಇದ್ದರು. ಕಾರಣ ಏನಿದೆ? ಮುಖ್ಯಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಬೇಕಾದರೆ, ಉತ್ತರ ನೀಡತಕ್ಕಂಥ ಸಂದರ್ಭದಲ್ಲಿ ಒಂದು ಪಾಯಿಂಟ್‌ನ್ನು ಅಲ್ಲಿ ಅವರು ಬಿಟ್ಟಿದ್ದಾರೆ. ಭಾಟಿಯಾ ಕಂಪನಿಗೆ 6 ಲಕ್ಷ ಮೆಟ್ರಿಕ್ ಟನ್‌ನ್ನು ಖರೀದಿ ಮಾಡುವುದಕ್ಕೆ ಕಾನೂನು ಬದ್ಧವಾಗಿ ಅವರಿಗೆ ಪರವಾನಗಿಯನ್ನು ಕೊಟ್ಟಿರತಕ್ಕಂಥದ್ದು ಸತ್ಯ. ಆದರೆ ಅಲ್ಲಿ plus or minus 15 % ಅನ್ನು ಯಾವ ಸಂದರ್ಭದಲ್ಲಿ ಕೊಂಡುಕೊಳ್ಳಬೇಕು, ಯಾವ ಸಂದರ್ಭದಲ್ಲಿ ಕೊಂಡುಕೊಳ್ಳಬಾರದು ಎಂಬ ಬಗ್ಗೆ ಒಂದು clause ಇದೆ. ಆ clause ಬಗ್ಗೆ ಮುಖ್ಯಮಂತ್ರಿಗಳು ಪ್ರಸ್ತಾಪ ಮಾಡಲಿಲ್ಲ. ಏಕೋ ನನಗೆ ಗೊತ್ತಿಲ್ಲ. ಏನು ಆ clause? ಭಾಟಿಯಾ ಕಂಪನಿಗೆ ರೇಟ್ ರೂ. 7 ಸಾವಿರ ಚಿಲ್ಲರೆಗೆ ಅಗ್ರಿಮೆಂಟ್ ಆಗಿರುತ್ತದೆ. ಆದರೆ ರೂ. 7 ಸಾವಿರ ಚಿಲ್ಲರೆಗೆ ಅಗ್ರಿಮೆಂಟ್ ಆದಾಗ S.E. Fuel & KPCL M.D. ಯವರು ಒಂದು ಪತ್ರವನ್ನು ಬರೆಯುತ್ತಾರೆ, ರೆಕಾರ್ಡ್‌ನ್ನು, ಒಂದು ಟಿಪ್ಪಣಿಯನ್ನು ಬರೆಯುತ್ತಾರೆ, ಒಂದು ಪತ್ರವನ್ನು ಸರ್ಕಾರಕ್ಕೆ ಬರೆಯುತ್ತಾರೆ. ಒಂದು ಟಿಪ್ಪಣಿಯನ್ನು ಸರ್ಕಾರಕ್ಕೆ ಕಳುಹಿಸುತ್ತಾರೆ. ಇವತ್ತು ಅಗ್ರಿಮೆಂಟ್ ಪ್ರಕಾರ ಮೈನಸ್ 15% ಅನ್ನು ನಾವು ಕೈಬಿಡಬೇಕಾಗುತ್ತದೆ. ಮೈನಸ್ 15 ಪರ್ಸೆಂಟ್‌ನ್ನು ನಾವು ಕೈಬಿಡುವುದರಿಂದ ಈ ರಾಜ್ಯದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿ ಹಣ ಉಳಿಯುತ್ತದೆ ಎನ್ನತಕ್ಕಂಥ ಮಾತನ್ನು ಅಧಿಕಾರಿಗಳು ಪ್ರಸ್ತಾವನೆ ಮೂಲಕ ಸಲ್ಲಿಸುತ್ತಾರೆ. ಆದರೆ ಮುಖ್ಯಮಂತ್ರಿಗಳು 22-04-2009ರಲ್ಲಿ ಒಂದು ಪತ್ರವನ್ನು ಬರೆಯುತ್ತಾರೆ. ಪತ್ರವನ್ನು ಬರೆದು ಅದೇನೇ ಇರಲಿ ಈ ರಾಜ್ಯದ ಹಿತದೃಷ್ಟಿಯಿಂದ ನೀವು ಮೈನಸ್ 15 % ಇರತಕ್ಕಂಥ ಕಲ್ಲಿದ್ದಲನ್ನು ನೀವು ಖರೀದಿ ಮಾಡಲೇಬೇಕು ಎನ್ನತಕ್ಕಂಥ ತಾಕೀತನ್ನು ಮಾಡುತ್ತಾರೆ. ಲೋಹಿತ್ ಎನ್ನುವ ಹಡಗಿನಲ್ಲಿದ್ದಂಥವರು ಹೇಳುತ್ತಾನೆ, ಈಗಾಗಲೇ ಹಡಗಿನಲ್ಲಿ ತಂದು ಮದ್ರಾಸ್‌ನಲ್ಲಿ ನಿಲ್ಲಿಸಿಕೊಂಡಿದ್ದೇನೆ, ಅದನ್ನು unload ಮಾಡಿಸಿಕೊಳ್ಳಿ ಎಂದು ಮುಖ್ಯಮಂತ್ರಿಗಳ ಮನೆಗೆ ಹೋಗುತ್ತಾರೆ. ಆ ಮುಖ್ಯಮಂತ್ರಿಗಳ ಮನೆಯಿಂದಲೆ ಟೆಲಿಗ್ರಾಂ ಕೊಡುತ್ತಾರೆ, ಫೋನ್ ಮುಖಾಂತರ,

ಕೆ.ಪಿ.ಸಿ.ಎಲ್.ನ ಎಂ.ಡಿ. ಟೂರ್‌ನಲ್ಲಿ ದೆಹಲಿಯಲ್ಲಿದ್ದರೂ ಕೂಡ ಅವರಿಗೆ ಫೋನ್ ಮಾಡಿ ಹೇಳುತ್ತಾರೆ. ಒಂದು ನೋಟ್ ಅನ್ನು ಹಾಕಿ ಅವರಿಗೆ ಫೋನ್ ಮೆಸೇಜ್ ಮುಖಾಂತರ ಹಡಗಿನಲ್ಲಿದ್ದ ಕಲ್ಲಿದ್ದಲ್ಲನ್ನು unload ಮಾಡಿಸುತ್ತಾರೆ. ಈ ರೀತಿ ಮಾಡಿಯಾದ ಮೇಲೆ ನೀವು ಏನು ಮಾಡಿದಿರಿ? ಆ ಮೈನಸ್ 15 ಪರ್ಸೆಂಟ್‌ನಲ್ಲಿ ಹೇಳಿರುವಂತೆ ಏತಕ್ಕೋಸ್ಕರ ಮೈನಸ್ 15 ಪರ್ಸೆಂಟ್‌ನ್ನು ತೆಗೆದುಕೊಳ್ಳಬೇಕೆಂದರೆ, ಕಾಂಟ್ರ್ಯಾಕ್ಟ್ ಅಗ್ರಿಮೆಂಟ್ ಪ್ರಕಾರ ಆ ವೇಳೆಗೇನಾದರೂ ಆಮದು ಕಲ್ಲಿದ್ದಲಿನ ದರ ಬಹಳ ಕುಸಿದಾಗ ಅದನ್ನು ಕೈ ಬಿಡಬೇಕೆನ್ನತಕ್ಕಂಥ ಕಾನೂನು ಇದೆ. ಅದನ್ನು ಈ ರಾಜ್ಯದ ಹಿತದೃಷ್ಟಿಯಿಂದ, ಈ ರಾಜ್ಯದ ಬೊಕ್ಕಸದ ಹಿತದೃಷ್ಟಿಯಿಂದ ಅದನ್ನು ಕೈಬಿಡಬೇಕು ಎನ್ನತಕ್ಕಂಥ ಒಂದು ಸಂಪ್ರದಾಯವಿದೆ, ಒಂದು ಕಾನೂನಿದೆ. ಆ ಕಾನೂನು ಪ್ರಕಾರ ಅಧಿಕಾರಿಗಳು ಹೇಳಿದ್ದನ್ನು ಕೇಳದೆಯೆ ನೀವು 15 ಪರ್ಸೆಂಟ್ ಇದ್ದದ್ದನ್ನು ಖರೀದಿ ಮಾಡಿದ್ದೀರಿ. ನನಗೆ ಇರುವಂಥ ಮಾಹಿತಿ ಪ್ರಕಾರ ಏನು 7800, 7900 ರೂಪಾಯಿಗಳನ್ನು ಕೊಡುತ್ತಿದ್ದರೋ ಆಗ 5 ಸಾವಿರ ರೂಪಾಯಿಗಳಿಗೆ ದರ ವಿಶ್ವ ಮಾರುಕಟ್ಟೆಯಲ್ಲಿ ಕುಸಿಯುತ್ತದೆ. ಆ ರೀತಿ ದರ ಕುಸಿದಂಥ ಸಂದರ್ಭದಲ್ಲಿ ಆ ವ್ಯಕ್ತಿ ಪತ್ರಗಳನ್ನು ಬರೆಯತಕ್ಕಂಥದ್ದು, ರಿಕ್ವೆಸ್ಟ್ ಮಾಡಿಕೊಳ್ಳತಕ್ಕಂಥದ್ದು ಸ್ವಾಭಾವಿಕ. ಆ ರೀತಿ ಅವನು ಐದಾರು ಪತ್ರಗಳನ್ನು ಬರೆದಿದ್ದಾನೆ. "ನಾನು ಈಗಾಗಲೇ ಅಗ್ರಿಮೆಂಟ್ ಮಾಡಿಕೊಂಡಿದ್ದೇನೆ, ನನಗೆ ಲಾಸ್ ಆಗುತ್ತದೆ, ಈಗಾಗಲೇ ನಾನು ಕಲ್ಲಿದ್ದಲನ್ನು ಕೊಂಡು ಹೊರದೇಶದಲ್ಲಿ ಅಗ್ರಿಮೆಂಟ್ ಮಾಡಿಕೊಂಡಿದ್ದೇನೆ. ಆದಕಾರಣ ನೀವು ಕಲ್ಲಿದ್ದಲ್ಲನ್ನು ತೆಗೆದುಕೊಳ್ಳಬೇಕು" ಎಂದು ಹೇಳುತ್ತಾರೆ. ಅದು ವ್ಯಾಪಾರ ಧರ್ಮ. ಆದರೆ ನೀವು ಈ ರಾಜ್ಯವನ್ನು ಏನು ಮಾಡಿದಿರಿ.? ಈ ರಾಜ್ಯದ ಬೊಕ್ಕಸಕ್ಕೆ ಏಕೆ ನಷ್ಟವನ್ನುಂಟು ಮಾಡಿದಿರಿ? ಅವರೇನಾದರೂ ಹೇಳಲಿ, 15 ಪರ್ಸೆಂಟ್‌ನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವುದನ್ನು ಬಿಟ್ಟು 200 ರೂಪಾಯಿಯಂತೆ ಟನ್‌ಗೆ ಕಡಿಮೆ ಮಾಡಿಸಿ ಆ ಕಲ್ಲಿದ್ದಲ್ಲನ್ನು ಖರೀದಿ ಮಾಡಿಸುತ್ತೀರಲ್ಲಾ ಇದರಿಂದ ಜನರಿಗೆ ಅನುಮಾನ ಬರುವುದಿಲ್ಲವೆ? ಈ ರಾಜ್ಯದ ಜನತೆಗೆ ಅನುಮಾನ ಬರುವುದಿಲ್ಲವೆ? ಈ ರಾಜ್ಯದ ಬೊಕ್ಕಸಕ್ಕೆ

ಅನ್ಯಾಯವಾಗುವುದಿಲ್ಲವೆ? ಇದನ್ನು ನಾವು ಆಲೋಚನೆ ಮಾಡಬೇಕಲ್ಲ? ಇದನ್ನು ನೀವು plus or minus 15 percent ವಿಚಾರ ಟೆಂಡರ್‌ನಲ್ಲಿದ್ದ ವಿಷಯವನ್ನು ಉತ್ತರ ಕೊಡುವಾಗ ಏಕೆ ಹೇಳಲಿಲ್ಲ? ಏಕೆ ಮುಚ್ಚಿಟ್ಟಿರಿ ಈ ಅಂಶವನ್ನು? ಇದನ್ನು ಅರ್ಥ ಮಾಡಿಸಬೇಕಾಗಿತ್ತಲ್ಲ? ಯಾವ ಉದ್ದೇಶಕ್ಕೋಸ್ಕರ ಇದನ್ನು ಮುಚ್ಚಿಟ್ಟಿದ್ದೀರಿ ಎಂಬುದನ್ನು ತಾವು ಹೇಳಬೇಕಲ್ಲ? ಇದನ್ನು ತಾವು ಅರ್ಥ ಮಾಡಿಕೊಂಡು ದಯಮಾಡಿ ಇವತ್ತು ವಿಚಾರವನ್ನು ಗ್ರಹಿಸಿಕೊಳ್ಳಬೇಕಾಗುತ್ತದೆ. ಇದರಿಂದ ಅರ್ಥವಾಗುತ್ತದೆ, ಇಲ್ಲಿ ಏನು ನಡೆದಿದೆ ಎನ್ನತಕ್ಕಂಥದ್ದನ್ನು ನಾನು ಹೇಳುವುದಿಲ್ಲ. ನಾನು ಯಾರ ಮೇಲೂ ನೇರವಾದ ಆಪಾದನೆಯನ್ನು ಮಾಡುವುದಿಲ್ಲ. ಈ ರಾಜ್ಯದ ಜನತೆಗೆ ಬಿಡೋಣ. ಈ ಸದನ ಇದರ ಬಗ್ಗೆ ತೀರ್ಮಾನ ಮಾಡಲಿ. ಈ ರಾಜ್ಯದ ಜನತೆ ತೀರ್ಮಾನ ಮಾಡಲಿ. ಅದಕ್ಕೋಸ್ಕರವೇ ನಾನು ಹೇಳಿದ್ದು, ಇದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಲು ಅವಕಾಶ ಕೊಡಿ. ಈ ರಾಜ್ಯದ ಬೊಕ್ಕಸಕ್ಕೆ ಉಂಟಾಗಿರತಕ್ಕಂಥ ಅನ್ಯಾಯವನ್ನು ತಡೆಯಬೇಕು. ಆರ್ಥಿಕ ಸಂಕಷ್ಟ ಇದರಲ್ಲಿದೆ. ಆರ್ಥಿಕ ದಿವಾಳಿತನ ಇದರಲ್ಲಿದೆ. ಇದರ ಬಗ್ಗೆ ಚರ್ಚೆಯಾಗಲಿ. ಯಾರು ತಪ್ಪು ಮಾಡಿರುತ್ತಾರೋ ಅವರು ಶಿಕ್ಷೆ ಅನುಭವಿಸಲಿ ಎಂದೇ ನಾವು ಈ ವಿಚಾರದ ಬಗ್ಗೆ ಪದೇ ಪದೇ ಚರ್ಚೆಗೆ ಅವಕಾಶವನ್ನು ಕೇಳಿದೆವು. ತಾವು ಅವಕಾಶವನ್ನು ಕೊಡಲಿಲ್ಲ. 5 ನಿಮಿಷದಲ್ಲಿ ಕ್ಲಾರಿಫಿಕೇಶನ್ ಕೊಡಯ್ಯಾ ರೇವಣ್ಣನವರೆ ಎಂದರು. ರೇವಣ್ಣನವರು ಕ್ಲಾರಿಫಿಕೇಶನ್ ಕೊಡುವುದರೊಳಗೆ ಅವರು ಉತ್ತರ ಪ್ರಾರಂಭ ಮಾಡಿ ಇವೆರಡು ಆಪಾದನೆಯನ್ನು ರೇವಣ್ಣನವರ ಮೇಲೆ ನೇರವಾಗಿ ಮಾಡಿದರು. ಈ ಆಪಾದನೆಯನ್ನು ಮುಚ್ಚಿ ಹಾಕುವುದಕ್ಕೋಸ್ಕರ ಆ ಆಪಾದನೆಯನ್ನು ನೀವು ಮಾಡುತ್ತೀರಾ? ಇದು ಗೊತ್ತಾಗುವುದಿಲ್ಲವೇ? ಇದರ ಮರ್ಮವನ್ನೂ ನೀವು ಹೇಳಬೇಕಲ್ಲ? ಅದರ ಜೊತೆಗೆ ಎಂಎಂಟಿಸಿನಲ್ಲಿ ಟೆಂಡರ್ ಆಯಿತು. ಭಾಟಿಯಾ ಕಂಪನಿಯವರಿಗೆ ಆರು ಲಕ್ಷ ಟನ್ ಕಲ್ಲಿದ್ದಲು ಖರೀದಿ ಮಾಡಬೇಕೆಂದು ಟೆಂಡರ್ ಆದಾಗ, ಅವರು "ನನ್ನ ಹತ್ತಿರ ಇವತ್ತು ಕಲ್ಲಿದ್ದಲು ಇಲ್ಲ, ಇನ್ನೆರಡು ತಿಂಗಳು ಕಾಲ ಎಂದರೆ ಸೆಪ್ಟೆಂಬರ್‌ವರೆಗೆ

ನಾನು ಯಾವುದೇ ಕಾರಣದಿಂದ ಇದನ್ನು ಸಪ್ಲೈ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದಾಗ ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಆರ್ಥಿಕ ಕಾರ್ಯದರ್ಶಿ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ಜಾಮದಾರ್‌ರವರು ಈ ನಾಲ್ಕು ಜನರನ್ನೊಳಗೊಂಡಂತೆ ಒಂದು ಉಪ ಸಮಿತಿಯನ್ನು ರಚನೆ ಮಾಡಿ, ಕರ್ನಾಟಕ ರಾಜ್ಯದ ಪಾರದರ್ಶಕತೆ 1999 (ಜಿ) (4) ವಿಮುಕ್ತಿಗೊಳಿಸಿ ಅವರಿಗೆ ಕೊಳ್ಳುವುದಕ್ಕೆ ಅಧಿಕಾರವನ್ನು ಕೊಟ್ಟರು. ಎಷ್ಟು ತಿಂಗಳಿಗೆ ಅಧಿಕಾರವನ್ನು ಕೊಟ್ಟರು ಎಂದರೆ ಎರಡು ತಿಂಗಳ ಕಾಲಾವಧಿಗೆ ಎರಡು ಲಕ್ಷ ಟನ್ ಕಲ್ಲಿದ್ದಲನ್ನು ಮಾತ್ರ ಖರೀದಿ ಮಾಡುವುದಕ್ಕೆ ನಿರ್ಣಯವಾಯಿತು. ಕಲ್ಲಿದ್ದಲನ್ನು ನೇರವಾಗಿ ಖರೀದಿ ಮಾಡಬೇಕೆನ್ನುವ ಸಂದರ್ಭದಲ್ಲಿ ನಾಲ್ಕು ಜನ ಕಂಪನಿಗಳನ್ನು ಅಲ್ಲಿಗೆ ಕರೆಸಿದಿರಿ. ಆ ನಾಲ್ಕು ಕಂಪನಿಗಳಲ್ಲಿ ಎಂಎಂಟಿಸಿ ಕೊಟ್ಟಂತಹ ಒಂದು ದರವನ್ನು ನೀವು ಒಪ್ಪಿಕೊಂಡು ಅವರಿಗೆ ಎರಡು ಲಕ್ಷ ಟನ್ supply ಮಾಡುವುದಕ್ಕೆ ನೀವು ಆದೇಶವನ್ನು ಕೊಟ್ಟಿರಿ. ನೀವು ಆದೇಶವನ್ನು ಕೊಟ್ಟಮೇಲೆ ಅದಕ್ಕೆ ನೀವು stick on ಆಗಬೇಕಾಗಿತ್ತು, ಆದರೆ ಆಗಲಿಲ್ಲ. ಮಾನ್ಯ ಮುಖ್ಯಮಂತ್ರಿಗಳಿಂದ ಎಂಎಂಟಿಸಿಗೆ ಕೊಡುವುದಕ್ಕೆ ಮತ್ತೊಂದು ಪತ್ರ ಬರುತ್ತದೆ. ನೀವು ಪುನಃ ಇಲ್ಲಿ ನಾಲ್ಕು ಕಂಪನಿಗಳನ್ನು ಕರೆಸಿ, ಎರಡು ಲಕ್ಷ ಟನ್ ಕಲ್ಲಿದ್ದಲನ್ನು ಮಾತ್ರ ಖರೀದಿ ಮಾಡುವುದಕ್ಕೆ ಹೇಳಿ, ನೀವು ಪುನಃ ಹೋಗಿ ಆರು ಲಕ್ಷ ಟನ್‌ಗೆ ಅಗ್ರಿಮೆಂಟ್ ಮಾಡುತ್ತೀರಿ. ಆಗ ಅಲ್ಲಿಯೇ ನಾಲ್ಕು ಜನ ಸಂದಾನಕಾರರಾಗಿ ಹೋಗಿದ್ದ ಕಂಪನಿಗಳಲ್ಲಿ ಒಂದು ಕಂಪನಿ Knowledge Infrastructure Private Limited Companyಯವನು ಉಚ್ಚ ನ್ಯಾಯಾಲಯಕ್ಕೆ ಹೋಗಿ ಅರ್ಜಿಯನ್ನು ಸಲ್ಲಿಸುತ್ತಾನೆ. ಉಚ್ಚ ನ್ಯಾಯಾಲಯ ತೀರ್ಪನ್ನು ಕೊಡುತ್ತದೆ. ಅಷ್ಟೊತ್ತಿಗೆ ನಿಮ್ಮ ಸರ್ಕಾರ ಮೂರೂವರೆ ಲಕ್ಷ ಟನ್ ಕಲ್ಲಿದ್ದಲ್ಲನ್ನು ಖರೀದಿ ಮಾಡಿರುತ್ತದೆ. ಆಗ ಉಚ್ಚ ನ್ಯಾಯಾಲಯ ಈಗಾಗಲೇ ಕಲ್ಲಿದ್ದಲು ಖರೀದಿಯಾಗಿ ಹೋಗಿದೆ, ಏನೂ ಮಾಡುವುದಕ್ಕಾಗುವುದಿಲ್ಲ, ನೀವು ಆ ಮೂರುವರೆ ಲಕ್ಷ ಟನ್ ಕಲ್ಲಿದ್ದಲು ಏನು ಖರೀದಿ ಮಾಡಿದ್ದೀರೋ ಅದಕ್ಕೆ payment ಮಾಡಿ, ಇನ್ನು ಮುಂದೆ

ಖರೀದಿ ಮಾಡಬೇಡಿ, stop ಮಾಡಿ ಎಂದು ಆದೇಶ ಕೊಡುತ್ತದೆ. ಈ ಆದೇಶ ಕೊಟ್ಟಮೇಲೆ ಪುನ: ಏಕಪೀಠಕ್ಕೆ ಹೋಗಿ ನೀವು ನ್ಯಾಯವನ್ನು ಕೇಳಿ ಎಂದು ಅಲ್ಲಿಂದ ಕಳುಹಿಸಿಕೊಡುತ್ತಾರೆ. ಏಕಪೀಠಕ್ಕೆ ಬಂದು ಅಲ್ಲಿ ಏನು ತೀರ್ಪು ಕೊಡುತ್ತಾರೆ? ಅಲ್ಲಿ ಅಂತಿಮವಾಗಿ ತೀರ್ಪನ್ನು ಕೊಟ್ಟು, ಇದು ತಪ್ಪು, ಈ ರೀತಿ ಎರಡು ಲಕ್ಷ ಟನ್‌ಗೆ ಸಂಧಾನ ನಡೆಸಿ ಆರು ಲಕ್ಷ ಟನ್ ಖರೀದಿ ಮಾಡಿರುವುದು ಅಪರಾಧ, ಭಾಗವಹಿಸಿದಂತಹ ಕಂಪನಿಗಳಿಗೆ ನಷ್ಟವಾಗಿದೆ. ಅದಕ್ಕೋಸ್ಕರವಾಗಿ ಇಲ್ಲಿ ಯಾವುದು ಪ್ರೇರಣೆ ಇಲ್ಲ, ಈ ಸರ್ಕಾರ ಕೊಟ್ಟಿರತಕ್ಕಂಥ ಯಾವುದೇ ಉತ್ತರಗಳು ಸರಿಯಾದುದಲ್ಲ, ಆದರೆ ಇದು ಮಾನ್ಯ ಮುಖ್ಯಮಂತ್ರಿಗಳ ಪತ್ರ ಒಂದರಿಂದಲೇ ಈ ಚಿತಾವಣೆ ನಡೆದಿದೆ, ಇವತ್ತು ಕಾನೂನಿನ ಉಲ್ಲಂಘನೆಯಾಗಿದೆ ಎಂದು ನ್ಯಾಯಾಲಯ ತನ್ನ judgementನಲ್ಲಿ ಹೇಳಿದೆ. ಅಲ್ಲದೆ ಮೂರು ಜನ ಕಾರ್ಯದರ್ಶಿಗಳಿಗೆ ತಲಾ 25 ಸಾವಿರ ರೂಪಾಯಿಯಂತೆ ಯಾವ ಕಂಪನಿ ಭಾಗವಹಿಸಿತ್ತು, ಯಾವ ಕಂಪನಿ ಕೋರ್ಟ್‌ಗೆ ಹೋಗಿದ್ದರು, ಅವರಿಗೆ ದಂಡದ ರೂಪದಲ್ಲಿ ನೀವು ಕಟ್ಟಬೇಕು ಎನ್ನುವ ಆದೇಶವನ್ನು ಕೊಡುತ್ತದೆ. ಇದು ಹೈಕೋರ್ಟ್ ಛೀಮಾರಿ ಹಾಕಿದ್ದಲ್ಲವೇ? ನಿಮ್ಮ ಕಾರ್ಯದರ್ಶಿಗಳಿಗೆ ದಂಡ ಕಟ್ಟಿ ಎಂದರೆ ಮುಖ್ಯಮಂತ್ರಿಗಳೇ ದಂಡ ಕಟ್ಟಿದ ಹಾಗೆ ಅಲ್ಲವೆ? ಯಾವುದಾದರೂ ಒಂದು ಕೋರ್ಟ್‌ನಲ್ಲಿ ನಿಜವಾಗಿ ಛೀಮಾರಿ ಹಾಕಿ, ಮುಖ್ಯಮಂತ್ರಿಗಳು ಇದರಲ್ಲಿ ಮಧ್ಯಪ್ರವೇಶ ಮಾಡಿ ಅಕ್ರಮವಾಗಿ ಕಲ್ಲಿದ್ದಲನ್ನು ಖರೀದಿ ಮಾಡಿಸಿದ್ದಾರೆ ಎನ್ನುವಂತಹ ನಿರ್ಣಯವನ್ನು ಮಾಡಿ ಕೋರ್ಟ್‌ನಲ್ಲಿ ತೀರ್ಪು ಕೊಟ್ಟರೆ, ಅದರ ಬಗ್ಗೆ ಮಾನ್ಯ ಸಭಾನಾಯಕರೇ, ಮೊನ್ನೆ ದಿವಸ ನೀವು ಇಲ್ಲಿ ಇಷ್ಟೆಲ್ಲ ನಡೆದಿದೆ ಎಂದು ಏಕೆ ಹೇಳಲಿಲ್ಲ? ಅದು ಏನೋ ನಡೆಯಿತು, ನಡೆಯಿತು ಎಂದು ಹೀಗೆ ಮುಗುಸಿಬಿಟ್ಟಿರಲ್ಲ? ರೇವಣ್ಣನವರ ಮೇಲೆ, ಕಾಂಗ್ರೆಸ್‌ನವರ ಮೇಲೆ ಬಹಳ ಅಘೋರವಾಗಿ, ಇವರಿಂದ ಈ ದೇಶ ಹಾಳಾಗಿ ಹೋಗಿದೆ, ನಾನು ಬಂದು ಉಳಿಸಿದ್ದೇನೆ ಎಂದು ಎದೆ ತಟ್ಟಿ ಹೇಳಿದರಲ್ಲ? ಈ ಆಪಾದನೆಯನ್ನು ನೀವು ಹೇಳಬಹುದಾಗಿತ್ತಲ್ಲ. ಈ ವಿಚಾರವನ್ನು ನೀವು ಏತಕ್ಕೋಸ್ಕರ ಸದನದಲ್ಲಿ ಮರೆಮಾಚಿದಿರಿ? ಇದು ಈ ರಾಜ್ಯದ ಜನತೆಗೆ

ಗೊತ್ತಿಲ್ಲವೇ? ಇದು ಈ ರಾಜ್ಯದ ಜನತೆಗೆ ಗೊತ್ತಾಗುವುದು ಬೇಡವೆ? ಯಾವ ಉದ್ದೇಶಕ್ಕಾಗಿ ನೀವು ಈ ಸದನದಲ್ಲಿ ಮರೆಮಾಚಿದಿರಿ? ನಾನು ಬರೆದ ಪತ್ರದಿಂದಲೇ ಹೆಚ್ಚಿಗೆ ಪ್ರಮಾಣದಲ್ಲಿ ಕಲ್ಲಿದ್ದಲನ್ನು ಖರೀದಿ ಮಾಡುವುದಕ್ಕೆ ಕಾರಣವಾಗಿದೆ, ಅದರಿಂದ ಕೋರ್ಟ್‌ನಲ್ಲಿ 25 ಸಾವಿರ ರೂಪಾಯಿ ದಂಡವನ್ನು ವಿಧಿಸಿದ್ದಾರೆ ಎನ್ನುವಂತಹ ಮಾತನ್ನು ನೀವು ಹೇಳುವುದಕ್ಕೆ ಆಗಲಿಲ್ಲವೇ? ನೀವು ಅದನ್ನು ಹೇಳಬಹುದಾಗಿತ್ತಲ್ಲ? ಈ ರೀತಿ ಕಾನೂನುಬಾಹಿರವಾದಂತಹ ಕೆಲಸಗಳನ್ನು ಮಾಡಿಕೊಂಡು ಬೇರೆಯವರ ಮೇಲೆ ಆಪಾದನೆಗಳನ್ನು ಹೊರಿಸುವಂತಹ ಕೆಲಸವನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಬಿಡಬೇಕಾಗುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ಇದು ಈ ಸದನಕ್ಕೆ ಮಾಡಿರುವಂತಹ ಅಗೌರವ. ಇದು ಹಕ್ಕುಚ್ಯುತಿಗೆ ಬರುತ್ತದೆ. ಅವರು ಹಕ್ಕುಚ್ಯುತಿಯನ್ನು ಮಾಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, point of order, ಮಾನ್ಯ ಸದಸ್ಯರು ನೇರವಾಗಿ ಮುಖ್ಯಮಂತ್ರಿಗಳು ಕಾನೂನುಬಾಹಿರವಾಗಿ ಎನ್ನುವಂತಹ ಪದವನ್ನು ಉಪಯೋಗ ಮಾಡುತ್ತಿದ್ದಾರೆ, ಇದು ನೇರವಾಗಿ ಅವರಿಗೆ ಆಪಾದನೆ ಮಾಡಿದಂತಾಗುತ್ತದೆ. ಹಾಗಾಗಿ specific ಆಗಿ ಮುಖ್ಯಮಂತ್ರಿಗಳ ವಿರುದ್ಧ ಏನಾದರೂ ಆಪಾದನೆ ಮಾಡುವುದಿದ್ದರೆ ಪ್ರತ್ಯೇಕವಾಗಿ notice ಕೊಡಲಿ. ಅದು ಬಿಟ್ಟು ಈ ರೀತಿ ಅವರು ಕಾನೂನುಬಾಹಿರವಾಗಿ ಮಾಡುತ್ತಿದ್ದಾರೆಂದು ನೇರವಾಗಿ ಮುಖ್ಯಮಂತ್ರಿಯವರಿಗೆ ಆಪಾದನೆ ಮಾಡುವಂತಾದ್ದು ಇದು ಸರಿಯಾದುದು ಅಲ್ಲ.

ಶ್ರೀ ಕೆ. ಎಂ. ಶಿವಲಿಂಗೇಗೌಡ : ನಾನು ಆಪಾದನೆ ಮಾಡಿಲ್ಲ. ಅವರು ಹೇಳಿದ ಉತ್ತರ ಸದನದಲ್ಲಿ ರೆಕಾರ್ಡ್ ಆಗಿದೆ.

ಅಧ್ಯಕ್ಷರು : ನೀವು ಸೀಮಿತವಾಗಿ ಮಾತನಾಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ನಾನು ಅವರು ಹೇಳಿರುವಂತಹ ಉತ್ತರಕ್ಕೆ ಸಮಂಜಸ ಉತ್ತರ ಕೊಟ್ಟಿದ್ದೇನೆ ಹೊರತು, ನಾನು quote ಮಾಡಿದ್ದೇನೆ ಹೊರತು, ನಾನು ಆಪಾದನೆ ಮಾಡಿಯೇ ಇಲ್ಲ.

ಡಾ: ಶರಣಪ್ರಕಾಶ್ ಆರ್.ಪಾಟೀಲ್: ಅವರು court judgment quote ಮಾಡುತ್ತಿದ್ದಾರೆ. He is not making allegation on his own.

ಅಧ್ಯಕ್ಷರು: ನೀವು ರಾಜ್ಯಪಾಲರ ಭಾಷಣದಲ್ಲಿ ಎಲ್ಲಾ ವಿಚಾರವನ್ನು ಎತ್ತಿಕೊಂಡು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ : ನೋಟೀಸ್ ಕೊಟ್ಟಿದ್ದೇವಲ್ಲ ?

ಅಧ್ಯಕ್ಷರು : ಏನು ನೋಟೀಸ್ ಕೊಟ್ಟಿದ್ದು ? ಯಾವ ನೋಟೀಸ್ ಕೊಟ್ಟಿದ್ದು?

ಶ್ರೀ ಹೆಚ್.ಸಿ. ಬಾಲಕೃಷ್ಣ: ನಿಯಮ 60ರಲ್ಲಿ ಚರ್ಚೆಗೆ ಅವಕಾಶ ಕೊಡಿ ಎಂದು ನೋಟೀಸ್ ಕೊಟ್ಟಿದ್ದೇವಲ್ಲ.

ಅಧ್ಯಕ್ಷರು: ಹೌದು, ಅದನ್ನು ಮತ್ತೆ ಈಗ ಪ್ರಸ್ತಾಪ ಮಾಡುತ್ತೀರ?

ಶ್ರೀ ಹೆಚ್. ಸಿ. ಬಾಲಕೃಷ್ಣ: ಈಗ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿ ಎಂದು ಹೇಳಿದಿರಿ, ರಾಜ್ಯಪಾಲರ ಭಾಷಣದಲ್ಲಿ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು : ನೀವು ಪ್ರತಿಯೊಂದಕ್ಕೂ ಈ ರೀತಿ ಮಾತನಾಡುವುದಾದರೆ ......

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ಅವರು ಕೋರ್ಟಿನ ವಿಷಯ ಪ್ರಸ್ತಾಪ ಮಾಡುತ್ತಿದ್ದಾರೆ. ಅದರ ಒಂದು order copy ಶಾಸಕರು ತಮ್ಮ ಕಡೆಗೆ ತಂದು ಕೊಡಲಿ. ಅದನ್ನು ಕೊಡಿ.

ಅಧ್ಯಕ್ಷರು : ಕೊಟ್ಟಿದ್ದಾರೆ.

ಶ್ರೀ ಹೆಚ್. ಸಿ. ಬಾಲಕೃಷ್ಣ : ಕೊಡುತ್ತಾರೆ, ಕಳುಹಿಸುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ಅದರಲ್ಲಿ ಈ ರೀತಿ ಬರೆದಿದ್ದಾರೆ, observation ಮಾಡಿದ್ದಾರೆ ಎನ್ನುವುದನ್ನು ಎಲ್ಲಾ ಹೇಳುತ್ತೀರಿ. ಅದನ್ನು ಕಳುಹಿಸಿಕೊಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಈ ಆಪಾದನೆ ಏನಾದರೂ ಸತ್ಯದಿಂದ ಕೂಡಿಲ್ಲವೆನ್ನುವುದಾದರೆ ನನಗೆ ಶಿಕ್ಷೆ ಕೊಡಿ. ನಾನು ಅನುಭವಿಸುವುದಕ್ಕೆ ತಯಾರಾಗಿದ್ದೇನೆ.

ಅಧ್ಯಕ್ಷರು : ಶಿವಲಿಂಗೇಗೌಡರೆ, ಈಗ ತಾವು ಸೀಮಿತವಾಗಿ ಮಾತನಾಡಿ, ಅರ್ಧ ಗಂಟೆಯಾಯಿತು, ಇನ್ನು ನಿಮ್ಮ ನಾಯಕರು ಮಾತನಾಡಬೇಕಾಗಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಆಯಿತು ಅಧ್ಯಕ್ಷರೆ, ನಾನು ಹೆಚ್ಚಿಗೆ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಆಯಿತು, ಆ ವಿಚಾರ ಮುಗಿಯಿತು, ನಮ್ಮ clarification ಈ ಸದನಕ್ಕೆ ಕೊಡಬೇಕಾಗಿತ್ತು, ಕೊಟ್ಟಿದ್ದೇನೆ. ಅದರ ಜೊತೆಯಲ್ಲಿ ಇವತ್ತು ರಾಜ್ಯಪಾಲರ ನಿರ್ಣಯದ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಮಾತನಾಡುವುದಾದರೆ, ಇವತ್ತು ನಮ್ಮನ್ನೆಲ್ಲ ಅಧ್ಯಕ್ಷರನ್ನಾಗಿ ನೇಮಿಸಿ ಮಾನ್ಯ ಸುಧಾಕರ್‌ರವರು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ, ಎಂಎಲ್‌ಎಗಳಿಗೆ ಗೌರವ ತರುವಂತಹ ಕೆಲಸವನ್ನು ಮಾಡಿದ್ದಾರೆ. ನಾವು ಇಲ್ಲವೆಂದು ಹೇಳುವುದಿಲ್ಲ. ಆದರೆ ನಾವು bore–wells select ಮಾಡಿದ್ದೇವೆ. ನಾವು ಅವರನ್ನು select ಮಾಡಿ ಎಂಟು ತಿಂಗಳಾಯಿತು. ಜನ ದಿನಾ ಯಾವಾಗ ಬರುತ್ತದೆ borewell ಎಂದು ನಮ್ಮ ಮನೆಯಲ್ಲಿ ಬಂದು ಕುಳಿತುಕೊಳ್ಳುತ್ತಾರೆ. ನನಗೆ ತಿಳಿದಿರುವ ಆಧಾರದ ಪ್ರಕಾರ ಇವತ್ತಿನವರೆಗೆ ಕೊರೆಯತಕ್ಕಂಥ agency fix ಆಗಿಲ್ಲವೆನ್ನುವ ಒಂದು ವಿಚಾರ ಇದೆ. ಈಗಾಗಲೇ 2009–10ನೇ ವರ್ಷ ಮುಗಿದು 2010–2011ನೇ ವರ್ಷ ಬಂತು. ಇನ್ನು 2009–10ನೇ ಸಾಲಿನ ಗಂಗಾಕಲ್ಯಾಣ ಯೋಜನೆ ಬೋರ್‌ವೆಲ್‌ಗಳನ್ನೆ ಕೊರೆಸುತ್ತಾ ಹೋದರೆ, ನಾವು ಆ ಜನರನ್ನು ಮೇಲೆತ್ತುವುದು ಹೇಗೆ? ಅವರು ನಮ್ಮ ಹತ್ತಿರ ಬಂದು ಪದೇ ಪದೇ ಪೀಡಿಸುತ್ತಿರುತ್ತಾರೆ. ಅದು ಅವರ ಧರ್ಮ, ಅದಕ್ಕೋಸ್ಕರ ಅವರಿಗೆ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ ಆ ಬೋರ್‌ವೆಲ್ ಏಜೆನ್ಸಿಯನ್ನು ಫಿಕ್ಸ್ ಮಾಡಿ, ಅದನ್ನು ಕೊರೆಯುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ದಯಮಾಡಿ ವಿನಂತಿ ಮಾಡುತ್ತೇನೆ. ನಾವು ಈಗ ಏನೂ

ಮಾಡುವುದಕ್ಕೆ ಆಗುವುದಿಲ್ಲ. ಅವರನ್ನು ಟೀಕೆ ಮಾಡಿಕೊಂಡೇ ಹೋದರೆ ಕೆಲಸ ಮಾಡುವುದಿಲ್ಲ. ಆದುದರಿಂದ ನಾವು ಅವರಿಗೆ ಸ್ವಲ್ಪ ವಿನಂತಿಗಳು, ಮನವಿಗಳನ್ನು ಮಾಡಿಕೊಳ್ಳೋಣ. ನಾವು ಬರೀ ಟೀಕೆ ಮಾಡುವುದಲ್ಲ. ನಮ್ಮ ಕ್ಷೇತ್ರದ ಜನ ಏನು ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ, ಅದನ್ನು ಸದನದ ಮುಖಾಂತರ ಸರ್ಕಾರದ ಗಮನಕ್ಕೆ ತರುತ್ತೇವೆ. ನಾವು ಯಾವ ವಿಷಯಗಳನ್ನು ಗಮನಕ್ಕೆ ತರುತ್ತೇವೆ, ಅದು ಆಗಬೇಕಾಗಿದೆ. ಆದರ ಜೊತೆಯಲ್ಲಿ ಕೊರೆದಂಥ ಬೋರ್‌ವೆಲ್‌ಗೆ ಮೂರು, ನಾಲ್ಕು, ಐದು ವರ್ಷಗಳಿಂದ current connection ಕೊಟ್ಟಿಲ್ಲ. ಎಲ್ಲಾ ಕ್ಷೇತ್ರಗಳಲ್ಲೂ ಈ ರೀತಿಯಾಗಿ ಇದೆಯೆಂದು ನಾನು ಭಾವಿಸಿದ್ದೇನೆ. ನಾವು ಅಲ್ಲಿ ನೋಡುವಂಥಾದ್ದು ಏನೆಂದರೆ ಇಲಾಖೆಯವರು ಏನು ಮಾಡುತ್ತಾರೆಂದರೆ ನೀರು ಬಂತೋ, ಇಲ್ಲವೊ ಗೊತ್ತಿಲ್ಲ. ಅವರು ಅದಕ್ಕೆ ಬೇಕಾದಂಥ ಸಾಮಾನುಗಳನ್ನು ಮೊದಲು purchase ಮಾಡಿಬಿಡುತ್ತಾರೆ. ಅದನ್ನು ತೆಗೆದುಕೊಂಡು ಅವರ ಮನೆಯ ಬಾಗಿಲಿನಲ್ಲಿ ಹಾಕಿಕೊಂಡು ಬಿಡುತ್ತಾರೆ. ಈ ರೀತಿಯಾಗುವಂಥದ್ದು ಮೊದಲು ನಿಲ್ಲಬೇಕು, ಮತ್ತು ವಿದ್ಯುಚ್ಛಕ್ತಿಯನ್ನು ಕೊಡಿ, ಇದನ್ನು ಕೊಟ್ಟ ನಂತರ, ಅದಕ್ಕೆ ಬೇಕಾದಂಥ Motor, G.I.Pipes, ಸಲಕರಣೆಗಳನ್ನು ಕೊಡಿಸುವಂಥದ್ದನ್ನು ಮಾಡಿ. ಇದು ಏನಾಗುತ್ತದೆಂದರೆ, ಈ ಬಗ್ಗೆ ಮೊನ್ನೆ ಒಂದು complaint ಆಯಿತು. ಅವನು ಒಂದು motor ಅನ್ನು ಮನೆಗೆ ತೆಗೆದುಕೊಂಡು ಹೋಗಿ ಇಟ್ಟುಕೊಂಡಿದ್ದನು. ಅದನ್ನು ಇಲಾಖೆಯವರು ತಂದು ಇಟ್ಟಿದ್ದರು, ಅವನು ಯಾರಿಗೋ ಸಾಲವನ್ನು ಕೊಡಬೇಕಾಗಿತ್ತು. ಅವನು ಏನು ಮಾಡಿದನೆಂದರೆ ದುಡ್ಡು ಕೊಡು, ಇಲ್ಲವೆಂದರೆ motor ಅನ್ನು ತೆಗೆದುಕೊಂಡು ಹೋಗುತ್ತೇನೆಂದು ಅದನ್ನು ತೆಗೆದುಕೊಂಡು ಹೋದ. ಅದು ಆದನಂತರ ಸಮಾಜ ಕಲ್ಯಾಣ ಇಲಾಖೆಯವರು ಬಂದು complaint ಕೊಡಬೇಕಾದಂಥ ಪರಿಸ್ಥಿತಿ ಬಂತು. ಅವನ ಮನೆಯ ಹತ್ತಿರ motor ಅನ್ನು ಇಟ್ಟು ಮೂರು ವರ್ಷಗಳಾಗಿತ್ತು. ಆ motorಗೆ ವಿದುಚ್ಛಕ್ತಿಯನ್ನೇ ಕೊಟ್ಟಿಲ್ಲ, ಇಂಥಾದ್ದು ಬಹಳ ಇದೆ. ಈ ಒಂದು ಸಮಸ್ಯೆಯನ್ನು ದಯಮಾಡಿ ಬಗೆಹರಿಸುವುದಕ್ಕೆ ಸರ್ಕಾರ

ತೀವ್ರವಾದಂಥ ಕ್ರಮವನ್ನು ಜರುಗಿಸಬೇಕೆಂದು ಹೇಳಬಯಸುತ್ತೇನೆ. ಇದರ ಜೊತೆಯಲ್ಲಿ ಸಾಲ ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳುತ್ತಾರೆ. ನನ್ನ ಕ್ಷೇತ್ರದಲ್ಲಿ ಸುಮಾರು 160 ಲಕ್ಷದಿಂದ 180 ಲಕ್ಷ ಜನ ಮತದಾರರು ಇದ್ದಾರೆ. ಅದರಲ್ಲಿ ಎರಡು, ಮೂರು ಜನರಿಗೆ ಎಲ್ಲಾ ಸಾಲಗಳನ್ನು ಕೊಡುತ್ತೇವೆಂದರೆ ಆ ಜನರೆಲ್ಲಾ ಉದ್ಧಾರ ಆಗುತ್ತಾರ? ನೀವು ತಂದಿರುವಂಥ scheme ಒಳ್ಳೆಯದಿದೆ. ಅವರು ಆರ್ಥಿಕವಾಗಿ ಮುಂದೆ ಬರಬೇಕೆಂದರೆ ನೀವು ಇಟ್ಟಿರುವಂಥ ಯೋಜನೆ ಏನು ಇದೆ, ದಿ:ದೇವರಾಜ ಅರಸುರವರು ಆರ್ಥಿಕ ಸಬಲತೆಯನ್ನು ಹಿಂದುಳಿದ ವರ್ಗದವರಿಗೆ ಕೊಡಬೇಕೆನ್ನುವ ಬಗ್ಗೆ ಒಂದು ನಿರ್ಣಯವನ್ನು ಮಾಡಿ, ಹಿಂದುಳಿದ ವರ್ಗಗಳ ಆಯೋಗವನ್ನು ಏನು ರಚನೆ ಮಾಡಿದರು, ಅದು ಅಂದಿನಿಂದ ಇವತ್ತಿನವರೆಗೂ ಬರುಬರುತ್ತಾ ಕ್ಷೀಣಿಸುತ್ತಾ ಬರುತ್ತಿದೆ. ನೀವು ಆರ್ಥಿಕ ಶಕ್ತಿಯನ್ನು ಹೆಚ್ಚಿನ ಮಟ್ಟದಲ್ಲಿ ತುಂಬಬೇಕು. ಆ ರೀತಿ ಮಾಡಿ ಒಂದು ಕ್ಷೇತ್ರಕ್ಕೆ ಕೊನೆ ಪಕ್ಷ ಐದು ನೂರು ಜನರಿಗೆ, ಒಂದು ಸಾವಿರ ಜನ ಫಲಾನುಭವಿಗಳನ್ನು ಗುರುತಿಸಿ, ಅವರಿಗೆ ಸಾಲವನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆನ್ನುವಂಥ ಮಾತನ್ನು ಹೇಳುತ್ತೇನೆ. ಇನ್ನು ಇವರು ಮತ್ತೊಂದು ತಾಂಡಾಗಳ ಅಭಿವೃದ್ಧಿ ಮಾಡುವ ಬಗ್ಗೆ ಕಾರ್ಯಕ್ರಮವನ್ನು ಜಾರಿಗೆ ತಂದರು. ಈ ರಾಜ್ಯದಲ್ಲಿ ಸಾವಿರಾರು, ಲಕ್ಷಾಂತರ ಲಂಬಾಣಿ ತಾಂಡಾಗಳು ಇವೆ. ಈ ತಾಂಡಾಗಳು ಇವತ್ತಿನವರೆಗೂ ರೆವಿನ್ಯೂ ಗ್ರಾಮಗಳಾಗಿ ಪರಿವರ್ತನೆಯಾಗಿಲ್ಲ. ಅವು ಇನ್ನೊಂದು ಊರಿನ ಹೆಸರಿನ ಹಿಡಿತದಲ್ಲೆ ಇವೆ. ಆದುದರಿಂದ ಈ ತಾಂಡಾಗಳನ್ನು ರೆವಿನ್ಯೂ ಗ್ರಾಮಗಳನ್ನಾಗಿ ಮಾಡಬೇಕು. ಗೊಲ್ಲರ ಹಟ್ಟಿಗಳನ್ನು ರೆವಿನ್ಯೂ ಗ್ರಾಮಗಳನ್ನಾಗಿ ಮಾಡಬೇಕು, ಇದರ ಜೊತೆಗೆ ದಾಖಲೆ ಗ್ರಾಮಗಳನ್ನು ಮಾಡಬೇಕಾಗುತ್ತದೆ. ಅದರ ಜೊತೆಗೆ ಇವತ್ತು ಲಂಬಾಣಿ ತಾಂಡಾಗಳನ್ನು ಅಭಿವೃದ್ಧಿ ಮಾಡುತ್ತೇವೆಂದು ಹೇಳಿ, ದೊಡ್ಡ ದೊಡ್ಡದಾಗಿ ಭಾಷಣವನ್ನು ಮಾಡುವುದು ಬೇಡ. ಕೇವಲ ಒಂದು ಕ್ಷೇತ್ರಕ್ಕೆ ಒಂದು ಜಿಲ್ಲೆಗೆ ಹತ್ತು ಲಕ್ಷ ರೂಪಾಯಿಗಳನ್ನು ಕೊಡುವುದರಿಂದ ಇಡೀ ಜಿಲ್ಲೆಯಲ್ಲಿರುವ ಲಂಬಾಣಿಗಳು ಉದ್ಧಾರ ಆಗುವುದಕ್ಕೆ ಸಾಧ್ಯವಿಲ್ಲ. ನಮ್ಮ

ಜಿಲ್ಲೆಗೆ ಒಂದು ಸೇವಾಲಾಲ್ ಭವನವನ್ನು ಕೊಟ್ಟಿದ್ದರು, ಇದರಿಂದ ಏನಾಗುತ್ತದೆ? ಈ ರೀತಿ ತಾವು ಅವರನ್ನು ಉದ್ಧಾರ ಮಾಡುತ್ತೇವೆಂದು ಸಂಕಲ್ಪವನ್ನು ತೆಗೆದುಕೊಂಡ ಮೇಲೆ.. ..

ಶ್ರೀ ರೇವುನಾಯಕ್ ಬೆಳಮಗಿ: ಮಾನ್ಯ ಅಧ್ಯಕ್ಷರೆ, ಲಂಬಾಣಿ ತಾಂಡಾಗಳ ಅಭಿವೃದ್ಧಿಯ ಬಗ್ಗೆ ಗೌರವಾನ್ವಿತ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಹಿಂದೆ ನಾನು ನನ್ನ ಕ್ಷೇತ್ರದ ಜನತೆಯ ಆಶೀರ್ವಾದದ ಮೇರೆಗೆ ಮತ್ತು ರಾಜಕೀಯ ಪಕ್ಷದ ಆಶೀರ್ವಾದದ ಮೇರೆಗೆ ನಾಲ್ಕು ಬಾರಿ ಶಾಸಕನಾಗಿ ನಾನು ಬಹಳಷ್ಟು ಮುಖ್ಯಮಂತ್ರಿಗಳನ್ನು ನೋಡಿದ್ದೇನೆ, ಗೃಹ ಮಂತ್ರಿಗಳನ್ನು ನೋಡಿದ್ದೇನೆ, ಕಂದಾಯ ಮಂತ್ರಿಗಳನ್ನು ನೋಡಿದ್ದೇನೆ. ನನಗೆ ನೋಡುವಂಥ ಅವಕಾಶ ಸಿಕ್ಕಿದೆ. ನಮ್ಮ ಮಾನ್ಯ ಯಡಿಯೂರಪ್ಪನವರು ದಿಟ್ಟ ಹೆಜ್ಜೆಯನ್ನು ಇಟ್ಟು, ಈ ಬಂಜಾರ ಸಮಾಜದ ಮೇಲೆ ಏನು ಕೃಪೆ ಮಾಡಿದ್ದಾರೆ, ಇವತ್ತು 80 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲು ಈ ವರ್ಷ ಕೊಟ್ಟಿದ್ದಾರೆ, 16 ಕೋಟಿ ರೂಪಾಯಿಗಳನ್ನು ಬಂಜಾರ ಭವನಕ್ಕೆ ಕೊಟ್ಟಿದ್ದಾರೆ, ಅಭಿವೃದ್ಧಿ ಕೆಲಸಗಳು ನಡೆಯುತ್ತಿವೆ. ಇದನ್ನು ಹಂತ ಹಂತವಾಗಿ ಇವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುತ್ತೇವೆಂದು ಮಾನ್ಯ ಕಂದಾಯ ಮಂತ್ರಿಯವರು ಹೇಳಿದ್ದಾರೆ. ನಮ್ಮ ಮಾನ್ಯ ಯಡಿಯೂರಪ್ಪನವರ ನೇತೃತ್ವದ ಸರ್ಕಾರ ತಾಂಡಾ ಜನರನ್ನು ಗುರುತಿಸಿ ಅಭಿವೃದ್ಧಿ ಮಾಡುತ್ತದೆಂದು ಘಂಟಾಘೋಷವಾಗಿ ಹೇಳುತ್ತೇನೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ನಾನು ಅಭಿವೃದ್ಧಿ ಮಾಡಿಲ್ಲವೆಂದು ಹೇಳಿಲ್ಲ, ಮತ್ತೆ ಅವರಿಗೆ ಏನೂ ಕೊಟ್ಟಿಲ್ಲವೆಂದು ಹೇಳಿಲ್ಲ. ನಾನು ಆ ಪ್ರಶ್ನೆಯನ್ನು ಪ್ರಸ್ತಾಪ ಮಾಡಿಲ್ಲ.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಲಂಬಾಣಿ ತಾಂಡಾಗಳ ಸಮಸ್ಯೆ ಏನು ಎಂದರೆ ಅವರಿಗೆ ಮನೆಗಳು ಇಲ್ಲದೇ ಗುಡಿಸಲುಗಳಲ್ಲಿ ವಾಸ ಮಾಡುತ್ತಿದ್ದಾರೆ. ಮೊನ್ನೆ ದಿವಸ ನಮ್ಮ ಕಡೆ ತಾಂಡಾಕ್ಕೆ ಬೆಂಕಿ ಬಿದ್ದು, 60 ಮನೆಗಳು ಸುಟ್ಟು ಹೋಯಿತು. ಇದನ್ನು ಯಾರಿಗೆ ಹೇಳಬೇಕು? ಸರ್ಕಾರ ವಿಶೇಷವಾಗಿ ಲಂಬಾಣಿ ತಾಂಡಾಗಳಿಗೆ ಸಾಕಷ್ಟು ಮನೆಗಳನ್ನು ಕೊಟ್ಟಿದ್ದೀರಿ.

ನಿಮ್ಮ ಕ್ಷೇತ್ರದಲ್ಲೂ ಸಹಿತ ಮನೆಗಳು ಲ್ಯಾಪ್ಸ್ ಆಗಿದೆ. ಇದು ಏಕೆ ಆಯಿತು? ನಿಮಗೆ ಲಂಬಾಣಿ ತಾಂಡಾಗಳ ಬಗ್ಗೆ ವಿಶೇಷವಾದ ಕಾಳಜಿ ಇದ್ದರೆ, ಮನೆಗಳು ಏಕೆ ಲ್ಯಾಪ್ಸ್ ಆಯಿತು? ಎಷ್ಟು ಮನೆಗಳು ಲ್ಯಾಪ್ಸ್ ಆಗಿದೆಯೆಂದರೆ ಸುಮಾರು 45,000 ಮನೆಗಳು ಆಗಿವೆ. ನಿಮ್ಮ ಕ್ಷೇತ್ರದಲ್ಲೂ ಲ್ಯಾಪ್ಸ್ ಆಗಿದೆ, ನನ್ನ ಕ್ಷೇತ್ರದಲ್ಲೂ 800 ಮನೆಗಳು ಹೋಗಿದೆ. ಈ ರೀತಿ ಎಲ್ಲಾ ಕಡೆಗಳಲ್ಲೂ ಆಗಿವೆ. ದಯಮಾಡಿ ನಿಮಗೆ ಇವರ ಬಗ್ಗೆ ನಿಜವಾಗಿ ಕಾಳಜಿ ಇದ್ದರೆ, ನೀವು ಪ್ರಾಮಾಣಿಕರು ನಿಮ್ಮನ್ನು ಎಲ್ಲಾ ವಿಚಾರಗಳಲ್ಲೂ ಮೆಚ್ಚುತ್ತೇನೆ, ಸ್ವಲ್ಪ ಧೈರ್ಯವೂ ಬೇಕು. ನೀವು ಏನಾದರೂ ಮಾಡಿ ಲಂಬಾಣಿ ತಾಂಡಾಗಳಿಗೆ ಮನೆಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿ, ಅದನ್ನು ಕಟ್ಟಿಸುವುದಕ್ಕೆ ಆಗದೇ ವಜಾ ಆಗಿರುವಂಥದ್ದನ್ನು revive ಮಾಡಿಸಿದರೆ ನಿಜವಾಗಿಯೂ ನೀವು ಈ ಜನಾಂಗದವರಿಗೆ ದೊಡ್ಡ ಕೊಡುಗೆ ಕೊಟ್ಟ ಹಾಗೆ ಆಗುತ್ತದೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮಂತ್ರಿಯವರನ್ನು ಕೇಳಬಯಸುವುದೇನೆಂದರೆ ನೀವು ಮಾಡಿದ್ದೀರಿ, ಬಹಳ ಚೆನ್ನಾಗಿವೆ. ಇವರೇ ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಆಗಿದ್ದಾರೆ. ನನ್ನ ಕ್ಷೇತ್ರದಲ್ಲಿ 21 ತಾಂಡಾಗಳು ಬರುತ್ತವೆ. ಯಾವ್ಯಾವ ತಾಂಡಾಗಳಿಗೆ ಎಷ್ಟೆಷ್ಟು special packageನಲ್ಲಿ 80 ಕೋಟಿ ರೂಪಾಯಿಗಳು ಏನು ಬಂದಿದೆ, ಅದು ನಮ್ಮ ಕಣ್ಣಿಗೆ ಕಾಣಿಸಿಲ್ಲ, ಹಾಗಾಗಿ ಅದು ಎಲ್ಲಿ Pipelineನಲ್ಲಿ ಇದೆಯೋ ಏನೋ ಗೊತ್ತಿಲ್ಲ, ಮಾಡಿದರೆ ಬಹಳ ಚೆನ್ನಾಗಿರುತ್ತದೆ. ಇನ್ನು ಮುಂದೆ ಇಲ್ಲಿಗೆ ಮಾಡುವುದು ಇದೆ. ಈ ತಾಂಡಾಗಳಿಗೆ ಮಾಡುವಂಥದ್ದು ಜರೂರು ಇದೆ. ಕುಡಿಯುವ ನೀರಿನಿಂದ ಹಿಡಿದು ಬಹಳಷ್ಟು ಸಮಸ್ಯೆಗಳು ಇವೆ. ಇಲ್ಲಿ ಯಾವ ಅನುದಾನಗಳು special ಆಗಿ ಬಂದಿಲ್ಲ ಅನ್ನುವುದು ನನ್ನ ಅಭಿಪ್ರಾಯ. ಅದು ಆ ತಾಂಡಾಗಳಿಗೆ ಬಂದಿಲ್ಲವೆಂದು ನನಗನಿಸುತ್ತದೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿದ ಹಾಗೆ ಬಂಜಾರ ನಿಗಮವನ್ನು ಈಗ ಪ್ರಾರಂಭ ಮಾಡಿದ್ದೀರಿ, ನಾನು ಅಲ್ಲಿ ಆಫೀಸ್‌ಗೆ ಹೋಗಿದ್ದೆ, ಸಂತೋಷ. ಆದರೆ ಹಣಕಾಸನ್ನು ಒದಗಿಸಿಲ್ಲ, ಹಣ ಬಿಡುಗಡೆಯಾಗಿಲ್ಲ. ಬಂಜಾರ ನಿಗಮ ಪ್ರಾರಂಭವಾಗಿ ಒಂದು

ವರ್ಷವಾಯಿತು, ಈಗ office open ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲಿ ಬಂಜಾರ ಜನಾಂಗದವರು ಹೆಚ್ಚಿಗೆ ಇದ್ದಾರೆ. ಆದುದರಿಂದ ದಯಮಾಡಿ ಅದನ್ನು ಇನ್ನು ಹೆಚ್ಚಿಗೆ ಅಭಿವೃದ್ಧಿ ಪಡಿಸಿ, ಏಕೆಂದರೆ ಅವರು ಬಹಳ ವರ್ಷಗಳಿಂದ ಅನಾಗರಿಕರಾಗಿಯೇ ಇದ್ದಾರೆ. ಅವರನ್ನು ಎಲ್ಲಿ ಹೋಗಿ ನೋಡಿದರೂ ಇನ್ನೂ ಅವರು ಜಲ್ಲಿ ಒಡೆಯುವುದು ತಪ್ಪಿಲ್ಲ. ಅವರಿಗೆ ಬಹಳ ಕಷ್ಟವಿದೆ, ಆದ್ದರಿಂದ ಆ ಜನಾಂಗದವರನ್ನು ಮೇಲಕ್ಕೆ ಎತ್ತಬೇಕೆಂದು ಪ್ರಯತ್ನ ಮಾಡಲು ಹೊರಟಿದ್ದೀರಿ. ನಾನು ಮಾನ್ಯ ಯಡಿಯೂರಪ್ಪನವರು ಮಾಡಿಲ್ಲವೆಂದು ಹೇಳಿಲ್ಲ. ನೀವು ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿದ್ದೀರಿ. ಅದಕ್ಕೆ ಆರ್ಥಿಕ ಶಕ್ತಿಯನ್ನು ಹೆಚ್ಚಿಗೆ ತುಂಬಿ, ಅವರು ಬರೀ ಬಾಯಲ್ಲಿ ಹೇಳುವುದರಲ್ಲೆ ಉದ್ಧಾರವಾಗುವುದು ಬೇಡ, physically ಆಗಿಯೂ ಆಗಲಿಯೆಂಬ ಉದ್ದೇಶದಿಂದ ಹೇಳುತ್ತಿದ್ದೇನೆಯೇ ಹೊರತು ಮಾಡಿಲ್ಲವೆಂದು ಹೇಳುತ್ತಿಲ್ಲ. ಬರೀ ಒಂದು ಸಮೂದಾಯ ಭವನವನ್ನು ಕೊಟ್ಟು ಬಿಟ್ಟರೆ ಇಡೀ ಕರ್ನಾಟಕ ರಾಜ್ಯದಲ್ಲಿರುವ ಬಂಜಾರ ಸಮಾಜದವರು ಉದ್ಧಾರ ಆದರೆಂದು ಅಲ್ಲ. ಒಂದು ಲಕ್ಷ, ಒಂದೂವರೆ ಕೋಟಿ ಕೊಟ್ಟರೆ ಆಗುವುದಿಲ್ಲ. ಈ ಸಂದರ್ಭದಲ್ಲಿ ಮನೆಗಳ ವಿಚಾರವಾಗಿ ಮಾನ್ಯ ಜಯಚಂದ್ರರವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ನೀವು ಅಧಿಕಾರಕ್ಕೆ ಬಂದು ಎರಡು ವರ್ಷಗಳಾಯಿತು, ನೀವು ಆಶ್ರಯ ಯೋಜನೆಯಲ್ಲಿ ಎಷ್ಟು ಮನೆಗಳನ್ನು ಕೊಟ್ಟಿದ್ದೀರಿ? ಒಂದು ಪಂಚಾಯತಿಗೆ 36 ಮನೆಗಳನ್ನು ಕೊಟ್ಟಿದ್ದೀರಿ. IAY ಅನ್ನು ಬಿಡಿ, ಅದು ಕೇಂದ್ರ ಸರ್ಕಾರದ ಯೋಜನೆ, ನೀವು ಕರ್ನಾಟಕ ರಾಜ್ಯದ ಬಜೆಟ್‌ನಿಂದ ಎರಡು ವರ್ಷಗಳಲ್ಲಿ ತೆಗೆದು ಕೊಟ್ಟಿರುವಂಥದ್ದು ಎಷ್ಟು? ಒಂದು ಪಂಚಾಯಿತಿಯಲ್ಲಿ 500 ರಿಂದ 600 ಜನ, ಕೆಲವು ಕಡೆಗಳಲ್ಲಿ ಸಾವಿರ ಜನ ವಸತಿ ರಹಿತರು ಇರುತ್ತಾರೆ. ನೀವು 36 ಮನೆಗಳನ್ನು ಕೊಟ್ಟುಬಿಟ್ಟರೆ ಅವರು ಉದ್ಧಾರ ಆಗಿ ಬಿಟ್ಟರಾ? ನೀವು ನಾವು ಮಾಡಿದ್ದೇವೆಂದು ಹೇಳುತ್ತೀರಿ, ನೀವು ರಾಜ್ಯದ total ಅನ್ನು ಹೇಳಬೇಡಿ, ಹಂಚಿಕೊಂಡು ಬನ್ನಿ, ಪಂಚಾಯಿತಿಗೆ 35 ಮನೆಗಳನ್ನು ಮಾತ್ರ ಕೊಟ್ಟಿರುವುದು. ಅವರು ಹೇಳಿದ ಹಾಗೆ ಬಂಜಾರ ನಿಗಮಕ್ಕೆ ಮನೆ

ಬಂದಿದ್ದು. ಅದನ್ನು ರಾಜೀವಗಾಂಧಿ ನಿಗಮದಲ್ಲಿ ಇಂದಿರಾ ಆವಾಸ್ ಯೋಜನೆಗೆ (I.A.Y.) covert ಮಾಡಿದರು ಎಂದು ಕಾಣುತ್ತದೆ. ಅವು ಹೋದವೋ, ಇವೆಯೋ ಗೊತ್ತಿಲ್ಲ. ನನ್ನ ಕ್ಷೇತ್ರಕ್ಕೂ 660 ಮನೆಗಳನ್ನು ಕೊಟ್ಟಿದ್ದರು. ಸರಿಯಾಗಿ ಬರಲಿಲ್ಲ ಎಂದು ನಂತರ ಅವುಗಳನ್ನು ತೆಗೆದು ಎತ್ತ ಕಡೆಗೆ ಹಾಕಿದರೋ ಗೊತ್ತಿಲ್ಲ. ರಾಜೀವ್ ಗಾಂಧಿ ವಸತಿ ನಿಗಮ ಎನ್ನುವುದು ಒಂದು ದೊಡ್ಡ ಸಮುದ್ರ. ಆ ಸಮುದ್ರದಲ್ಲಿ ಯಾರು minute ಹಾಕಿದರೂ ಮನೆಯನ್ನು ಕೊಡುತ್ತಾರೆ. ಅಲ್ಲಿಗೆ ಹೋಗಿ, ನಾನು ಈ ಪಕ್ಷದ ಕಾರ್ಯಕರ್ತ ಎಂದು ಹೇಳಿದರೆ ಅವನಿಗೂ ಮನೆಯನ್ನು ಕೊಡುತ್ತಾರೆ. ಅದಕ್ಕೆ limit ಇಲ್ಲ. ಯಾರು ಬೇಕಾದರೂ ಕೇಳಬಹುದು, ಯಾರಿಗೆ ಬೇಕಾದರೂ ಮನೆಗಳನ್ನು ಕೊಡುತ್ತಾರೆ. ಅದಕ್ಕೆ ನಿಯಮಾವಳಿಗಳಿಲ್ಲ. ಹೇಗೆ ಬೇಕಾದರೂ ಮಾಡುತ್ತಾರೆ. ಆ ನಿಟ್ಟಿನಲ್ಲೂ ನೀವು ಬಹಳ ಮಟ್ಟಿಗೆ ಹೋರಾಟವನ್ನು ಮಾಡಿ, ಹೆಚ್ಚಿನ ಹಣವನ್ನು ತುಂಬಿ, ಆ ನಿಟ್ಟಿನಲ್ಲಿ ಕೆಲಸವನ್ನು ಮಾಡಬೇಕಾಗುತ್ತದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಎಲ್ಲಿ ಹೋದರೂ M.L.A.ಗಳು ಬಯ್ಯಿಸಿಕೊಳ್ಳುವ ಇನ್ನೊಂದು ವಿಚಾರವಿದೆ. ಅದು ಡಾಕ್ಟರ್‌ಗಳ ಕೊರತೆ. ರೂಲಿಂಗ್ ಪಾರ್ಟಿಯವರಾದ ನಿಮಗೂ ಬಯ್ಯುತ್ತಾರೆ, ನಮಗೂ ಬಯ್ಯುತ್ತಾರೆ. ಸುಮ್ಮನೆ ಏಕೆ ruling party ಎಂದು defend ಮಾಡಿಕೊಳ್ಳಲು ಹೋಗುತ್ತೀರಿ? ಅದನ್ನು ನೀವು defend ಮಾಡಿಕೊಳ್ಳುವುದಲ್ಲ. ನನ್ನ ಕ್ಷೇತ್ರದಲ್ಲಿ 8–10 ಜನ ಡಾಕ್ಟರ್‌ಗಳ ಹುದ್ದೆಗಳು ಖಾಲಿ ಇವೆ. ಡಾಕ್ಟರೇ ಇಲ್ಲದ ಮೇಲೆ ಆಸ್ಪತ್ರೆಗಳು ಏಕೆ ಬೇಕು? 108 ಆರೋಗ್ಯ ಕವಚ ವಾಹನದಲ್ಲಿ ಜನರನ್ನು ಹೇರಿಕೊಂಡು ಎಲ್ಲಿಗಾದರೂ ತೆಗೆದುಕೊಂಡು ಹೋಗಬೇಕಷ್ಟೇ. ಈ ರೀತಿಯ ಪರಿಸ್ಥಿತಿ ಇದೆ. ಆದ್ದರಿಂದ, ದಯವಿಟ್ಟು ಡಾಕ್ಟರ್‌ಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ಒಂದು ವ್ಯವಸ್ಥೆ ಮಾಡಿ.

ಇದರ ಜೊತೆಗೆ, ಬಹಳ ಪ್ರಮುಖವಾಗಿ ಆಗಬೇಕಾಗಿರತಕ್ಕ ಇನ್ನೊಂದು ಅಂಶವೆಂದರೆ ನರ್ಸ್‌ಗಳು ಕೇಂದ್ರ ಸ್ಥಾನದಲ್ಲಿ ಇರಬೇಕು. World bankನಲ್ಲಿ ಸಾಲ ತೆಗೆದುಕೊಂಡು ಎಲ್ಲ ಕಡೆ ವಸತಿ ಗೃಹಗಳನ್ನು

ಕಟ್ಟಿ, ಅಲ್ಲಿ ನರ್ಸ್‌ಗಳು ವಾಸ ಇರಬೇಕು ಎಂದು ಹೇಳಿದಿರಿ. ಹೆರಿಗೆ ನೋವು ರಾತ್ರಿ 12 ಗಂಟೆಗೆ ಬರುತ್ತದೋ, 3 ಗಂಟೆಗೆ ಬರುತ್ತದೋ ಯಾರಿಗೂ ಗೊತ್ತಾಗುವುದಿಲ್ಲ. ಅಂಥ ಸಂದರ್ಭದಲ್ಲಿ ನರ್ಸ್‌ಗಳು ಅಲ್ಲಿ ವಾಸವಿದ್ದರೆ, ಅವರ ಬಳಿ ಹೋಗಿ treatment ತೆಗೆದುಕೊಳ್ಳಬಹುದು. ಆದರೆ ನರ್ಸ್‌ಗಳ್ಯಾರೂ ಅವರ ಒಂದು ಯೂನಿಟ್ ಅಥವಾ ಕೇಂದ್ರ ಸ್ಥಾನದಲ್ಲಿ ಇರುವುದಿಲ್ಲ. ಆದ್ದರಿಂದ, ಕೇಂದ್ರ ಸ್ಥಾನದಲ್ಲಿ village accountant, ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಒಬ್ಬ lineman ಮತ್ತು ಒಬ್ಬರು ನರ್ಸ್ ಇಷ್ಟು ಜನರೂ ಇರಬೇಕು. ಗ್ರಾಮ ಸ್ವರಾಜ್ಯದ ಕನಸೇನಾದರೂ ನನಸಾಗಬೇಕೆಂದಿದ್ದರೆ, ಈ ನಾಲ್ಕು ಜನರು ಕೇಂದ್ರ ಸ್ಥಾನದಲ್ಲಿದ್ದರೆ ಮಾತ್ರ ಸಾಧ್ಯವಾಗುತ್ತದೆ. ಕರೆಂಟಿನ ಅಭಾವದ ಈ ಕಾಲದಲ್ಲಿ linemanಗಳು ಇಲ್ಲದೇ ಹೋದರೆ, fuse ಹೋಗಿದ್ದರೆ ಅದನ್ನು ಹಾಕುವುದಕ್ಕೆ ಹೋಗಿ ಜನ ಸಾಯುತ್ತಾರೆ. ಇಂಥ ಎಷ್ಟೋ ಗಂಡಾಂತರಗಳನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ lineman ಅಲ್ಲಿರಬೇಕು. ಈ ನಾಲ್ಕು ಜನರು ಗ್ರಾಮಗಳಿಗೆ ಅತಿ ಅವಶ್ಯಕವಾಗಿ ಬೇಕಾದಂಥವರು. ಈ ನಾಲ್ಕು ಜನರು head quarters ನಲ್ಲಿರುವಂಥ ಒಂದು ಕಟ್ಟಾಜ್ಞೆಯ ಕಾನೂನನ್ನು ಸರ್ಕಾರದವರು ದಯಮಾಡಿ ತರಬೇಕು ಎನ್ನುವ ಸಲಹೆಯನ್ನು ನಾನು ಈ ಸಂದರ್ಭದಲ್ಲಿ ಅವರಿಗೆ ಕೊಡಲಿಕ್ಕೆ ಬಯಸುತ್ತೇನೆ.

ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ ಎಂದು ನನಗೆ ಗೊತ್ತು. ಆದ್ದರಿಂದ ಹೆಚ್ಚಿಗೆ ಟೈಂ ತೆಗೆದುಕೊಳ್ಳುವುದಿಲ್ಲ. ಇವತ್ತು ನಾವು ಏನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ, ಇವುಗಳಿಗೆ ಸರ್ಕಾರ ಹೆಚ್ಚಿನ ರೀತಿಯಲ್ಲಿ ಗಮನ ಕೊಡಬೇಕು. ನೀವು ಸರಿಯಾಗಿ ಸರ್ಕಾರ ನಡೆಸುವುದಿಲ್ಲ, ನಿಮಗೆ ಆ ಯೋಗ್ಯತೆಯಿಲ್ಲ, ನೀವು ಬಿಟ್ಟು ಹೋಗಿ ಎಂದು ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಹೇಳಿದ್ದಾರೆ. ಮತ್ತೆ ನಾನು ಅದನ್ನೇ ಉಚ್ಚಾರ ಮಾಡಿದರೆ ನಿಮಗೆಲ್ಲ ಕಣ್ಣು ಕೆಂಪಗಾಗುತ್ತವೆ. ಆದ್ದರಿಂದ ಆ ಮಾತುಗಳನ್ನು ನಾನು ಹೇಳುವುದಿಲ್ಲ. ಏಕೆಂದರೆ ನಾನು

ಮೊದಲನೇ ಸಲ ಗೆದ್ದು ಬಂದಿದ್ದೇನೆ. ಇವನು ಯಾರು ಹೀಗೆ ಕಠೋರವಾಗಿ ಮಾತನಾಡುತ್ತಾನೆ ಎನ್ನುವುದು ಬೇಡ. ದಯಮಾಡಿ ತಿದ್ದಿಕೊಂಡು ಹೋಗೋಣ. ಒಟ್ಟಿನಲ್ಲಿ ಈ ರಾಜ್ಯ ಉದ್ಧಾರವಾಗಬೇಕು. ಅದನ್ನು ಬಿಟ್ಟು ಆರೋಪ, ಪ್ರತ್ಯಾರೋಪವನ್ನು ಮಾಡಿಕೊಂಡು, ಮಾಡಿದ ಆರೋಪವನ್ನು ಮತ್ತ್ಯಾರ ಮೇಲಾದರೂ ತಳ್ಳಿಕೊಂಡು ಹೋಗಬಾರದು. ಇದು ಹಕ್ಕುಚ್ಯುತಿಯಾಗಿದೆ ಎನ್ನುವುದು ನನ್ನ ಭಾವನೆ. ಅದನ್ನು ಅಧ್ಯಕ್ಷರಿಗೆ ಬಿಡುತ್ತೇನೆ. ಮುಖ್ಯಮಂತ್ರಿಗಳು ಹಕ್ಕುಚ್ಯುತಿಯನ್ನು ಮಾಡಿದ್ದಾರೆ ಎನ್ನುವುದು ನನ್ನ ಅಭಿಪ್ರಾಯ. ಆದರೆ ಅದನ್ನು ಪರಾಮರ್ಶೆ ಮಾಡುವುದು ಅಧ್ಯಕ್ಷರಾದ ನಿಮಗೆ ಬಿಟ್ಟದ್ದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಂಥ ನಿಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಭೋಜನ ವಿರಾಮಕ್ಕಾಗಿ ಸದನವನ್ನು ಮಧ್ಯಾಹ್ನ 1.55ಕ್ಕೆ ಮುಂದೂಡಿ, ಪುನ: ಮಧ್ಯಾಹ್ನ 3.00 ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಲಾಯಿತು)

(ಸದನವು ಮಧ್ಯಾಹ್ನ 3–10 ಗಂಟೆಗೆ ಸಮಾವೇಶಗೊಂಡಿತು)

(ಸನ್ಮಾನ್ಯ ಸಭಾಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇಲ್ಲಿ ಚರ್ಚೆ ಮಾಡುವಾಗ ಮಂತ್ರಿಗಳು ಇರಬೇಕು. ಆದರೆ, ಸಚಿವರಾರೂ ಕಾಣುತ್ತಿಲ್ಲ. ಪ್ರತಿ ದಿನ ಇದನ್ನೇ ಹೇಳುವುದು ನಮಗೆ ಬೇಸರವಾಗಿಬಿಟ್ಟಿದೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) : ಸಚಿವರು ಬರುತ್ತಾರೆ.

ಅಧ್ಯಕ್ಷರು: ಸಚಿವರನ್ನು ಕರೆಸಿ.